# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 1 (68)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:54, ರ ವ್ಯಾಪ್ತಿಯಲ್ಲಿ ಬರುವ ಬನಶಂಕರಿ 3ನೇ ಹಂತ, 2ನೇ ಘಟ್ಟದ ಪ್ರದೇಶಕ್ಕೆ "ಶ್ರೀ ಹೊಯ್ಸಳ ನಗರ" ಎಂದು ಮನರ್ ನಾಮಕರಣ ಮಾಡುವ ಬಗ್ಗೆ ಶ್ರೀ.ಎಲ್.ಎ. ರವಿ ಸುಬ್ರಮಣ್ಯ ಶಾಸಕರು, ಬಸವನಗುಡಿ ವಿಧಾನ ಸಭಾ ಕ್ಷೇತ್ರ ರವರು ಬನಶಂಕರಿ 3ನೇ ಹಂತ, 2ನೇ ಘಟ್ಟ ಕ್ಷೇಮಾಭಿವೃದ್ಧಿ ಸಂಘ (ರಿ) ಹಾಗೂ ಮಹಿಳಾ ಅಭ್ಯುದಯ ಸಂಘ (ರಿ) ರವರುಗಳು ಸಲ್ಲಿಸಲಾಗಿರುವ ಮನವಿಯ ಸಂಬಂಧ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 54 ರ ವ್ಯಾಪ್ತಿಯಲ್ಲಿ ಬರುವ ಬನಶಂಕರಿ 3ನೇ ಹಂತ, 2ನೇ ಘಟ್ಟದಲ್ಲಿ ಬರುವ 4, 6 ಮತ್ತು 7ನೇ ಬ್ಲಾಕ್‌ಗಳಲ್ಲಿ ಸುಮಾರು 1000 ವಾಸದ ಮನೆಗಳು ಇದ್ದು ಈ ಬಡಾವಣೆಯಲ್ಲಿ ಶ್ರೀ ಶಕ್ತಿ ಗಣಪತಿ ದೇವಸ್ಥಾನವು ಹೊಯ್ಸಳ ಶೈಲಿಯಲ್ಲಿ ನಿರ್ಮಾಣ ಮಾಡಿರುವುದರಿಂದ ಈ ಬಡಾವಣೆಯ ನಿವಾಸಿಗಳು "ಶ್ರೀ ಹೊಯ್ಸಳ ನಗರ" ಎಂದು ಪುನರ್ ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಸದರಿ ಪ್ರದೇಶದ 1 ಎ ಮತ್ತು 1ನೇ ಬಿ ಮುಖ್ಯ ರಸ್ತೆಯಲ್ಲಿನ ನಾಗರೀಕ ಸೌಲಭ್ಯ ನಿವೇಶನದಲ್ಲಿ ಶ್ರೀ ಶಕ್ತಿ ಗಣಪತಿ ದೇವಸ್ಥಾನವಿದ್ದು, ಸದರಿ ದೇವಸ್ಥಾನವು ಹೊಯ್ಸಳ ಶೈಲಿಯ ಮಾದರಿಯಲ್ಲಿ ನಿರ್ಮಾಣ ಮಾಡಿರುತ್ತಾರೆ.

ಈ ಬಗ್ಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 76 ಮಂದಿ ಒಪ್ಪಿಗೆ ಸೂಚಿಸಿದ್ದು, ವಿರೋಧವಾಗಿ ಯಾರು ವ್ಯಕ್ತಪಡಿಸಿರುವುದಿಲ್ಲ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ, ಅದನ್ನು ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯು ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 54 ರ ವ್ಯಾಪ್ತಿಯಲ್ಲಿ ಬರುವ ಬನಶಂಕರಿ 3ನೇ ಹಂತ, 2ನೇ ಘಟ್ಟದ ಪ್ರದೇಶಕ್ಕೆ "ಶ್ರೀ ಹೊಯ್ಸಳ ನಗರ" ಎಂದು ಪುನರ್ ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಗೆ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:22-07-2010 ರ ಟಿಪ್ಪಣಿ.

............................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 2 (158)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Providing chainlink fencing mesh fencing to Devasandra kere, Chikkabasavanapura kere, Garudachar palya kere-1, Saradaramangala kere, Hoodikere ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-2) ರವರು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 04 ಟೆಂಡರ್‌ಗಳು ಸ್ವೀಕೃತವಾಗಿದ್ದು, ಕನಿಷ್ಠ ಟೆಂಡರ್‌ದಾರರಾದ ಶ್ರೀ. ಎಂ.ರಾಜೇಂದ್ರ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.450.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2009-10 ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು (ಯೋಜನೆ-2) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.4,47,40,786.40 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ. ಎಂ.ರಾಜೇಂದ್ರ ರವರು ಶೇಕಡ 7.27 ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ-2) ರವರು ಅನುಮೋದನೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.4,14,89,110.68 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಟಿ.ಟಿ/335/ಎಮ್‌ಎನ್‌ಯು/ 2007(ಭಾ) ದಿನಾಂಕ:11-05-2009 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ, ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. ಎಂ.ರಾಜೇಂದ್ರ ರವರು 2009-10 ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಾದ ಶೇಕಡ 7.27% ರಷ್ಟು ಕಡಿಮೆ ದರಗಳು ಅಥವಾ ರೂ.4,14,89,110.68 (ನಾಲ್ಕು ಕೋಟಿ ಹದಿನಾಲ್ಕು ಲಕ್ಷದ ಎಂಭತ್ತೊಂಭತ್ತು ಸಾವಿರದ ಒಂದು ನೂರ ಹತ್ತು ಮತ್ತು ಅರವತ್ತೆಂಟು ಪೈಸೆಗಳು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಸಂಬಂಧ ಸದರಿ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:608/09-10, ದಿನಾಂಕ:18-03-2010 ರಂದು ಅನುಮೋದನೆ ನೀಡಿರುತ್ತಾರೆ.

ಮುಂದುವರೆದಂತೆ, ದಿನಾಂಕ:28-10-10 ರಂದು ಕೆ.ಎಂ.ಸಿ.ಕಾಯ್ದೆ 1976 ರೂಲ್ 51 ರ ಅನ್ವಯ ಸದರಿ ಕಡತವನ್ನು ಮಹಾನಗರ ಪಾಲಿಕೆ ಸಭೆಯ ಪುನರ್ ಪರಿಶೀಲನೆಗಾಗಿ ಮಂಡಿಸುವಂತೆ ಶ್ರೀ ಎಂ.ನಾಗರಾಜ್, ಮಾನ್ಯ ವಿರೋಧ ಪಕ್ಷದ ನಾಯಕರು ಕೋರಿರುವ ಹಿನ್ನಲೆಯಲ್ಲಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ರೂಲ್-51 ರ ಅಡಿಯಲ್ಲಿ ಕಡತವನ್ನು ಪುನರ್ ಪರಿಶೀಲನೆಗಾಗಿ ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-12-2010 ರ ಟಿಪ್ಪಣಿ.

..........................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾವನೆಯನ್ನು ಕೈ ಬಿಡಲು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 3 (178)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿರುವ ಪ್ರಾಣಿಗಳ ವಧಾಗಾರಗಳ ಹಾಲಿ ಸ್ಥಿತಿಗತಿಗಳ ಬಗ್ಗೆ ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿನ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ಕರ್ನಾಟಕ ಉಚ್ಚ ನ್ಯಾಯಾಲಯವು ಆದೇಶ ನೀಡಿರುತ್ತದೆ. ನ್ಯಾಯಾಲಯದ ಆದೇಶವನ್ನು ಅನುಷ್ಠಾನಕ್ಕೆ ತರುವಲ್ಲಿ ವಿಳಂಭವಾಗಿದ್ದು, ನ್ಯಾಯಾಲಯಕ್ಕೆ 2 ತಿಂಗಳಿಗೊಮ್ಮೆ ಈ ಬಗ್ಗೆ ಕೆಲಸದ ಪ್ರಗತಿಯನ್ನು ತಿಳಿಸಬೇಕಾಗಿತ್ತು.

ನಗರದಲ್ಲಿನ ಪ್ರಾಣಿಗಳ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಸ್ಥಳವನ್ನು ಗುರುತಿಸಲು ಘನ ಸರ್ಕಾರವು ಒಂದು ಅಧಿಕಾರಿಗಳ ತಂಡವನ್ನು ರಚಿಸಿದ್ದು, ಈ ತಂಡವು ಹಲವು ಸ್ಥಳಗಳನ್ನು ಪರಿಶೀಲಿಸಿ ಅಂತಿಮವಾಗಿ ಆನೇಕಲ್ (ತಾ), ಇಗ್ಗಲೂರು ಗ್ರಾಮದಲ್ಲಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ 40.28 ಎಕರೆ ಜಾಗವನ್ನು ವಧಾಗಾರ ಸ್ಥಾಪಿಸಲು ಸೂಕ್ತ ಜಾಗವೆಂದು ತೀರ್ಮಾನಿಸಲಾಗಿತ್ತು.

ಈ ಕಾಮಗಾರಿಗೆ ಅಗತ್ಯ ಯೋಜನೆ ವರದಿ, ಇಐಎ ಅಧ್ಯಯನ, ಗುತ್ತಿಗೆದಾರರ ನೇಮಕಾತಿಗೆ ಸಂಬಂಧಿಸಿದಂತೆ ಹಾಗೂ ಯೋಜನೆಗೆ ಸಂಬಂಧಿಸಿದ ರೂಪುರೇಷೆಗಳನ್ನು ತಯಾರಿಸಿರುವ ಕೆಲಸವನ್ನು ಮೆ॥ ಐಡೆಕ್ ಸಂಸ್ಥೆಯವರಿಗೆ ವಹಿಸಲಾಗಿತ್ತು. ಸಂಸ್ಥೆಯವರು ಯೋಜನೆ ವರದಿ ಹಾಗೂ ಆರ್.ಎಫ್.ಪಿ ಗಳನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಅದರಂತೆ, ಈ ಸ್ಥಳದಲ್ಲಿ ಆಧುನಿಕ ಸೌಲಭ್ಯಗಳನ್ನೊಳಗೊಂಡ ಪ್ರಾಣಿಗಳ ವಧಾಗಾರವನ್ನು ವಿನ್ಯಾಸಗೊಳಿಸಿ ನಿರ್ಮಿಸಿ ಹಸ್ತಾಂತರಿಸುವ (ಡಿ.ಬಿ.ಓ.ಟಿ) ಆಧಾರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿ ಪಾಲಿಕೆಯಿಂದ ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನಲ್ಲಿ ಕನ್ಸೊರಿಯಂ ಆಫ್ ಚೆನ್ನೈ ಅಬಟಾಯರ್ ಪ್ರೈ.ಲಿ ಮತ್ತು ಎಸ್.ಎ.ಜಿ.ಆರ್.ಆರ್. ಇನ್‌ಫ್ರಾ ಲಿ., ರವರು ಏಕೈಕ ಬಿಡ್‌ದಾರರಾಗಿದ್ದು, ಇವರ ಕನಿಷ್ಠ ಸಂಧಾನಿತ ಟೆಂಡರ್ ಅನ್ನು ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿತ್ತು.

ಘನ ಸರ್ಕಾರವು ಆದೇಶದ ಸಂಖ್ಯೆ:ಯುಡಿಡಿ/240/ಎಎನ್‌ವೈ/2007, ದಿನಾಂಕ:21-08-2007 ರಲ್ಲಿ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ.

ಅ) ಈ ಯೋಜನೆಯನ್ನು ಕನ್ಸೊರಿಯಂ ಆಫ್ ಚೆನ್ನೈ ಅಬಟಾಯರ್ ಪ್ರೈ. ಲಿ. ಮತ್ತು ಎಸ್.ಎ.ಜಿ.ಆರ್.ಆರ್. ಇನ್‌ಫ್ರಾ ಲಿಮಿಟೆಟ್ ರವರಿಗೆ ಡಿ.ಬಿ.ಓ.ಟಿ. ಮತ್ತು ಆನ್ಯುಟಿ ಆಧಾರದಲ್ಲಿ 15 ವರ್ಷಗಳ concession ಅವಧಿಗೆ ಆನೇಕಲ್ (ತಾ), ಇಗ್ಗಲೂರಿನಲ್ಲಿ ಗುರುತಿಸಿರುವ ಜಮೀನಿನಲ್ಲಿ ಸ್ಥಾಪಿಸಲು ಪ್ರತಿ ವರ್ಷ ರೂ.1425.00 ಲಕ್ಷ ಆನ್ಯುಟಿ ಫೀಯನ್ನು ಪಾವತಿಸಲು ಅನುಮೋದನೆ ದೊರೆತಿರುತ್ತದೆ.

ಆ) ಈ ಯೋಜನೆ ಪ್ರಾರಂಭದಲ್ಲಿ ಮೊದಲ ಮತ್ತು ಎರಡನೇ ವರ್ಷದ ಅಂತ್ಯದಲ್ಲಿ ಪ್ರತಿ ವರ್ಷ ಕ್ರಮವಾಗಿ ರೂ.500.00 ಲಕ್ಷಗಳನ್ನು ಆಫ್ ಫ್ರಂಟ್ ಫೀಯನ್ನು ಬಿಡ್ಡುದಾರರಿಗೆ ಪಾವತಿ ಮಾಡಲು ಅನುಮೋದನೆ ದೊರೆತಿರುತ್ತದೆ.

..........................2

ಇ) ಈ ಯೋಜನೆಗೆ ಬೇಕಾಗಿರುವ ನೀರು ಮತ್ತು ವಿದ್ಯುತ್‌ಅನ್ನು ಸರಬರಾಜು ಮಾಡಲು ಒದಗಿಸಬೇಕಾಗಿರುವ ಕೊಳವೆ ಮಾರ್ಗ ಮತ್ತು ವಿದ್ಯುತ್ ತಂತಿ ಇತ್ಯಾದಿಗಳ ವೆಚ್ಚವನ್ನು ಪಾಲಿಕೆಯಿಂದ ಭರಿಸಿ, ಬೆಂಗಳೂರು ನೀರು ಸರಬರಾಜು ನಿಗಮ ಮಂಡಳಿ ಮತ್ತು ಬೆಸ್ಕಾಂ ಸಂಸ್ಥೆಗಳಿಗೆ ಪಾವತಿ ಮಾಡಲು ಅನುಮೋದನೆ ದೊರೆತಿರುತ್ತದೆ.

ಅದರಂತೆ, ಬಿಡ್ಡುದಾರರ ಜೊತೆಯಲ್ಲಿ ಗುತ್ತಿಗೆ ಕರಾರನ್ನು ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಯಿತು. ಈ ಸಮಯದಲ್ಲಿ ಬಿಡ್ಡುದಾರರು ತಾವು ಕೋಟ್ ಮಾಡಿದ್ದ ದರಗಳು ಸುಮಾರು 2 ವರ್ಷಗಳ ಹಿಂದಿನದಾಗಿದ್ದು, ಹಾಲಿ ಮಾರುಕಟ್ಟೆಯಲ್ಲಿ ಕಟ್ಟಡ ಸಾಮಗ್ರಿಗಳು ಹಾಗೂ ಯಂತ್ರೋಪಕರಣ ದರಗಳು ತುಂಬಾ ಹೆಚ್ಚಾಗಿದ್ದು, ಒಟ್ಟು ಯೋಜನಾ ವೆಚ್ಚ ಅಧಿಕವಾಗುವುದರಿಂದ ಹಾಲಿ ದರಗಳು ಮತ್ತು ಕೋಟ್ ಮಾಡಿದ ದರಗಳ ವ್ಯತ್ಯಾಸ ಮೊತ್ತವನ್ನು ನೀಡಬೇಕೆಂದು ಕೋರಿರುತ್ತಾರೆ. ಬಿಡ್ಡುದಾರರು ಹಾಲಿ ದರಗಳ ಆಧಾರದಲ್ಲಿ ಒಟ್ಟು ಯೋಜನೆಯ ವೆಚ್ಚವನ್ನು ರೂ.64.2 ಕೋಟಿ ಎಂದು ಅಂದಾಜಿಸಿದ್ದು, ಈ ವೆಚ್ಚವನ್ನು ಪ್ರತಿ ವರ್ಷ ಪಾವತಿ ಮಾಡುವ ಆನ್ಯುಟಿ ಫೀಯನ್ನು ಅನುಮೋದನೆಯಾಗಿರುವ ರೂ.14.24 ಕೋಟಿಗಳಿಂದ ರೂ.22.35 ಕೋಟಿಗಳಿಗೆ ಹೆಚ್ಚಿಸಿ, 13 ವರ್ಷಗಳ ಕನ್ಸೆಷನ್ ಅವಧಿಗೆ ಪಾವತಿ ಮಾಡಲು ಕೋರಲಾಗಿತ್ತು.

ಇಗ್ಗಲೂರಿನಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಿಸಲು ಕ್ಷೇತ್ರದ ಶಾಸಕರಿಂದ ಹಾಗೂ ಸ್ಥಳೀಯರಿಂದ ಬಾರಿ ವಿರೋಧವಿದ್ದು ಹಾಗೂ ನಿರ್ಮಾಣ ಮಾಡುತ್ತಿದ್ದ ಕಾಂಪೌಂಡ್ ಗೋಡೆಯನ್ನು ಸಹ ಕೆಡವಿದ್ದರಿಂದ ಕೆಲಸವನ್ನು ಸ್ಥಗಿತಗೊಳಿಸಲಾಗಿತ್ತು.

ಈ ಮದ್ಯೆ ಬೆಂಗಳೂರು ನಗರದಲ್ಲಿರುವ ಪ್ರಾಣಿಗಳ ವಧಾಗಾರವನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಕೋರಿ ಶ್ರೀ. ಬಿ.ಕೃಷ್ಣಭಟ್ ರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆ ಸಂಖ್ಯೆ:5709/1997 (ALT-PIL) ರಲ್ಲಿ ಗೌರವಾನ್ವಿತ ನ್ಯಾಯಾಲಯವು ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಪ್ರಾಣಿಗಳ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ನೀಡಿದ ಆದೇಶವನ್ನು ಅನುಷ್ಠಾನಕ್ಕೆ ತರುವಲ್ಲಿ ವಿಳಂಬವಾದ್ದರಿಂದ, ನ್ಯಾಯಾಲಯ ನಿಂದನಾ ಮೊಕದ್ದಮೆಯನ್ನು ದಾವೆ ಸಂಖ್ಯೆ:541/2008 ರಂತೆ ಹೂಡಲಾಗಿತ್ತು.

ಈ ಯೋಜನೆ ಶೀಘ್ರವಾಗಿ ಆಗಬೇಕಾಗಿರುವುದರಿಂದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರು ದಿನಾಂಕ:26-12-2008 ರಂದು ನಡೆಸಿದ ಸಭೆಯಲ್ಲಿ ಬಿಡ್‌ದಾರರಿಗೆ ಮೊದಲನೆಯ ವರ್ಷದ ಅಪ್ರಾಂಟ್ ಫೀ ಅನ್ನು ಮೊದಲೇ ಬ್ಯಾಂಕ್ ಗ್ಯಾರಂಟಿ ಪಡೆದು ಮೊಬಿಲೈಸೇಷನ್ ಮುಂಗಡ ಹಣವಾಗಿ ಪಾವತಿಸಲು ಸೂಚಿಸಲಾಗಿತ್ತು.

ಕರ್ನಾಟಕ ಉಚ್ಚ ನ್ಯಾಯಾಲಯವು ನ್ಯಾಯಾಲಯ ನಿಂದನಾ ಮೊಕದ್ದಮೆ ಸಂಖ್ಯೆ:541/2008 ರಲ್ಲಿ ಬಿಡ್‌ದಾರರ ಒಪ್ಪಿಗೆ ಪಡೆದು, ಇಗ್ಗಲೂರು ಬದಲಿಗೆ ಕನಕಪುರ ತಾಲ್ಲೂಕು ಹಾರೋಹಳ್ಳಿಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆರವರು ಬಿ.ಬಿ.ಎಂ.ಪಿ. ಗೆ ಹಂಚಿಕೆ ಮಾಡಿರುವ ಪ್ಲಾಟ್ ಸಂಖ್ಯೆ:140 ಹಾಗೂ 141 ರಲ್ಲಿ ಕಸಾಯಿಖಾನೆ ನಿರ್ಮಿಸಲು ನಿರ್ದೇಶನ ನೀಡಿದೆ.

ಆಧುನಿಕ ಕಸಾಯಿಖಾನೆ ನಿರ್ಮಿಸಲು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅರ್ಜಿ ಸಲ್ಲಿಸಿದ ಮೇರೆಗೆ ಕನಕಪುರ (ತಾ) ಹಾರೋಹಳ್ಳಿ 2ನೇ ಫೇಸ್‌ನಲ್ಲಿ ಕರ್ನಾಟಕ ಕೈಗಾರಿಕಾ

..........................3

ಪ್ರದೇಶಾಭಿವೃದ್ಧಿ ಮಂಡಳಿಯವರು ಫ್ಲಾಟ್ ಸಂಖ್ಯೆ:140 ಹಾಗೂ 141 ರಲ್ಲಿ 40 ಎಕರೆ ಜಮೀನಿಗೆ 24.00 ಕೋಟಿ ರೂಪಾಯಿ ನಿಗಧಿಪಡಿಸಿ ಹಂಚಿಕೆ ಮಾಡಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 4.80 ಕೋಟಿ ರೂಪಾಯಿ ಮೊದಲ ಕಂತಿನ ಹಣವನ್ನು ಪಾವತಿಸಿದ ನಂತರ ಕೆ.ಐ.ಎ.ಡಿ.ಬಿ. ಸಂಸ್ಥೆರವರು ಸದರಿ ಜಾಗವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದಿನಾಂಕ:13-11-2009 ರಂದು ಹಸ್ತಾಂತರಿಸಿರುತ್ತಾರೆ. ಈ ವಿಷಯವನ್ನು ನ್ಯಾಯಾಲಯಕ್ಕೆ ತಿಳಿಸಿದ ನಂತರ, ಸದರಿ ನ್ಯಾಯಾಲಯವು ನಿಂದನಾ ಮೊಕದ್ದಮೆಯನ್ನು ಕೈ ಬಿಡಲಾಗಿತ್ತು.

ಈ ಮಧ್ಯೆ ಕನಕಪುರ (ತಾ) ಹಾರೋಹಳ್ಳಿಗೆ ಆಧುನಿಕ ಕಸಾಯಿಖಾನೆ ನಿರ್ಮಿಸಲು ಸ್ಥಳ ಬದಲಾವಣೆಯಾಗಿ ಮತ್ತಷ್ಟು ವಿಳಂಭವಾದ್ದರಿಂದ, ಬಿಡ್‌ದಾರರು 22.35 ಕೋಟಿಗಳ ಆನ್ಯುಟಿಯನ್ನು ನೀಡಬೇಕೆಂದು ತಮ್ಮ ಪತ್ರದಲ್ಲಿ ಕೋರಿರುವ ಮೇರೆಗೆ ಆನ್ಯುಟಿ ಫೀಯನ್ನು ಪರಿಷ್ಕರಿಸಲು ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ, ಸದರಿ ಸಮಿತಿಯ ದಿನಾಂಕ:21-01-2010 ರಂದು ನಡೆದ ಸಭೆಯ ನಡವಳಿಗಳ ಪ್ರಕಾರ ರೂ.21.00 ಕೋಟಿಗಳ ಆನ್ಯುಟಿ ಫೀಯನ್ನು ನಿಗಧಿಪಡಿಸಲಾಗಿತ್ತು. ತದನಂತರ ಮಾನ್ಯ ಆಡಳಿತಗಾರರು ಆನ್ಯುಟಿ ಫೀಯನ್ನು ಹೊರ ಸಲಹೆಗಾರರಿಂದ ಮೌಲೀಕರಿಸಲು ಸೂಚಿಸಿರುವ ಮೇರೆಗೆ ದಿನಾಂಕ:01-03-2010 ರಂದು ಈ ಯೋಜನೆಯ ಸಲಹೆಗಾರರಾದ ಮೆ॥ ಐಡೆಕ್ ಸಂಸ್ಥೆಯವರು ಮೌಲೀಕರಿಸಿ ರೂ.19.80 ಕೋಟಿಗಳ ಆನ್ಯುಟಿ ಫೀಯನ್ನು ನಿಗಧಿಪಡಿಸಿ ವರದಿ ನೀಡಿರುತ್ತಾರೆ. ಸದರಿ ಆನ್ಯುಟಿ ಫೀಗೆ ಬಿಡ್‌ದಾರರಾದ ಮೆ॥ ಚೆನ್ನೈ ಅಬಟಾಯರ್ ಪ್ರೈ.ಲಿ. ರವರು ದಿನಾಂಕ:01-03-2010 ರಂದು ಪತ್ರ ನೀಡಿ ಒಪ್ಪಿಕೊಂಡಿರುತ್ತಾರೆ. ಆದುದರಿಂದ, ಸದರಿ ಆನ್ಯುಟಿ ಫೀಗೆ ಅನುಮೋದನೆ ಪಡೆಯಬೇಕಾಗಿದೆ. ಸದರಿ ಆನ್ಯುಟಿ ಫೀ ನೀಡಲು ಅಧಿಕ ಹಣವನ್ನು ಪಾಲಿಕೆಯ ಆಯವ್ಯಯದಿಂದ ಭರಿಸಲಾಗುವುದು.

ನಗರದ ಇಗ್ಗಲೂರಿನ ಬದಲಿಗೆ ಕನಕಪುರ (ತಾ) ಹಾರೋಹಳ್ಳಿಯಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡುವುದಾಗಿ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ತಿಳಿಸಿರುವುದರಿಂದ, ನ್ಯಾಯಾಲಯ ನಿಂದನಾ ಮೊಕದ್ದಮೆಯನ್ನು ಕೈಬಿಡಲಾಗಿದೆ. ಅದರಿಂದಾಗಿ, ಕೂಡಲೇ ಈ ಯೋಜನೆಯನ್ನು ಪ್ರಾರಂಭಿಸಬೇಕಾಗಿದ್ದು, ಈಗಾಗಲೇ ಅನುಮೋದನೆಯಾಗಿರುವ ಆನ್ಯುಟಿ ಮೊತ್ತ ರೂ.14.25 ಕೋಟಿಗೆ ಬದಲಾಗಿ ರೂ.19.80 ಕೋಟಿಗಳಿಗೆ ಅನುಮೋದನೆಯನ್ನು ನೀಡುವ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರು ದಿನಾಂಕ:03-03-2010 ರಂದು ವಿಷಯದ ಸಂಖ್ಯೆ:591/2009-10 ರಲ್ಲಿ ಅನುಮೋದನೆಯನ್ನು ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕೆಳಕಂಡ ಪ್ರಸ್ತಾವನೆಗಳಿಗೆ ಘನ ಸರ್ಕಾರದ ಅನುಮೋದನೆಯನ್ನು ಕೋರಿ ದಿನಾಂಕ:04-03-2010 ರಂದು ಪತ್ರ ಬರೆಯಲಾಗಿತ್ತು.

1. ಸದರಿ ಯೋಜನೆಯನ್ನು ಕನ್ಸೊರಿಯಂ ಆಫ್ ಚೆನ್ನೈ ಅಬಟಾಯರ್ ಪ್ರೈ.ಲಿ. ಮತ್ತು ಎಸ್.ಎ.ಜಿ.ಆರ್.ಆರ್. ಇನ್‌ಫ್ರಾ ಲಿಮಿಟೆಡ್ ರವರಿಗೆ ಡಿ.ಬಿ.ಓ.ಟಿ ಮತ್ತು ಆನ್ಯುಟಿ ಆಧಾರದಲ್ಲಿ 15 ವರ್ಷಗಳ ಕನ್ಸೆಷನ್ ಅವಧಿಗೆ ಆನೇಕಲ್ (ತಾ) ಇಗ್ಗಲೂರು ಬದಲಿಗೆ ಕನಕಪುರ (ತಾ) ಹಾರೋಹಳ್ಳಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 2ನೇ ಫೇಸ್, ಫ್ಲಾಟ್ ಸಂಖ್ಯೆ:140 ಹಾಗೂ 141 ರಲ್ಲಿ ಗುರುತಿಸಿರುವ ಜಮೀನನ್ನು ಆಧುನಿಕ ಕಸಾಯಿಖಾನೆಯನ್ನು ಸ್ಥಾಪಿಸಲು ಪ್ರತಿ ವರ್ಷ ರೂ.1425.00 ಲಕ್ಷ ಆನ್ಯುಟಿ ಫೀಯನ್ನು ಪಾವತಿಸಲು ನೀಡಿರುವ ಅನುಮೋದನೆಯನ್ನು ಪರಿಷ್ಕರಿಸಿ, ಪರಿಷ್ಕೃತ ಆನ್ಯುಟಿ ಫೀಯನ್ನು ರೂ.1980.00 ಲಕ್ಷಗಳನ್ನು 13 ವರ್ಷಗಳ ಕನ್ಸೆಷನ್ ಅವಧಿಗೆ ಪಾವತಿ ಮಾಡಲು ಅನುಮೋದನೆ.

2. ಈ ಯೋಜನೆಯ ಪ್ರಾರಂಭದಲ್ಲಿ ಮೊದಲನೇ ವರ್ಷದ ಅಂತ್ಯದ ಬದಲು ಪ್ರಾರಂಭದಲ್ಲೇ ರೂ.500.00 ಲಕ್ಷಗಳ ಆಫ್ ಫ್ರಂಟ್ ಫೀಯನ್ನು ಇದೇ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಪಡೆದು ಬಿಡ್‌ದಾರರಿಗೆ ಮುಂಚಿತವಾಗಿ ಮೊಬಿಲೈಸೆಷನ್ ಮುಂಗಡ ಹಣವಾಗಿ ಪಾವತಿಸಲು ಅನುಮೋದನೆ.

3. ಟೆಂಡರ್ ಸಿಂಧುತ್ವ ಕಾಲಾವಧಿ ಈಗಾಗಲೇ ಮುಗಿದಿರುವುದರಿಂದ ಬಿಡ್‌ದಾರರ ಕೋರಿಕೆಯಂತೆ 2010 ನೇ ಜೂನ್ ತಿಂಗಳವರೆಗೆ ವಿಸ್ತರಿಸಲು ಅನುಮೋದನೆ.

ಸದರಿ ಪತ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರವು ದಿನಾಂಕ:20-07-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪತ್ರ ಬರೆದು, ಕೆಲವು ಅಂಶಗಳ ಬಗ್ಗೆ ಮಾಹಿತಿ ಸಲ್ಲಿಸಲು ಕೋರಲಾದ ಮೇರೆಗೆ ದಿನಾಂಕ:12-08-2010 ರಂದು ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ದಿನಾಂಕ:04-03-2010 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಸ್ತಾವನೆಗೆ ಸರ್ಕಾರವು ಆದೇಶ ಸಂಖ್ಯೆ:ನಅಇ/240/ಎಂಎನ್‌ವೈ/2007, ದಿನಾಂಕ:02-11-2010 ರಂತೆ ಅನುಮೋದನೆ ನೀಡಿರುತ್ತದೆ.

ದಿನಾಂಕ:18-12-2010 ರಂದು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರಗಳನ್ನು ಬರೆದು, ಆಧುನಿಕ ಕಸಾಯಿಖಾನೆ ನಿರ್ಮಿಸಲು ನಿರಾಪೇಕ್ಷಣೆ ಪತ್ರ ನೀಡುವಂತೆ ಕೋರಲಾಗಿತ್ತು. ಮುಂದುವರೆದಂತೆ, ದಿನಾಂಕ:22-12-2010 ರಂದು ಮೆ॥ಚೆನ್ನೈ ಅಬಟಾಯರ್ ಪ್ರೈ. ಲಿ. ರವರಿಗೆ ಪತ್ರ ಬರೆದು ಲೆಟರ್ ಆಫ್ ಅಕ್ಸೆಪ್ಟನ್ಸ್ ನೀಡಲಾಗಿದೆ.

ಮುಂದುವರೆದಂತೆ, ದಿನಾಂಕ:28-10-2010 ರಂದು ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 51 ರ ಅನ್ವಯ ಸದರಿ ಕಡತವನ್ನು ಮಹಾನಗರ ಪಾಲಿಕೆ ಸಭೆಯ ಪುನರ್ ಪರಿಶೀಲನೆಗಾಗಿ ಮಂಡಿಸುವಂತೆ ಶ್ರೀ.ಎಂ.ನಾಗರಾಜ್, ಮಾನ್ಯ ವಿರೋಧ ಪಕ್ಷ ನಾಯಕರು ಕೋರಿರುವ ಹಿನ್ನಲೆಯಲ್ಲಿ, ಕೆ.ಎಂ.ಸಿ. ಕಾಯ್ದೆ, 1976 ರ ನಿಯಮ 51 ರ ಅನ್ವಯ ಕಡತವನ್ನು ಪುನರ್ ಪರಿಶೀಲಿಸಿ ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-12-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾವನೆಯನ್ನು ಕೈ ಬಿಡಲು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

ಎಸ್.ಕೆ. ನಟರಾಜ

**(ಎಸ್.ಕೆ.ನಟರಾಜ)**

ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 4 (201)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಡಾ॥ ರಾಜ್‌ಕುಮಾರ್ ರಸ್ತೆ, ಯಶವಂತಪುರದಿಂದ ಓಕಳಿಪುರಂ ಜಂಕ್ಷನ್ ವರೆಗೆ ಸಿಗ್ನಲ್ ಫ್ರೀ ಕಾರಿಡಾರ್ ಯೋಜನೆಯಡಿಯಲ್ಲಿ Procurement of RCC Pre-cast box segments of 7.50mx4.50m for vehicular underpass along Dr.Rajkumar road from Yeshwanthpura to Okalipuram junction at 10th cross junction ರ ಕಾಮಗಾರಿಯ ಅಂದಾಜು ಮೊತ್ತ ರೂ.211 ಲಕ್ಷಗಳಾಗಿದ್ದು, ಟೆಂಡರ್ ನಿಯಮಾವಳಿ ಪ್ರಕಾರ M/s. Parichitha constructions ರವರಿಗೆ ಮಾನ್ಯ ಆಡಳಿತಗಾರರು, ವಿಷಯ ಸಂಖ್ಯೆ: 619/2009-10 ದಿನಾಂಕ:05-03-2010 ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ. ಅದರನ್ವಯ ಸದರಿ ಗುತ್ತಿಗೆದಾರರೊಂದಿಗೆ ಸಂಖ್ಯೆ: EE/MR/(SPL)/AG/03-10-11, ದಿನಾಂಕ: 15-04-2010 ರ ಕರಾರು ಒಪ್ಪಂದ ಮಾಡಿಕೊಂಡಿದ್ದು, ಕಾಮಗಾರಿ ನಿರ್ವಹಿಸಲು ದಿನಾಂಕ:15-04-2010 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ.

ಮುಂದುವರೆದಂತೆ, ದಿನಾಂಕ:28-10-2010 ರಂದು ಶ್ರೀ. ಎಂ.ನಾಗರಾಜ್, ವಿರೋಧ ಪಕ್ಷದ ನಾಯಕರು ಪತ್ರ ಬರೆದು ಕೆ.ಎಂ.ಸಿ. ಕಾಯ್ದೆ ರೂಲ್ 51 ರ (ರೂಲ್ 10 ಹಳೇಯದು) ಪ್ರಕಾರ ಸದರಿ ಕಡತವನ್ನು ಮಹಾನಗರ ಪಾಲಿಕೆ ಸಭೆಯ ತೀರ್ಮಾನಕ್ಕೆ ಪುನರ್ ಮಂಡಿಸುವಂತೆ ಕೋರಿರುವ ಹಿನ್ನಲೆಯಲ್ಲಿ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ರ ರೂಲ್-51 ರ ಅಡಿಯಲ್ಲಿ ಕಡತವನ್ನು ಪುನರ್ ಪರಿಶೀಲನೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:18-01-2011 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾವನೆಯನ್ನು ಕೈ ಬಿಡಲು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

ಎಸ್.ಕೆ.ನಟರಾಜ
(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 5 (202)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು/ಉಪ ಮಹಾಪೌರರು/ಸದಸ್ಯರುಗಳ ಮಾಸಿಕ ಗೌರವಧನವನ್ನು ಸರ್ಕಾರವು ದಿನಾಂಕ:08-09-1997 ರಲ್ಲಿ ನಿಗಧಿಪಡಿಸಿ ಆದೇಶ ಹೊರಡಿಸಿ, ತದನಂತರ ಈವರೆವಿಗೂ ಮಾಸಿಕ ಗೌರವಧನವನ್ನು ಸರ್ಕಾರವು ಪರಿಷ್ಕರಿಸದೇ ಇರುವುದರಿಂದ, ಪಾಲಿಕೆಯ ಮಹಾಪೌರರು/ಉಪ ಮಹಾಪೌರರು/ಸದಸ್ಯರುಗಳ ಮಾಸಿಕ ಗೌರವಧನವನ್ನು ಹೆಚ್ಚಿಸುವ ಬಗ್ಗೆ ಪಾಲಿಕೆಯ ಸಭೆಯ ದಿನಾಂಕ:29-06-2010 ರ ನಿರ್ಣಯದಂತೆ ಸರ್ಕಾರಕ್ಕೆ ದಿನಾಂಕ: 09-07-2010 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಸರ್ಕಾರವು ದಿನಾಂಕ:03-11-2010 ಮತ್ತು ದಿನಾಂಕ:05-01-2011 ರ ಆದೇಶಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು/ಉಪ ಮಹಾಪೌರರು/ಸದಸ್ಯರುಗಳಿಗೆ ಈ ಹಿಂದೆ ನೀಡಲಾಗುತ್ತಿದ್ದ ಮಾಸಿಕ ಗೌರವ ಧನವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಷರತ್ತುಗೊಳಪಡಿಸಿ ಆದೇಶಿಸಿರುತ್ತದೆ.

| ಕ್ರ.ಸಂ. | ಹುದ್ದೆ | ಪರಿಷ್ಕೃತ ಮಾಸಿಕ ಗೌರವಧನ (ರೂ.) |
|---|---|---|
| 1 | ಮಹಾಪೌರರು | 20,000/- |
| 2 | ಉಪ ಮಹಾಪೌರರು | 15,000/- |
| 3 | ಸದಸ್ಯರು | 7,500/- |
| | ಹಾಗೂ | |
| 4 | ಸ್ಥಾಯಿ ಸಮಿತಿ ಸದಸ್ಯರು (ಮಾಸಿಕ ರೂ.400.00 ಮೀರದಂತೆ) | 200/- |
| 5 | ಸದಸ್ಯರ ಸಭಾ ಭತ್ಯೆ ಪ್ರತಿ ಸಭೆಗೆ | 400/- |
| 6 | ಸದಸ್ಯರ ವಾಹನ ಭತ್ಯೆ | 1,000/- |

**ಷರತ್ತುಗಳು:**

1. ಗೌರವಧನದ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು, ಸರ್ಕಾರದಿಂದ ಸದರಿ ವಿಷಯದ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
2. ಮೇಲ್ಕಂಡ ಭತ್ಯೆಗಳನ್ನು ಹೊರತುಪಡಿಸಿ ಇತರೆ ಭತ್ಯೆಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ಆದೇಶಗಳನ್ವಯ ಭರಿಸತಕ್ಕದ್ದು.
3. ಸ್ಥಾಯಿ ಸಮಿತಿ ಸದಸ್ಯರು ತಿಂಗಳಲ್ಲಿ 02 ಮಾಸಿಕ ಸಭೆಯ ಭತ್ಯೆಗೆ ಮಾತ್ರ ಅರ್ಹರಿರುತ್ತಾರೆ.
4. 5 ವರ್ಷಗಳ ಅವಧಿಯವರೆಗೆ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ಸರ್ಕಾರವು ಹೆಚ್ಚಿಸುವುದಿಲ್ಲ. 5 ವರ್ಷಗಳ ನಂತರ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ಹೆಚ್ಚಿಸಬೇಕಾದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಪನ್ಮೂಲದ ಹೆಚ್ಚಳಕ್ಕನುಗುಣವಾಗಿ ಪರಿಶೀಲಿಸಲಾಗುವುದು.

ಸರ್ಕಾರವು ದಿನಾಂಕ:03-11-2010 ಮತ್ತು ದಿನಾಂಕ:05-01-2011 ರಂದು ಹೊರಡಿಸಿರುವ ಆದೇಶದಲ್ಲಿ ಪಾಲಿಕೆಯ ಮಹಾಪೌರರು/ಉಪ ಮಹಾಪೌರರು/ಸದಸ್ಯರುಗಳಿಗೆ ಈ ಮೇಲ್ಕಂಡಂತೆ ಷರತ್ತುಗೊಳಪಡಿಸಿ ಮಾಸಿಕ ಗೌರವಧನ ಪರಿಷ್ಕರಿಸಿರುವುದನ್ನು ಪಾಲಿಕೆ ಸಭೆಯ ದಾಖಲಾತಿಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ: 13-01-2011 ರ ಟಿಪ್ಪಣಿ.

..........................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:13–01–2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:13–01–2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 6 (204)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ನಿರ್ಮಾಣ ಮಾಡುವ ವಸತಿ/ ವಸತಿಯೇತರ ಕಟ್ಟಡಗಳಿಗೆ ನಕ್ಷೆ ಅನುಮೋದನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾಗುತ್ತಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ನಕ್ಷೆ ಅನುಮೋದನೆ ಪದ್ಧತಿಯನ್ನು ತ್ವರಿತಗೊಳಿಸಲು ಇನ್ನು ಮುಂದೆ ಆನ್‌ಲೈನ್ ಮುಖಾಂತರ ಕಟ್ಟಡ ನಕ್ಷೆ ಅನುಮೋದನೆಯನ್ನು ನೀಡಲು ಯೋಜನೆಯನ್ನು ಈಗಾಗಲೇ ರೂಪಿಸಲಾಗಿದೆ. ಸದರಿ ಸಾಫ್ಟ್‌ವೇರ್‌ಗೆ ತಗಲುವ ವೆಚ್ಚವನ್ನು CREDAI ಸಂಸ್ಥೆಯವರು ಪ್ರಾಯೋಜಿಸಲು ಒಪ್ಪಿರುತ್ತಾರೆ. ಸಾಫ್ಟ್‌ವೇರ್ ಅನ್ನು M/S. SoftTech Engineers Pvt. Ltd., ಸಂಸ್ಥೆಯವರು ಸಿದ್ಧಪಡಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಕೇಂದ್ರ ಕಛೇರಿ ಹಾಗೂ ವಲಯ ಕಛೇರಿಗಳಲ್ಲಿ ನಗರ ಯೋಜನೆ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ದಿನಾಂಕ: 12-07-2010 ರಿಂದ 14-07-2010 ರವರೆಗೆ ಐ.ಪಿ.ಪಿ. ಸಭಾಂಗಣದಲ್ಲು ಸುಮಾರು 80 ಜನರಿಗೆ 3 ದಿನಗಳ ತರಬೇತಿ ನೀಡಲಾಗಿರುತ್ತದೆ.

ಉದ್ದೇಶಿತ ಆನ್‌ಲೈನ್ ನಕ್ಷೆ ಅನುಮೋದನೆಯನ್ನು ಅತಿ ಶೀಘ್ರದಲ್ಲಿ ಪ್ರಾರಂಭಿಸಬೇಕಾಗಿರುವ ಹಿನ್ನಲೆಯಲ್ಲಿ ಹಾಗೂ 6 x 9, 9 x 12, 12 x 18 ಮೀ ಅಳತೆಯವರೆಗಿನ ಚಿಕ್ಕ ಚಿಕ್ಕ ನಿವೇಶನಗಳ ಮಾಲೀಕರು ಕಟ್ಟಡ ನಕ್ಷೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಿ, ಅನುಮೋದಿಸಿಕೊಳ್ಳಲು ಕಷ್ಟಸಾಧ್ಯವಾಗುವುದರಿಂದ, ಮಾಲೀಕರು ಸಲ್ಲಿಸುವ ಕಟ್ಟಡ ನಕ್ಷೆಯನ್ನು ಸಾಫ್ಟ್‌ವೇರ್‌ಗೆ ಅಳವಡಿಸುವ ಸಂಬಂಧ ಸರಳವಾಗುವಂತೆ ಮಾಡಲು ಪ್ರತಿ ವಲಯಕ್ಕೆ ಒಂದರಂತೆ ಎಂಟು ವಲಯಕ್ಕೆ ಎಂಟು ಹಾಗೂ ಕೇಂದ್ರ ಕಛೇರಿಯಲ್ಲಿನ ಜಂಟಿ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ಹಾಗೂ ಜಂಟಿ ನಿರ್ದೇಶಕರು (ನಗರ ಯೋಜನೆ-ಉತ್ತರ) ಕಛೇರಿಗಳಿಗೆ ಒಂದೊಂದರಂತೆ ಎರಡು ಹೀಗೆ ಒಟ್ಟು 10 ತಾಂತ್ರಿಕ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ / ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಅವಶ್ಯಕತೆ ಇದ್ದು, ಅವರ ವಿದ್ಯಾರ್ಹತೆಯು B.E (Civil / Architect) ಅಥವಾ D.C.E (Civil / Architect) ಯೊಂದಿಗೆ ಕನಿಷ್ಟ 2 ವರ್ಷಗಳ AutoCAD ನಲ್ಲಿ ಅನುಭವ ಹೊಂದಿರುವುದು ಅವಶ್ಯಕತೆ ಇರುತ್ತದೆ.

ವಲಯ ಕಛೇರಿಗಳಲ್ಲಿ ಸಣ್ಣ ಸಣ್ಣ ನಕ್ಷೆಗಳು ಅಂದರೆ 6 x 9, 9 x 12, 12 x 18 ಮೀ ಅಳತೆಯವರೆಗಿನ ನಕ್ಷೆಗಳ ಅನುಮೋದನೆಗೆ, 100, 200 ಮತ್ತು 300 ಚ.ಮೀವರೆಗಿನ ಪ್ರತಿ ಪರವಾನಗಿಗೆ ಅನುಕ್ರಮವಾಗಿ ರೂ. 250/-, 500/- ಮತ್ತು ರೂ.750/- ಗಳನ್ನು ಸಾರ್ವಜನಿಕರಿಂದ ಪಾವತಿಸಿ ಕೊಳ್ಳಬಹುದಾಗಿದೆ.

ಮೇಲ್ಕಂಡ ಕಾರಣದಿಂದ 10 ತಾಂತ್ರಿಕ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಅಥವಾ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ

..........................2

ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02-09-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತಾಂತ್ರಿಕ ಸಿಬ್ಬಂದಿಯವರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಬದಲಾಗಿ ನಗರ ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಪರಿಸರ ಅಭಿಯಂತರರ ಸೇವೆಯನ್ನು ಈ ಕಾರ್ಯಗಳಿಗೆ ಪಡೆಯುವುದೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯಾದ ನಂತರ, ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತಾಂತ್ರಿಕ ಸಿಬ್ಬಂದಿಯವರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಬದಲಾಗಿ ನಗರ ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಪರಿಸರ ಅಭಿಯಂತರರ ಸೇವೆಯನ್ನು ಈ ಕಾರ್ಯಗಳಿಗೆ ಪಡೆಯುವುದೆಂದು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು.

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 7 (205)/10-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಬಹುಮಹಡಿ ಕಟ್ಟಡಗಳಿಗೆ ವಲಯ ನಿಯಮಾವಳಿ ಹಾಗೂ ಬೈಲಾನುಸಾರ ನಕ್ಷೆ ಮಂಜೂರಾತಿ ನೀಡಿ, ಕಟ್ಟಡ ಪೂರ್ಣಗೊಂಡ ನಂತರ ಮತ್ತೊಮ್ಮೆ ಕಟ್ಟಡ ಪರಿವೀಕ್ಷಣೆ ಮಾಡಿ, ಅಗ್ನಿಶಾಮಕ ಇಲಾಖೆಯಿಂದ "ಕ್ಲಿಯರೆನ್ಸ್ ಸರ್ಟಿಫಿಕೇಟ್" ಆಧಾರದ ಮೇಲೆ ಸ್ವಾಧೀನಾನುಭವ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ. ಒಮ್ಮೆ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಿದ ನಂತರ ಕಾಲಕಾಲಕ್ಕೆ ಸದರಿ ಕಟ್ಟಡಗಳ ಅಗ್ನಿ ಸುರಕ್ಷತೆ/ವ್ಯತಿರಿಕ್ತ ನಿರ್ಮಾಣದ ಬಗ್ಗೆ ಪರಿವೀಕ್ಷಣೆ ಮಾಡಬೇಕಾಗಿರುತ್ತದೆ.

ಇತ್ತೀಚೆಗೆ ಬಹುಮಹಡಿ ಕಟ್ಟಡಗಳಲ್ಲಿ ಆಗಾಗ್ಗೆ ಅಗ್ನಿ ದುರಂತಗಳು ಸಂಭವಿಸುತ್ತಿದ್ದು, ಕಟ್ಟಡಗಳಲ್ಲಿ ಅಳವಡಿಸಲಾಗುತ್ತಿರುವ ಅಗ್ನಿ ಸುರಕ್ಷತಾ ಉಪಕರಣಗಳನ್ನು ಅಗ್ನಿ ದುರಂತ ಸಂಭವಿಸಿದ ಸಂದರ್ಭಗಳಲ್ಲಿ ಸುಸ್ಥಿತಿಯಲ್ಲಿಡದಿರುವುದು ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರದ ದಿನಗಳಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಮಾಪಾಡುಗಳನ್ನು ಮಾಡಿರುವುದು ಅಗ್ನಿಶಾಮಕ ಇಲಾಖೆ ಹಾಗೂ ಪಾಲಿಕೆಯ ಗಮನಕ್ಕೆ ಬಂದಿರುತ್ತದೆ. ಕಟ್ಟಡದ ಮಾಲೀಕರುಗಳು ಅಗ್ನಿ ಸುರಕ್ಷತಾ ಉಪಕರಣಗಳ ಸುಸ್ಥಿತಿ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದು ಸ್ಥಳ ಪರಿಶೀಲನೆಯಿಂದ ದೃಡಪಟ್ಟಿರುತ್ತದೆ. ಆದ್ದರಿಂದ, ಕೆ.ಎಂ.ಸಿ ಕಾಯ್ದೆಗೆ ಕೆಲವು ಉಪ ವಿಧಿಗಳನ್ನು ಸೇರಿಸಿ ಕಾನೂನು ರೂಪಿಸುವುದು ಅತ್ಯಗತ್ಯವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಕಟ್ಟಡದ ಮಾಲೀಕರುಗಳಿಗೆ ಕೆಲವು ಷರತ್ತುಗಳನ್ನು ವಿಧಿಸಿ, ಪಾಲಿಸಲು ಸೂಚಿಸಬೇಕಾದ ಅವಶ್ಯಕತೆ ಇದ್ದು, ಅಗ್ನಿಶಾಮಕ ಇಲಾಖೆಯಿಂದ ಅನುಮೋದಿಸಲ್ಪಟ್ಟ ಸಂಸ್ಥೆಗಳಿಂದ ಕಟ್ಟಡದ ಮಾಲೀಕರು/ಸಂಘಗಳು (ಅಸೋಸಿಯೇಷನ್) ಕಟ್ಟಡದಲ್ಲಿ ಅಳವಡಿಸಿರುವ ಅಗ್ನಿಶಾಮಕ ಉಪಕರಣಗಳನ್ನು ಸ್ವಯಂ ಪರಿವೀಕ್ಷಣೆ ಮಾಡಿಸಿ, ಪ್ರಮಾಣ ಪತ್ರ ಪಡೆದು, ಸಂಬಂಧಿತ ಇಲಾಖೆಗಳಿಗೆ ಸಲ್ಲಿಸುವುದು ಅವಶ್ಯಕವಾಗಿರುತ್ತದೆ. ಸ್ವತ್ತಿನ ಕಟ್ಟಡದ ಮಾಲೀಕರು/ಸಂಘಗಳು (ಅಸೋಸಿಯೇಷನ್) ಗಳು ಪ್ರತಿ ವರ್ಷ ಅಗ್ನಿ ಸುರಕ್ಷತಾ ಉಪಕರಣಗಳ ಸುಸ್ಥಿತಿ ಹಾಗೂ ವ್ಯತಿರಿಕ್ಷ ನಿರ್ಮಾಣ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕಾಗಿದ್ದು, ಪ್ರತಿ ಐದು ವರ್ಷಕ್ಕೊಮ್ಮೆ ಅಗ್ನಿಶಾಮಕ ಇಲಾಖೆಯಿಂದ ಪಡೆದ ಕ್ಲಿಯರೆನ್ಸ್ ಸರ್ಟಿಫಿಕೇಟ್ ಅನ್ನು ಮತ್ತು ಪಾಲಿಕೆಯಿಂದ ಪಡೆದ ಪರವಾನಿಗೆ/ಪ್ರಮಾಣ ಪತ್ರವನ್ನು ನವೀಕರಿಸಿಕೊಳ್ಳುವ ಷರತ್ತುಗಳನ್ನು ಉಪ ವಿಧಿಗಳಲ್ಲಿ ಸೇರಿಸಬೇಕಾಗಿರುತ್ತದೆ. ಈ ಸಂಬಂಧ ಕರ್ನಾಟಕ ಮುನಿಸಿಪಲ್ ಕಾಯ್ದೆ, 1976 ಸೆಕ್ಷನ್ 310 ಕ್ಕೆ ಉಪವಿಧಿಗಳನ್ನು ಸೇರ್ಪಡೆ ಮಾಡುವುದು ಅಗತ್ಯವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, KMC Act 1976 ರ ಸೆಕ್ಷನ್ 310 ಕ್ಕೆ ಉಪವಿಧಿ ಸೇರ್ಪಡೆ ಮಾಡುವ ಕುರಿತು ಅನುಮೋದನೆ ಕೋರಿ, ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-08-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಪ್ರತಿ 5 ವರ್ಷಗಳಿಗೊಮ್ಮೆ ನಗರ ಯೋಜನೆ ಅಧಿಕಾರಿಗಳು ಹಾಗೂ ಅಗ್ನಿಶಾಮಕ ದಳದ ಅಧಿಕಾರಿಗಳು ಜಂಟಿ ತಪಾಸಣೆ ಮಾಡಿ ನಿರಾಕ್ಷೇಪಣೆ ಪತ್ರ ಪಡೆಯುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

..........................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:11-01-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಬಹು ಮಹಡಿ ಕಟ್ಟಡಗಳಿಗೆ ಕ್ಲಿಯರೇನ್ಸ್ ಸರ್ಟಿಫಿಕೇಟ್ ನೀಡುವ ಸಂದರ್ಭದಲ್ಲಿ ನಗರ ಯೋಜನೆ ಅಧಿಕಾರಿಗಳು ಹಾಗೂ ಅಗ್ನಿಶಾಮಕ ದಳದ ಜಂಟಿ ತಪಾಸಣೆ ಮಾಡಿ ನಿರಾಕ್ಷೇಪಣಾ ಪತ್ರ ಪಡೆದು ಕ್ಲಿಯರೇನ್ಸ್ ಸರ್ಟಿಫಿಕೇಟ್ ನೀಡಬೇಕೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ದಿನಾಂಕ:11-01-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಬಹು ಮಹಡಿ ಕಟ್ಟಡಗಳಿಗೆ ಕ್ಲಿಯರೇನ್ಸ್ ಸರ್ಟಿಫಿಕೇಟ್ ನೀಡುವ ಸಂದರ್ಭದಲ್ಲಿ ನಗರ ಯೋಜನೆ ಅಧಿಕಾರಿಗಳು ಹಾಗೂ ಅಗ್ನಿಶಾಮಕ ದಳದ ಜಂಟಿ ತಪಾಸಣೆ ಮಾಡಿ ನಿರಾಕ್ಷೇಪಣಾ ಪತ್ರ ಪಡೆದು ಕ್ಲಿಯರೇನ್ಸ್ ಸರ್ಟಿಫಿಕೇಟ್ ನೀಡಬೇಕೆಂದು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:01–02–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 8 (180)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:128ರ ವ್ಯಾಪ್ತಿಯಲ್ಲಿ ಬರುವ ನಾಗರಭಾವಿ ವೃತ್ತದಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆ ಪ್ರತಿಷ್ಠಾಪನೆಗೆ ಅನುಮತಿ ಕೋರಿ, ಅಖಿಲ ಕರ್ನಾಟಕ ದಲಿತ ಹಿಂದುಳಿದವರ ವೇದಿಕೆ (ರಿ) (ಕಾರ್ಮಿಕ ರೈತ ಶೋಷಿತ ಹಾಗೂ ಕನ್ನಡ ಪರ ಸಂಘಟನೆ)ಯವರು ಪತ್ರ ಬರೆದಿರುತ್ತಾರೆ.

ಸದರಿ ಜಾಗವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸ್ಥಳದ ಮತ್ತು ಸಾರ್ವಜನಿಕರ ಮಹಜರ್ ಕ್ರಮ ಜರುಗಿಸಿ, ಕಂದಾಯ ಅಧಿಕಾರಿಗಳು (ಗೋವಿಂದರಾಜನಗರ) ರವರು ಮಹಜರ್ ವರದಿಯನ್ನು ನೀಡಿರುತ್ತಾರೆ. ಸದರಿ ಮಹಜರ್ ವರದಿ ಪ್ರಕಾರ ನಾಗರಭಾವಿ ವೃತ್ತದಲ್ಲಿ ಡಾ:ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆ ಪ್ರತಿಷ್ಠಾಪನೆಗೆ ಸ್ಥಳೀಯರು ಒಪ್ಪಿಗೆ ವ್ಯಕ್ತಪಡಿಸಿದ್ದು, ಯಾರಿಂದಲೂ ವಿರೋಧ ವ್ಯಕ್ತವಾಗಿರುವುದಿಲ್ಲ. ಆದ್ದರಿಂದ, ಪ್ರಸ್ತಾಪಿತ ಸ್ಥಳವಾದ ವಾರ್ಡ್ ಸಂಖ್ಯೆ:128ರ ವ್ಯಾಪ್ತಿಯಲ್ಲಿ ಬರುವ ನಾಗರಭಾವಿ ವೃತ್ತದಲ್ಲಿ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆ ಪ್ರತಿಷ್ಠಾಪನೆಗೆ ಅನುಮತಿ ಕೋರಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15–12–2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28–12–2010ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯನ್ನು ಕೈ ಬಿಡುವುದು."

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 9 (203)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:06, ಮಲ್ಲೇಶ್ವರಂ ಈಜುಕೊಳ ಬಡಾವಣೆ, 6ನೇ ಅಡ್ಡ ರಸ್ತೆಯಲ್ಲಿರುವ ನಗರಪಾಲಿಕೆ ನಿವೇಶನದ 60 x 90 ಅಡಿಗಳ ಜಾಗವನ್ನು ಸಂಸ್ಕೃತಿ ಕೇಂದ್ರ ರವರಿಗೆ ದಿನಾಂಕ:13-08-1957 ರಿಂದ 30 ವರ್ಷಗಳ ಅವಧಿಗೆ ವಾರ್ಷಿಕ ರೂ. 6/- ಗಳಂತೆ, ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:12-08-1987 ರಂದು ಮುಕ್ತಾಯಗೊಂಡಿರುತ್ತದೆ. ಸದರಿ ಸಂಸ್ಥೆಯವರು ದಿನಾಂಕ:15-12-2003 ರಂದು 90 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರು ಸದರಿ ಜಾಗದಲ್ಲಿ ಒಂದು ಗಣೇಶ ದೇವಸ್ಥಾನ, ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ, ಆಂಜನೇಯ ಸ್ವಾಮಿ, ನವಗ್ರಹ ದೇವಸ್ಥಾನಗಳನ್ನು ನಿರ್ಮಿಸಿರುತ್ತಾರೆ. ಸದರಿ ಸಂಸ್ಥೆಯನ್ನು ಬಡಾವಣೆಯ ಅಂದಿನ ಹಿರಿಯ ನಾಯಕರು 1955-56 ರಲ್ಲಿ ಸ್ಥಾಪಿಸಿ, ನೋಂದಾಯಿಸಿ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾರ್ವಜನಿಕ ಸೇವಾ ಕೇಂದ್ರವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಸಂಸ್ಥೆಯು ನಡೆಸುತ್ತಿರುವ ಸೇವಾ ಕಾರ್ಯಚಟುವಟಿಕೆಗಳಲ್ಲಿ ಬಡ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಉಚಿತ ಪಾಠ ಪ್ರವಚನ, ಶಿಶುವಿಹಾರ ಕೇಂದ್ರ, ಉಚಿತ ವಾಚನಾಲಯ ಹಾಗೂ ದೈಹಿಕ ವ್ಯಾಯಾಮ ತರಬೇತಿ ಹಾಗೂ ಯೋಗಾಭ್ಯಾಸ, ಸಾರ್ವಜನಿಕ ಉಚಿತ ತಪಾಸಣಾ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದ್ದು, ಈ ಎಲ್ಲಾ ಅಂಶವನ್ನು ಪರಿಗಣಿಸಿ, ಗುತ್ತಿಗೆ ಅವಧಿಯನ್ನು 90 ವರ್ಷಗಳಿಗೆ ವಿಸ್ತರಿಸಿ, ನಾಮ ಮಾತ್ರದ ಕನಿಷ್ಠ ಗುತ್ತಿಗೆ ಹಣವನ್ನು ನಿಗಧಿಪಡಿಸಿ ನವೀಕರಿಸಲು ಕೋರಿರುತ್ತಾರೆ.

ಈ ಬಗ್ಗೆ ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರದ ಶಾಸಕರು ಶಿಫಾರಸ್ಸು ಪತ್ರ ಬರೆದು, ಸಂಸ್ಕೃತಿ ಕೇಂದ್ರ ಒಂದು ಸೇವಾ ಸಂಸ್ಥೆಯಾಗಿರುವುದರಿಂದ ಅತ್ಯಂತ ಕಡಿಮೆ ಗುತ್ತಿಗೆ ಹಣ ವಿಧಿಸಿ, ಮುಂದಿನ 30 ವರ್ಷಗಳ ಅವಧಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

- ಸದರಿ ಸಂಸ್ಥೆಯವರಿಗೆ ಗುತ್ತಿಗೆ ಮುಕ್ತಾಯಗೊಂಡಿರುವ ದಿನಾಂಕದಿಂದ ಅಂದರೆ, ದಿನಾಂಕ:13-08-1987 ರಿಂದ 12-08-2002 ರವರೆಗೆ (15-ವರ್ಷಗಳಿಗೆ) ಹಿಂದೆ ನಿಗಧಿಪಡಿಸಿದ್ದ ವಾರ್ಷಿಕ ರೂ.6/- ರಂತೆ ನಿಗಧಿಪಡಿಸಬಹುದು.

- ದಿನಾಂಕ:01-03-2002 ರ ಸುತ್ತೋಲೆಯಲ್ಲಿ ಪಾಲಿಕೆ ಸ್ವತ್ತುಗಳನ್ನು ಗುತ್ತಿಗೆ ಅಥವಾ ಖಾಯಂ ಪರಭಾರೆ ಮಾಡುವಾಗ, ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ನಿಗಧಿ ಮಾಡಿದ್ದು ಅದರಂತೆ, ಸ್ವತ್ತಿನ ಪ್ರಸಕ್ತ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ:10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿಗಧಿಪಡಿಸಬೇಕಾಗುತ್ತದೆ. ದಿನಾಂಕ:12-07-2002 ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮಾರ್ಗಸೂಚಿ ಮೌಲ್ಯವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ.1200/- ಗಳಿದ್ದು, 60 x 90 =5400 ಚದರ ಅಡಿ ವಿಸ್ತೀರ್ಣಕ್ಕೆ 5400 x 1200=64,80,000/- ಗಳಾಗುತ್ತದೆ. ಇದರ ಶೇ:10ರಂತೆ ವಾರ್ಷಿಕ ಗುತ್ತಿಗೆ ದರ ರೂ.6,48,000/- ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ.54,000/- ಗಳಾಗುತ್ತದೆ. ಇದರಂತೆ ದಿನಾಂಕ:13-08-2002 ರಿಂದ 12-08-2004 ರವರೆಗೆ ನಿಗಧಿಪಡಿಸಬೇಕಾಗಿರುತ್ತದೆ.

..........................2

- ದಿನಾಂಕ:21-07-2004 ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮೌಲ್ಯವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ.1680/- ಗಳಿದ್ದು, 60 x 90=5400 ಚದರ ಅಡಿ ವಿಸ್ತೀರ್ಣಕ್ಕೆ 5400 x 1680 = 90,72,000/- ಗಳಾಗುತ್ತದೆ. ಇದರ ಶೇ:10 ರಂತೆ ವಾರ್ಷಿಕ ಗುತ್ತಿಗೆ ದರ ರೂ.9,07,200/-ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ.75,000/- ಗಳಾಗುತ್ತದೆ. ಇದರಂತೆ ದಿನಾಂಕ:13-08-2004 ರಿಂದ 12-08-2007 ರವರೆಗೆ ನಿಗಧಿಪಡಿಸಬೇಕಾಗಿರುತ್ತದೆ.
- ದಿನಾಂಕ:17-07-2007 ರ ಸರ್ಕಾರದ ಮಾರ್ಗಸೂಚಿ ದರದಂತೆ, ಸದರಿ ಜಾಗದ ಮೌಲ್ಯವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿಗೆ ರೂ.3360/- ಗಳಿದ್ದು, 60 x 90 =5400 ಚದರ ಅಡಿ ವಿಸ್ತೀರ್ಣಕ್ಕೆ 5400 x 3360=1,81,44,000/- ಗಳಾಗುತ್ತದೆ. ಇದರ ಶೇ:10ರಂತೆ ವಾರ್ಷಿಕ ಗುತ್ತಿಗೆ ದರ ರೂ.18,14,400/- ಗಳಾಗುತ್ತಿದ್ದು, ಮಾಸಿಕ ಗುತ್ತಿಗೆ ದರ ರೂ.1,51,200/-ಗಳಾಗುತ್ತದೆ. ಇದರಂತೆ ದಿನಾಂಕ:13-08-2007 ರಿಂದ ತಹಲ್‌ವರೆಗೂ ಹಾಗೂ ನವೀಕರಿಸಬಹುದಾದ ಗುತ್ತಿಗೆ ಅವಧಿಗೂ ಸಹ ನಿಗಧಿಪಡಿಸಬೇಕಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸಂಸ್ಕೃತಿ ಕೇಂದ್ರ ರವರಿಗೆ ದಿನಾಂಕ:13-08-1987 ರಿಂದ 2010 ರವರೆಗೆ 23 ವರ್ಷಗಳ ಅನಧಿಕೃತ ಗುತ್ತಿಗೆ ಅವಧಿಯನ್ನು ಸಕ್ರಮಗೊಳಿಸಿ ಮುಂದಿನ ಅವಧಿಗೆ ಸ್ವತ್ತನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ಸಲ್ಲಿಸಲು ಅನುಮೋದನೆ ಕೋರಿ, ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-08-2010 ರ ಟಿಪ್ಪಣಿ ಹಾಗೂ ವಾರ್ಷಿಕ ರೂ.5000-00 ಗುತ್ತಿಗೆ ಹಣ ನಿಗಧಿಪಡಿಸುವ ಮಾರ್ಪಾಡಿನೊಂದಿಗೆ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಹಾಗೂ ಈಗಾಗಲೇ ಸ್ಥಳ ಪರಿಶೀಲನೆ ಮಾಡಿದ್ದು, ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಈ ದಿನಾಂಕದಿಂದ 3 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮುಂದುವರೆಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮುಂದುವರೆಸಲು ಹಾಗೂ ಮುಂದಿನ 25 ವರ್ಷಗಳಿಗೆ ಗುತ್ತಿಗೆಗೆ ಅನುಮತಿ ನೀಡಲು ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮುಂದುವರೆಸಲು ಹಾಗೂ ಮುಂದಿನ 25 ವರ್ಷಗಳಿಗೆ ಗುತ್ತಿಗೆಗೆ ಅನುಮತಿ ನೀಡಲು ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 10 (206)/10-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ/85/ಎಂಎನ್‌ಜಿ/2010, ದಿನಾಂಕ:21-7-2010 ರಲ್ಲಿ ಸರ್ಕಾರದ ದಿನಾಂಕ:02-06-2003 ರ ಮಾರ್ಗಸೂಚಿಯಂತೆ ನಗರ ಪಾಲಿಕೆ ಸ್ವತ್ತನ್ನು ವಿಲೇ ಮಾಡಬೇಕಾದಲ್ಲಿ ಸಾರ್ವಜನಿಕ ಹರಜಿನ ಮೂಲಕವೇ ವಿಲೇ ಮಾಡಬೇಕಾಗಿರುತ್ತದೆ. ಆದರೆ, ಶೇಷಾದ್ರಿಪುರಂ, ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಕೃಷ್ಣ ಫ್ಲೋರ್ ಮಿಲ್ ಪಕ್ಕದಲ್ಲಿರುವ ನಗರಪಾಲಿಕೆ ವಸತಿಗೃಹಗಳನ್ನು ಪಾಲಿಕೆಯ ನೌಕರರಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ವಸತಿಗೃಹಗಳು ವಾಸ ಮಾಡಲು ಯೋಗ್ಯವಿಲ್ಲದೇ ಇದ್ದು, ಕಟ್ಟಡಗಳು ಶಿಥಿಲಗೊಂಡಿರುತ್ತವೆ. ಆದುದರಿಂದ, ಸದರಿ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವ ನೌಕರರ ಕುಟುಂಬದವರಿಗೆ ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ: ನಅಇ/20/ಎಂ.ಎನ್.ಜಿ/99(8), ದಿನಾಂಕ:15-5-2000 ರ ಆದೇಶದಂತೆ ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಚಾಲಕರ ವಸತಿಗೃಹ 'ಬಿ' ಬ್ಲಾಕ್‌ನ್ನು ಒಡೆದು ಹಾಕಿ, ಅಲ್ಲಿ ವಾಸಿಸುತ್ತಿರುವ ನೌಕರರಿಗೆ ನಿವೇಶನ ಅಳತೆ 15x15 ಅಡಿಗಳಂತೆ ವಿಂಗಡಿಸಿ ಹಂಚಿಕೆ ಮಾಡಲಾಗಿರುವಂತೆ ಶೇಷಾದ್ರಿಪುರಂ ಪ್ಲಾಟ್‌ಫಾರಂ ರಸ್ತೆಯಲ್ಲಿ ಹಂಚಿಕೆ ಮಾಡಿರುವ ನಾಲ್ಕು ವಸತಿಗೃಹಗಳನ್ನು ಪಾಲಿಕೆಯ ನೌಕರರಿಗೂ ಸಹ ಮಾರುಕಟ್ಟೆ ದರದಂತೆ ಬೆಲೆ ವಿಧಿಸಿ ನಿಗಧಿಪಡಿಸಿಕೊಂಡ ತದನಂತರ, ನೌಕರರಿಂದ ಕಟ್ಟಡಕ್ಕೆ ತಗಲುವ ವೆಚ್ಚವನ್ನು ಪಾವತಿ ಮಾಡಿಕೊಂಡು ನಂತರ ಮುಂದಿನ ಹತ್ತು ವರ್ಷಗಳಲ್ಲಿ ಯಾರಿಗೂ ಪರಭಾರೆ ಮಾಡತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು ಗುತ್ತಿಗೆ ಮಾರಾಟ ಮಾಡಿ ಕರಾರು ಪತ್ರ ನೋಂದಾಯಿಸಲು ಅನುಮೋದನೆ ಕೋರಿ ದಿನಾಂಕ:22-1-2010 ರಂದು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿಯಂತೆ, ಈ ಕೆಳಕಂಡ ಪಾಲಿಕೆಯ ನೌಕರರಿಗೆ ಮಾರಾಟ ಮಾಡಲು ಹಾಗೂ ಕ್ರಯ ಪತ್ರ ನೀಡಲು ತೀರ್ಮಾನಿಸಲಾಗಿದೆ.

| ಕ್ರ.ಸಂ. | ನೌಕರರ ಹೆಸರು | ಪದನಾಮ | ಹಂಚಿಕೆ ಮಾಡಿರುವ ವಸತಿ ಗೃಹ ಸಂಖ್ಯೆ | ವಿಸ್ತೀರ್ಣ | ಮಾರುಕಟ್ಟೆ ದರ | ಷರಾ |
|---|---|---|---|---|---|---|
| 1 | ಶ್ರೀ ಡಿ.ಪಳನಿ | ವಾಹನ ಚಾಲಕರು | 41/1 | 55 x 20 ಚ.ಅಡಿ | 13,20,000.00 | |
| 2 | ಶ್ರೀ ಆರ್.ವೆಂಕಟೇಶ್ | ವಾಹನ ಚಾಲಕರು | 42/1 | 55 x 20 ಚ.ಅಡಿ | 13,20,000.00 | |
| 3 | ಶ್ರೀ ಎಸ್.ಶ್ರೀಧರ್ | ವಾಹನ ಚಾಲಕರು | 42/2 | 55 x 20 ಚ.ಅಡಿ | 13,20,000.00 | |
| 4 | ಶ್ರೀ ಎನ್.ಎಸ್. ವೆಂಕಟೇಶ್ | ದ್ವಿ.ದ.ಸ. | 41/2 | 55 x 20 ಚ.ಅಡಿ | 13,20,000.00 | |
| ಒಟ್ಟು | | | | | 52,80,000.00 | |
| ನಾಲ್ಕು ಜನರಿಗೆ ಒಟ್ಟು ಐವತ್ತೆರಡು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು ಮಾತ್ರ | | | | | | |

ಮೇಲ್ಕಂಡ ಪಾಲಿಕೆಯ ನೌಕರರಿಗೆ ಮಾರುಕಟ್ಟೆ ದರದಂತೆ ನಿವೇಶನದ ಬೆಲೆಯನ್ನು ಚದರ ಅಡಿಗೆ ರೂ.1,200.00 ರಂತೆ ನಿಗಧಿಪಡಿಸಲಾಗಿದೆ. ಸದರಿ ನಾಲ್ಕು ಜನ ನೌಕರರಿಗೆ 55x20=1,110 ಚದರ ಅಡಿಗಳ ವಿಸ್ತೀರ್ಣದ ವಸತಿ ಗೃಹ ಹಂಚಿಕೆ ಮಾಡಲಾಗಿದ್ದು, ಒಬ್ಬ ನೌಕರರ ವಸತಿಗೃಹದ ವಿಸ್ತೀರ್ಣ ಒಟ್ಟು 1,100 ಚದರ ಅಡಿಗಳಿದ್ದು, ನಿವೇಶನ ಮಾರುಕಟ್ಟೆಯ ದರವು ರೂ.13,20,000/- ಗಳಂತೆ, 4 ವಸತಿಗಳ ಒಟ್ಟು 4,400 ಚದರ

..........................2

ಅಡಿಗಳಿಗೆ ತಗಲುವ ವೆಚ್ಚ ರೂ.52,80,000/- ಗಳಾಗುತ್ತದೆ. ಈ ಮೊತ್ತವನ್ನು ಪಾಲಿಕೆಯ ಖಜಾನೆಗೆ ಜಮಾ ಮಾಡಿಕೊಂಡ ನಂತರ ಸರ್ಕಾರದ ಆದೇಶದ ದಿನಾಂಕ:15-5-2000 ರಂತೆ ಷರತ್ತು ವಿಧಿಸಿ, ಕ್ರಯಕ್ಕೆ ನೀಡಲು ಹಾಗೂ ಈ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ಸದರಿ ಪ್ರಕರಣವನ್ನು ಸಲ್ಲಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-08-2010 ರ ಟಿಪ್ಪಣಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಗಿದ್ದು (14-12-2010), ಆಯುಕ್ತರ ದಿನಾಂಕ:12-08-2010 ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-12-2010 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:12-08-2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ಸಭೆಯು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (207)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ,

**1)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 156 (ಹಳೇ ವಾರ್ಡ್ ನಂ. 53), ಸ್ವತ್ತಿನ ಸಂಖ್ಯೆ: 85ಬಿ/28/32-1-2, 22ನೇ ಮುಖ್ಯರಸ್ತೆ, ನಾಗೇಂದ್ರ ಬ್ಲಾಕ್, ಬೆಂಗಳೂರು, ಈ ಸ್ವತ್ತು ನಾಗೇಂದ್ರ ಬ್ಲಾಕ್‌ನ 1ನೇ ಕ್ರಾಸ್ ರಸ್ತೆ ಮತ್ತು ಗಿರಿನಗರ 22ನೇ ಮುಖ್ಯರಸ್ತೆಗೆ ನೇರ ಸಂಪರ್ಕ ಕಲ್ಪಿಸಲು ಅಡ್ಡವಾಗಿದ್ದು, ಇದರಿಂದಾಗಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಈ ಸ್ವತ್ತನ್ನು ರಸ್ತೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಬನಶಂಕರಿ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ದಿನಾಂಕ: 08-04-2009 ರಂದು ಅಪರ ಆಯುಕ್ತರು (ದಕ್ಷಿಣ) ರವರ ಕಛೇರಿಗೆ ಮನವಿ ನೀಡಿದ್ದು, ಇದನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹನುಮಂತನಗರ ಉಪ ವಿಭಾಗದವರು ವಿವರವಾಗಿ ಸ್ಥಳ ಪರಿಶೀಲಿಸಿ, ಈ ಸ್ವತ್ತನ್ನು ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅಪರ ಆಯುಕ್ತರು (ದಕ್ಷಿಣ) ರವರ ಮೂಲಕ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ಮೇಲ್ಕಂಡಂತೆ ನಾಗೇಂದ್ರ ಬ್ಲಾಕ್‌ನ 1ನೇ ಕ್ರಾಸ್ ಮತ್ತು ಗಿರಿನಗರ 22ನೇ ಮುಖ್ಯರಸ್ತೆಗೆ ನೇರ ಸಂಪರ್ಕ ಕಲ್ಪಿಸಿದಂತಾಗುತ್ತದೆ. ಹಾಗೂ ಇದರಿಂದ ವಾಹನಗಳ ಸುಗಮ ಸಂಚಾರಕ್ಕೆ ತುಂಬ ಅನುಕೂಲವಾಗುತ್ತದೆ ಎಂದು ತಿಳಿಸಿ, ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಭೂಸ್ವಾಧೀನಪಡಿಸಿಕೊಳ್ಳಬೇಕಾದ ಸ್ವತ್ತಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಾರ್ಡ್ ಸಂಖ್ಯೆ ಮತ್ತು ನಿವೇಶನ ಸಂಖ್ಯೆ, ಖಾತೆ ಸಂಖ್ಯೆ | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆಯ ಹೆಸರು | ಭೂಸ್ವಾಧೀನಪಡಿಸಿ -ಕೊಳ್ಳುವ ವಿಸ್ತೀರ್ಣ ಚ.ಅ. ಗಳಲ್ಲಿ | ಷರಾ |
|---|---|---|---|---|---|
| 1 | 156 (ಹಳೇ ವಾರ್ಡ್ ನಂ.53), 85ಬಿ/28/32-1-2, 22ನೇ ಮುಖ್ಯರಸ್ತೆ, ನಾಗೇಂದ್ರ ಬ್ಲಾಕ್. | ಬಿ.ಎಸ್.ಮಂಜುನಾಥ್ 85ಬಿ/28/32-1-2, 22ನೇ ಮುಖ್ಯರಸ್ತೆ, ನಾಗೇಂದ್ರ ಬ್ಲಾಕ್, ಬೆಂಗಳೂರು. | 22ನೇ ಮುಖ್ಯರಸ್ತೆ, ನಾಗೇಂದ್ರ ಬ್ಲಾಕ್. | 739 ಚ.ಅ. | - |

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006-07, ದಿನಾಂಕ: 17-04-2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಪ್ರಸ್ತಾಪಿತ ಸ್ವತ್ತಿಗೆ ಭೂಪರಿಹಾರವನ್ನು ಹಾಗೂ ಕಟ್ಟಡದ ಮೌಲ್ಯವನ್ನು ಸೇರಿಸಿ ಒಟ್ಟು ರೂ. **17,51,150-00** ಗಳನ್ನು ಪಾವತಿಸುವ ಮೂಲಕ ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

| 'ಅ' | | |
|---|---|---|
| **1** | ನಿವೇಶನ ದರ ಚ.ಅ 1ಕ್ಕೆ ಮಾರ್ಗ ಸೂಚಿ ಬೆಲೆ ರೂ.1300/- ರಂತೆ 739 ಚ.ಅ ಗಳಿಗೆ | ರೂ. 9,60,700-00 |
| **2** | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಹೆಚ್ಚುವರಿ ಮಾರುಕಟ್ಟೆ ಬೆಲೆ ಶೇ 12 ರಂತೆ | ರೂ.1,15,284-00 |
| **3** | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ 30 ರಂತೆ | ರೂ.2,88,210-00 |
| | **ನಿವೇಶನದ ಮೌಲ್ಯ ಒಟ್ಟು** | **ರೂ.13,64,194-00** |

............................2

**'ಆ'**

| | | |
|---|---|---|
| 1. ಶೇಕಡ 10 ರಷ್ಟು ಆಡಳಿತ ವೆಚ್ಚ | = | 1,36,419-00 |
| 2. ಶೇಕಡ 1 ರಷ್ಟು ಆಡಿಟ್ ವೆಚ್ಚ | = | 13,642-00 |
| 3. ಪ್ರಕಟಣಾ ವೆಚ್ಚ | = | 1,00,000-00 |
| **ಒಟ್ಟು** | = | **2,50,061-00** |
| **(ಅ+ಆ) ಒಟ್ಟು** | | **16,14,255-00** |

**(ಹದಿನಾರು ಲಕ್ಷದ ಹದಿನಾಲ್ಕು ಸಾವಿರದ ಇನ್ನೂರ ಐವತ್ತೈದು ರೂಪಾಯಿಗಳು ಮಾತ್ರ)**

**'ಇ'**

4. **ಕಟ್ಟಡದ ಮೌಲ್ಯ 2.75 ಚ.ಮೀ X ರೂ.4,978.80 – 1,36,895-00**

5. **ಒಟ್ಟು ಮೌಲ್ಯ (ಅ+ಆ+ಇ) – 17,51,150-00**

**(ಹದಿನೇಳು ಲಕ್ಷದ ಐವತ್ತೊಂದು ಸಾವಿರದ ಒಂದುನೂರ ಐವತ್ತು ರೂ.ಗಳು ಮಾತ್ರ)**

ಈ ಪ್ರಕರಣಗಳನ್ನು ದಿನಾಂಕ:21-09-2010 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಸ್ಥಳ ತನಿಖೆ ಮಾಡಿ ಈ ಸ್ವತ್ತುಗಳನ್ನು ಪ್ರಸ್ತಾವಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದ್ದರಿಂದ ಮೇಲ್ಕಂಡ ವೆಚ್ಚವನ್ನು ಭರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮತ್ತು

**2)** ವಾರ್ಡ್ ಸಂಖ್ಯೆ: 155 (ಹಳೇ ವಾರ್ಡ್ ನಂ.52) ರ ಹನುಮಂತನಗರ, ಡಾ॥ ಕೆ.ಕೆ.ಹೆಬ್ಬಾರ್ ರಸ್ತೆಯಲ್ಲಿನ ಸ್ವತ್ತಿನ ಸಂಖ್ಯೆ:1/1, ಈ ಸ್ವತ್ತು ಗುಬ್ಬಿವೀರಣ್ಣ ರಸ್ತೆಯಿಂದ ಡಾ॥ ವಿ.ಕೆ. ಗೋಕಾಕ್ ರಸ್ತೆಗೆ ಸಂಪರ್ಕ ಕಲ್ಪಿಸಲು ಅಡ್ಡಿಯಾಗಿದ್ದು, ಈ ಅಡಚಣೆಯನ್ನು ನಿವಾರಿಸಿ ರಸ್ತೆಯ ಸಂಚಾರವನ್ನು ಸುಗಮಗೊಳಿಸಲು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ, ವಾರ್ಡ್ ನಂ.155 ರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸ್ವತ್ತಿನ ವಿವರಗಳು ಈ ಕೆಳಕಂಡತೆ ಇರುತ್ತದೆ.

| ಕ್ರ. ಸಂ. | ವಾರ್ಡ್ ಸಂಖ್ಯೆ ಮತ್ತು ನಿವೇಶನ ಸಂಖ್ಯೆ, ಖಾತೆ ಸಂಖ್ಯೆ | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆಯ ಹೆಸರು | ಭೂಸ್ವಾಧೀನಪಡಿಸಿ-ಕೊಳ್ಳುವ ವಿಸ್ತೀರ್ಣ ಚ.ಅ. ಗಳಲ್ಲಿ | ಷರಾ |
|---|---|---|---|---|---|
| 1 | ವಾರ್ಡ್ ಸಂಖ್ಯೆ:155 (ಹಳೇ ವಾರ್ಡ್ ನಂ.52), ಖಾತಾ ಸಂಖ್ಯೆ:1/1, (ಹಳೇ ಖಾತಾ ಸಂಖ್ಯೆ:873) | ಪಿ.ಜಿ.ರುಕ್ಕಮ್ಮ, ವಾರ್ಡ್ ಸಂಖ್ಯೆ:155 (ಹಳೇ ವಾರ್ಡ್ ನಂ.52) ರ ಹನುಮಂತನಗರ ಸ್ವತ್ತಿನ ಸಂಖ್ಯೆ:1/1 ಡಾ॥ ಕೆ.ಕೆ.ಹೆಬ್ಬಾರ್ ರಸ್ತೆ. | ಡಾ॥ ಕೆ.ಕೆ.ಹೆಬ್ಬಾರ್ ರಸ್ತೆ, ವಾರ್ಡ್ ನಂ.52) ರ ಹನುಮಂತನಗರ | 463.78 ಚ.ಅ. | – |

........................3

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006-07, ದಿನಾಂಕ: 17-04-2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಈ ಪ್ರಕರಣದ ಸ್ವತ್ತಿಗೆ ಭೂಪರಿಹಾರವನ್ನು ಒಟ್ಟು ರೂ.15,25,468-00 ಗಳನ್ನು ಪಾವತಿಸುವ ಮೂಲಕ ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

| 'ಅ' | | |
|---|---|---|
| 1 | ನಿವೇಶನ ದರ ಚ.ಅ 1ಕ್ಕೆ ಮಾರ್ಗ ಸೂಚಿ ಬೆಲೆ ರೂ.1950/- ರಂತೆ 463.78 ಚ.ಅ ಗಳಿಗೆ | 9,04,371-00 |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಹೆಚ್ಚುವರಿ ಮಾರುಕಟ್ಟೆ ಬೆಲೆ ಶೇ. 12 ರಂತೆ | 1,08,524-00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ. 30 ರಂತೆ | 2,71,311-00 |
| | **ನಿವೇಶನದ ಮೌಲ್ಯ ಒಟ್ಟು** | **12,84,206-00** |

'ಆ'

| | | |
|---|---|---|
| 1. ಶೇಕಡ 10 ರಷ್ಟು ಆಡಳಿತ ವೆಚ್ಚ | = | 1,28,420-00 |
| 2. ಶೇಕಡ 1 ರಷ್ಟು ಆಡಿಟ್ ವೆಚ್ಚ | = | 12,842-00 |
| 3. ಪ್ರಕಟಣಾ ವೆಚ್ಚ | = | 1,00,000-00 |
| **ಒಟ್ಟು** | | 2,41,262-00 |
| **(ಅ+ಆ) ಒಟ್ಟು** | | 15,25,468-00 |

**(ಹದಿನೈದು ಲಕ್ಷದ ಇಪ್ಪತ್ತೈದು ಸಾವಿರದ ನಾಲ್ಕುನೂರ ಅರವತ್ತೆಂಟು ರೂಪಾಯಿಗಳು ಮಾತ್ರ)**

ಈ ಪ್ರಕರಣಗಳನ್ನು ದಿನಾಂಕ: 21-09-2010 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಸ್ಥಳ ತನಿಖೆ ಮಾಡಿ ಈ ಸ್ವತ್ತುಗಳನ್ನು ಪ್ರಸ್ತಾವಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದ್ದರಿಂದ ಮೇಲ್ಕಂಡ ವೆಚ್ಚವನ್ನು ಭರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮತ್ತು

**3)** ವಾರ್ಡ್- 154 (ಹಳೇ ವಾರ್ಡ್ ನಂ.51) ರಲ್ಲಿ ಸ್ವತ್ತಿನ ಸಂಖ್ಯೆ: 60/1 (ಹಳೇ ನಂ. 36/2) ರಲ್ಲಿ 519 ಚ.ಮೀ ಜಾಗವನ್ನು ಗಂಗಮ್ಮ ದೇವಸ್ಥಾನ ರಸ್ತೆಗೆ ಇರುವ ಚರಂಡಿಯ ನೀರು ಖಾಸಗಿ ಜಮೀನಿನ ಮೂಲಕ ಪ್ರವಾಹ ಚರಂಡಿಗೆ ಅಂದರೆ ವಿದ್ಯಾಪೀಠದಿಂದ ಸಿ.ಟಿ. ಬೆಡ್ ಕಡೆಗೆ ಹೋಗುವ ಮುಖ್ಯರಸ್ತೆಯ SWD ಗೆ ಸೇರುತ್ತಿದ್ದು, ಇದನ್ನು ತಪ್ಪಿಸಿ ಈ ನಿವೇಶನದಲ್ಲಿ SWD ನಿರ್ಮಾಣ ಮಾಡಲು ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹನುಮಂತನಗರ ಉಪ ವಿಭಾಗರವರು ಮುಖ್ಯ ಅಭಿಯಂತರರು (ದಕ್ಷಿಣ) ರವರ ಮೂಲಕ ಭೂಸ್ವಾಧೀನ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಪ್ರಸ್ತಾವನೆಯು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿರುತ್ತದೆ. ಈ ಪ್ರಸ್ತಾವನೆಗೆ ತಗಲಬಹುದಾದ ಭೂಸ್ವಾಧೀನ ವೆಚ್ಚವು ಈ ಕೆಳಕಂಡಂತೆ ಇರುತ್ತದೆ.

.........................4

| ಕ್ರ ಸಂ. | ವಾರ್ಡ್ ಸಂಖ್ಯೆ ಮತ್ತು ನಿವೇಶನ ಸಂಖ್ಯೆ, ಖಾತೆ ಸಂಖ್ಯೆ | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆಯ ಹೆಸರು | ಭೂಸ್ವಾಧೀನ ಪಡಿಸಿಕೊಳ್ಳುವ ವಿಸ್ತೀರ್ಣ ಚ.ಅ ಗಳಲ್ಲಿ | ಷರಾ |
|---|---|---|---|---|---|
| 1 | ವಾರ್ಡ್– 154 (ಹಳೇ ವಾರ್ಡ್ ನಂ.51) ರಲ್ಲಿ ಸ್ವತ್ತಿನ ಸಂಖ್ಯೆ: 60/1 (ಹಳೇ ನಂ. 36/2) | ಸಿ.ಜೆ. ಭಕ್ತರಾಂ. ನಂ.60/1, 2ನೇ ಅಡ್ಡರಸ್ತೆ, ತ್ಯಾಗರಾಜನಗರ ಬೆಂಗಳೂರು-28. | ತ್ಯಾಗರಾಜನಗರ, 2ನೇ ಅಡ್ಡರಸ್ತೆ, ಬೆಂಗಳೂರು-28. | 497 ಚ.ಮೀ ಅಥವಾ 5349 ಚ.ಅ | – |

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006-07, ದಿನಾಂಕ: 17-04-2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಈ ಪ್ರಕರಣದ ಸ್ವತ್ತಿಗೆ ಭೂಪರಿಹಾರವನ್ನು ಒಟ್ಟು ರೂ.**1,10,60,421-00** ಗಳನ್ನು ಪಾವತಿಸುವ ಮೂಲಕ ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

| 'ಅ' | | |
|---|---|---|
| 1 | ನಿವೇಶನ ದರ ಚ.ಅ 1ಕ್ಕೆ ಮಾರ್ಗ ಸೂಚಿ ಬೆಲೆ ರೂ.1300/- ರಂತೆ 5349 ಚ.ಅ ಗಳಿಗೆ | 69,53,700-00 |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಹೆಚ್ಚುವರಿ ಮಾರುಕಟ್ಟೆ ಬೆಲೆ ಶೇ. 12 ರಂತೆ | 8,34,444-00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ. 30 ರಂತೆ | 20,86,110-00 |
| **ನಿವೇಶನದ ಮೌಲ್ಯ ಒಟ್ಟು** | | **98,74,254-00** |

**(ತೊಂಭತ್ತೆಂಟು ಲಕ್ಷದ ಎಪ್ಪತ್ನಾಲ್ಕು ಸಾವಿರದ ಇನ್ನೂರ ಐವತ್ನಾಲ್ಕು ರೂ.ಗಳು ಮಾತ್ರ)**

**'ಆ'**

1. ಶೇಕಡ 10 ರಷ್ಟು ಆಡಳಿತ ವೆಚ್ಚ = 9,87,425-00
2. ಶೇಕಡ 1 ರಷ್ಟು ಆಡಿಟ್ ವೆಚ್ಚ = 98,742-00
3. ಪ್ರಕಟಣಾ ವೆಚ್ಚ = 1,00,000-00

-----------

**ಒಟ್ಟು** **11,86,167-00**

**(ಅ+ಆ) ಒಟ್ಟು** **1,10,60,421-00**

**(ಒಂದು ಕೋಟಿ ಹತ್ತು ಲಕ್ಷದ ಅರವತ್ತು ಸಾವಿರದ ನಾಲ್ಕುನೂರ ಇಪ್ಪತ್ತೊಂದು ರೂಪಾಯಿಗಳು ಮಾತ್ರ)**

..........................5

ಈ ಪ್ರಕರಣಗಳನ್ನು ದಿನಾಂಕ: 21-09-2010 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಸ್ಥಳ ತನಿಖೆ ಮಾಡಿ ಈ ಸ್ವತ್ತುಗಳನ್ನು ಪ್ರಸ್ತಾವಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದ್ದರಿಂದ ಮೇಲ್ಕಂಡ ವೆಚ್ಚವನ್ನು ಭರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮತ್ತು

4) ವಾರ್ಡ್ ನಂ. 156 (ಹಳೇ ವಾರ್ಡ್ ನಂ. 53) ರಲ್ಲಿ ನರಿಹಳ್ಳ ಬಳಿ ಸೇತುವೆ ಪಕ್ಕದಲ್ಲಿ ಅಡ್ಡರಸ್ತೆಗಳಿಗೆ ಸಂಧಿಸುವ ರಸ್ತೆಗಳ ನಿರ್ಮಾಣ ಹಾಗೂ ಚರಂಡಿಯನ್ನು ನಿರ್ಮಿಸಲು ನಿವೇಶನ ಸಂಖ್ಯೆ: 82, 1ನೇ ಕ್ರಾಸ್, ಕಾಳಿದಾಸ ಲೇಔಟ್ ಇದರಲ್ಲಿ 568.666 ಚ.ಅ ವಿಸ್ತೀರ್ಣನ್ನು ಸಾರ್ವಜನಿಕ ಹಿತದೃಷ್ಠಿಯಿಂದ ಈ ಸ್ವತ್ತುಗಳನ್ನು ರಸ್ತೆ ಹಾಗೂ ಚರಂಡಿ ನಿರ್ಮಿಸಲು ಮಹಾನಗರ ಪಾಲಿಕೆ ವತಿಯಿಂದ ಭೂಸ್ವಾಧೀನಪಡಿಸುವ ಬಗ್ಗೆ ವಲಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹನುಮಂತನಗರ ವಿಭಾಗರವರು, ಮುಖ್ಯ ಅಭಿಯಂತರರು (ದಕ್ಷಿಣ) ವಿಭಾಗ ರವರು, ಅಪರ ಆಯುಕ್ತರು (ದಕ್ಷಿಣ) ರವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ವಾರ್ಡ್ ಸಂಖ್ಯೆ ಮತ್ತು ನಿವೇಶನ ಸಂಖ್ಯೆ, ಖಾತೆ ಸಂಖ್ಯೆ | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆಯ ಹೆಸರು | ಭೂಸ್ವಾಧೀನಪಡಿಸಿ -ಕೊಳ್ಳುವ ವಿಸ್ತೀರ್ಣ ಚ.ಅ ಗಳಲ್ಲಿ | ಷರಾ |
|---|---|---|---|---|---|
| 1 | ವಾರ್ಡ್ ನಂ. 156 (ಹಳೇ ವಾರ್ಡ್ ನಂ. 53), ಖಾತಾ ನಂ. 82 ನಿವೇಶನ ಸಂಖ್ಯೆ: 82, | ಜಯಲಕ್ಷ್ಮೀ, ಖಾತಾ ನಂ.82 1ನೇ ಕ್ರಾಸ್, ಕಾಳಿದಾಸ ಲೇಔಟ್, ಶ್ರೀನಗರ | ಕಾಳಿದಾಸ ಲೇಔಟ್, ಶ್ರೀನಗರ | 436.69 ಚ.ಅ | - |

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006-07, ದಿನಾಂಕ: 17-04-2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಈ ಪ್ರಕರಣದ ಸ್ವತ್ತಿಗೆ ಭೂಪರಿಹಾರವನ್ನು ಒಟ್ಟು ರೂ. 9,94,802-00 ಗಳನ್ನು ಪಾವತಿಸುವ ಮೂಲಕ ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**'ಅ'**

1. ನಿವೇಶನ ದರ ಚ.ಅ 1ಕ್ಕೆ ಮಾರ್ಗ ಸೂಚಿ ಬೆಲೆ ರೂ.1300/- ರಂತೆ 436.69 ಚ.ಅ ಗಳಿಗೆ -5,67,697-00
2. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಹೆಚ್ಚುವರಿ ಮಾರುಕಟ್ಟೆ ಬೆಲೆ ಶೇ. 12 ರಂತೆ - 68,123-00
3. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ. 30 ರಂತೆ -1,70,309-00

ನಿವೇಶನದ ಮೌಲ್ಯ ಒಟ್ಟು - **8,06,129-00**

**(ಎಂಟು ಲಕ್ಷದ ಆರು ಸಾವಿರದ ಒಂದುನೂರ ಇಪ್ಪತ್ತೊಂಭತ್ತು ರೂ.ಗಳು ಮಾತ್ರ)**

..........................6

'ಆ'

| | | | |
|---|---|---|---|
| 1. | ಶೇಕಡ 10 ರಷ್ಟು ಆಡಳಿತ ವೆಚ್ಚ | = | 80,612-00 |
| 2. | ಶೇಕಡ 1 ರಷ್ಟು ಆಡಿಟ್ ವೆಚ್ಚ | = | 8,061-00 |
| 3. | ಪ್ರಕಟಣಾ ವೆಚ್ಚ | = | 1,00,000-00 |
| | | ಒಟ್ಟು | 1,88,673-00 |

**(ಅ+ಆ) ಒಟ್ಟು 9,94,802-00**

**(ಒಂಭತ್ತು ಲಕ್ಷದ ತೊಂಭತ್ನಾಲ್ಕು ಸಾವಿರದ ಎಂಟುನೂರ ಎರಡು ರೂಪಾಯಿಗಳು ಮಾತ್ರ)**

ಮೇಲ್ಕಂಡ ನಾಲ್ಕು (4) ಪ್ರಕರಣಗಳನ್ನು ದಿನಾಂಕ:21-09-2010 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಸ್ಥಳ ತನಿಖೆ ಮಾಡಿ ಈ ಸ್ವತ್ತುಗಳನ್ನು ಪ್ರಸ್ತಾಪಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದ್ದರಿಂದ, ಮೇಲ್ಕಂಡ ವೆಚ್ಚವನ್ನು ಭರಿಸಿ ಕೆಎಂಸಿ ಕಾಯ್ದೆ 1976 ರ ಕಲಂ 177 ರಂತೆ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಮೇಲ್ಕಂಡ 4 ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ಕೋರಲು ಹಾಗೂ ಇದಕ್ಕೆ ತಗಲುವ ವೆಚ್ಚ ಸುಮಾರು ರೂ.1,53,31,841-00 ಗಳನ್ನು (ಒಂದು ಕೋಟಿ ಐವತ್ಮೂರು ಲಕ್ಷದ ಮೂವತ್ತೊಂದು ಸಾವಿರದ ಎಂಟು ನೂರ ನಲವತ್ತೊಂದು ರೂಪಾಯಿಗಳು ಮಾತ್ರ) ಪಾಲಿಕೆಯ 2010-11 ನೇ ಸಾಲಿನ ಆಯವ್ಯಯದಿಂದ ಭರಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-10-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 13 (208)/10-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ರಿಜೆನ್ಸಿ ಆಡ್ಸ್ ಸಂಸ್ಥೆಯವರು ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:07-06-2010 ರಂದು ಮನವಿಯನ್ನು ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 12 ಸ್ಥಳಗಳನ್ನು ಗುರುತಿಸಿ ಪಿ.ಪಿ.ಪಿ ಅಡಿಯಲ್ಲಿ ಜಾಹೀರಾತು ಹಕ್ಕುಗಳ ಎದುರು ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳು New Infrastructure Policy 2007 ರಡಿ ಜಾರಿಗೆ ತಂದಿರುವ ಡ್ರಾಫ್ಟ್ ಸ್ವಿಸ್ ಚಾಲೆಂಜ್ ಗೈಡ್‌ಲೈನ್ಸ್‌ನ್ನು ಪಾಲಿಸದೇ ಇರುವ ಕಾರಣ ಹಾಗೂ ಮೇಲುಸೇತುವೆ ಪಾದಚಾರಿಗಳು ಇನ್ನೋವೇಟಿವ್ ಟೆಕ್ನಾಲಜಿ ಇರದೇ ಪ್ರಯುಕ್ತ ಪ್ರಸ್ತಾವನೆಯು Unsolicited ಆಗಿರುತ್ತದೆ.

ಮೆ॥ರಿಜೆನ್ಸಿ ಆಡ್ಸ್ ಸಂಸ್ಥೆಯವರು ಮೇಲುಸೇತುವೆ ಪಾದಚಾರಿಗಳನ್ನು ಉಚಿತವಾಗಿ ಜಾಹೀರಾತು ಹಕ್ಕುಗಳ ಎದುರು ಪ್ರತಿ ಸ್ಕೈವಾಕ್‌ಗೆ ವಾರ್ಷಿಕ ನೆಲಬಾಡಿಗೆ ರೂ.50,000/- ಗಳಂತೆ 30 ವರ್ಷಗಳ ಕಾಲಾವಧಿಗೆ ವಹಿಸಿಕೊಡಲು ಕೋರಿರುತ್ತಾರೆ ಹಾಗೂ ಪಾದಚಾರಿಯ ಮೇಲೆ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಿ ತಮ್ಮ ಬಂಡಾವಳವನ್ನು ವಾಪಸ್ಸು ಪಡೆಯುವುದಾಗಿ ತಿಳಿಸಿರುತ್ತಾರೆ. ಇದರ ಅರ್ಥ ಸದರಿ ಸಂಸ್ಥೆಯವರಿಗೆ ಜಾಹೀರಾತು ಹಕ್ಕುಗಳ ಎದುರು ಪಿ.ಪಿ.ಪಿ. ಅಡಿಯಲ್ಲಿ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಾಣ ಮಾಡಲು ಪರವಾನಗಿಯನ್ನು ಕೋರಿರುತ್ತಾರೆ. ಸದರಿ ಸಂಸ್ಥೆಯವರು ಗುರುತಿಸಿರುವ ಈ ಕೆಳಕಂಡ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ಪರವಾನಗಿ ನೀಡಲು ಮನವಿಯನ್ನು ಸಲ್ಲಿಸಿರುತ್ತಾರೆ.

1. ಜಯಚಾಮರಾಜೇಂದ್ರ ರಸ್ತೆ, ಟೌನ್‌ಹಾಲ್ ಹತ್ತಿರ
2. ಸೈಂಟ್ ಮಾರ್ಕ್ಸ್ ರಸ್ತೆ, ಸ್ಟ್ರೇಸಿ ಮೆಮೋರಿಯಲ್ ಸ್ಕೂಲ್ ಹತ್ತಿರ
3. ಸಂಪಿಗೆ ರಸ್ತೆ, ಸಿರೂರ್ ಪಾರ್ಕ್ ಹತ್ತಿರ
4. ಮಿಲ್ಲರ್ ರಸ್ತೆ, ಮರಾಠ ಪರಿಷತ್ ಹತ್ತಿರ
5. ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣ ಮುಂಭಾಗ
6. ಕೆಂಪೇಗೌಡ ರಸ್ತೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹತ್ತಿರ
7. ಹಳೇ ಮದ್ರಾಸ್ ರಸ್ತೆ, ಬಿಗ್ ಬಜಾರ್ ಹತ್ತಿರ
8. ಯಶವಂತಪುರ, ಮೆಟ್ರೋ ಷಾಪಿಂಗ್ ಮಾಲ್ ಹತ್ತಿರ
9. ಬಳ್ಳಾರಿ ರಸ್ತೆ, ಹೆಬ್ಬಾಳ್ ಫ್ಲೈಓವರ್ ಹತ್ತಿರ
10. ಜಯನಗರ 11ನೇ ಮುಖ್ಯರಸ್ತೆ, ರಾಘವೇಂದ್ರ ಸ್ವಾಮಿ ದೇವಸ್ಥಾನ ಹತ್ತಿರ
11. ಹೊಸೂರು ರಸ್ತೆ, ನೂತನ ಮೇಲುಸೇತುವೆ ಹತ್ತಿರ, ಬೊಮ್ಮನಹಳ್ಳಿ
12. ಕ್ವೀನ್ಸ್ ರಸ್ತೆ, ಬಾಳೆಕುಂದ್ರಿ ವೃತ್ತದ ಹತ್ತಿರ

ಮಾನ್ಯ ಆಡಳಿತ ಪಕ್ಷದ ನಾಯಕರವರು ದಿನಾಂಕ:22-05-2010 ರಂದು ಪತ್ರ ಬರೆದು ಈ ಕೆಳಕಂಡ ಸ್ಥಳದಲ್ಲಿ ಸ್ವಯಂ ಚಾಲಿತ ಪಾದಚಾರಿ ಮೇಲುಸೇತುವೆಯನ್ನು ನಿರ್ಮಿಸಲು ಕೋರಿರುತ್ತಾರೆ.

13. ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ

ಮಾನ್ಯ ಉಪ ಮಹಾಪೌರರು ದಿನಾಂಕ:09-09-2010 ರಂದು ಪತ್ರ ಬರೆದು, ಈ ಕೆಳಕಂಡ ಸ್ಥಳದಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ಕೋರಿರುತ್ತಾರೆ.

..........................2

14. ಹಳೇ ಮದ್ರಾಸ್ ರಸ್ತೆಯಲ್ಲಿ ಬೆನ್ನಿಗಾನಹಳ್ಳಿಯಿಂದ ನಾಗವಾರ ಪಾಳ್ಯ ಕೂಡು ರಸ್ತೆ ವೃತ್ತದಲ್ಲಿ

ಮಾನ್ಯ ಅಪರ ಪೊಲೀಸ್ ಆಯುಕ್ತರು (ಸಂಚಾರ) ರವರು ದಿನಾಂಕ: 09.11.2010ರಂದು ಪ್ರಧಾನ ಅಭಿಯಂತರರನ್ನು ಮೌಖಿಕವಾಗಿ ಈ ಕೆಳಕಂಡ ಸ್ಥಳದಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ಕೋರಿರುತ್ತಾರೆ.

15. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ, ಕಾವೇರಿ ಥಿಯೇಟರ್ ಹತ್ತಿರ ಬಳ್ಳಾರಿ ರಸ್ತೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ 53 ಸ್ಥಳಗಳನ್ನು ಗುರುತಿಸಿ Capsule lift ಹೊಂದಿರುವ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸಲು ಹಾಗೂ ಪ್ರತ್ಯೇಕವಾಗಿ ಸ್ಥಳವನ್ನು ಗುರುತಿಸಿ ಬಿಡ್ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ದಿನಾಂಕ: 03.12.2009 ಮತ್ತು 11.01.2010 ರಂದು ಪ್ರಕಟಿಸಲಾಗಿದೆ. ಈ ವಿಷಯವಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೆ॥ವಿಜಯ ಇನ್ನೋವೇಟಿವ್ ಕಾನ್ಸೆಪ್ಟ್ಸ್ ಸಂಸ್ಥೆರವರು ರಿಟ್ ಅರ್ಜಿ ಸಂಖ್ಯೆ: 38070/09 ಮತ್ತು 2345/2010 ಸಲ್ಲಿಸಿ ಟೆಂಡರ್ ಪ್ರಕ್ರಿಯೆಯನ್ನು ಸ್ವಿಸ್ ಚಾಲೇಜ್ ಮೋಡ್‌ನಲ್ಲಿ ಜರುಗಿಸಲು ಕೋರಿರುತ್ತಾರೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿನ ಆದೇಶ ಕಾಯ್ದಿರಿಸಲಾಗಿದೆ.

ದಿನಾಂಕ:24.09.2009 ರಂದು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:319/2009-10ರಲ್ಲಿ, ಇನ್ನು ಮುಂದೆ ಕೆ.ಟಿ.ಟಿ.ಪಿ. ಕಾಯ್ದೆಡಿಯಲ್ಲಿ ಟೆಂಡರ್ ಪ್ರಕ್ರಿಯೆ ಜರುಗಿಸಿ ಕಾಮಗಾರಿಯನ್ನು ನಿರ್ವಹಿಸಲು ಆದೇಶಿಸಿರುತ್ತಾರೆ. ಅದರಂತೆ, ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶೀಪ್ ಅಡಿಯಲ್ಲಿ ಪಾದಚಾರಿ ಮೇಲು ಸೇತುವೆಯನ್ನು ವಹಿಸಿಕೊಡಲು ಬರುವುದಿಲ್ಲವೆಂಬ ಮಾಹಿತಿಯನ್ನು ಅವಗಾಹನೆಗೆ ತರಲಾಗಿದೆ.

ಮೇಲ್ಕಂಡ ಅಂಶಗಳ ಮೇರೆಗೆ, ಪ್ರಸ್ತುತ 15 ಸ್ಥಳಗಳಲ್ಲಿ Capsule lift ಹೊಂದಿರುವ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಟೆಂಡರ್ ಪ್ರಕಟಣೆ ಹೊರಡಿಸಿದರೆ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯನ್ನು ಉಲ್ಲಂಘಿಸಿದಂತಾಗುತ್ತದೆ. ಆದ್ದರಿಂದ, 15 ಸ್ಥಳಗಳಲ್ಲಿ ಮೆಟ್ಟಿಲುಗಳನ್ನು ಹೊಂದಿರುವ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಸರ್ವೆ ನಡೆಸಿ ನಕ್ಷೆಗಳನ್ನು ತಯಾರಿಸಲು ದಿನಾಂಕ:26.11.2010 ರಂದು ಮೆ॥ ಸ್ಕೈ ಗ್ರೂಪ್ ಸಂಸ್ಥೆಯವರಿಗೆ ಕಾರ್ಯದೇಶವನ್ನು ನೀಡಲಾಗಿದೆ. ಸದರಿ ಸಂಸ್ಥೆಯವರು ಜಿ.ಪಿ.ಎಸ್. ನಕ್ಷೆಗಳನ್ನು ಸಲ್ಲಿಸಿದ ನಂತರ e-procurement ಮುಖಾಂತರ ಟೆಂಡರ್ ಪ್ರಕ್ರಿಯೆಯನ್ನು ಜರುಗಿಸುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಪಾಲಿಕೆ ಸದಸ್ಯರು, ಸಾರ್ವಜನಿಕರು, Air Force ಅಧಿಕಾರಿಗಳು ಕೋರಿರುವ ಇತರೆ ಸ್ಥಳಗಳಲ್ಲಿ ಪರಿಶೀಲಿಸಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸುವುದನ್ನೂ ಸಹ ಅನುಮೋದಿಸಿದೆ. E-Procurement ಮೂಲಕ ಟೆಂಡರ್ ಕರೆದು ಅನುಮೋದನೆಗೆ ಈ ಸಮಿತಿಯ ಮುಂದೆ ಮುಂಡಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಸ್ಥಳೀಯ ಶಾಸಕರು ಹಾಗೂ ನಗರ ಪಾಲಿಕೆ ಸದಸ್ಯರುಗಳು ಶಿಫಾರಸ್ಸು ಮಾಡಿದ ಸ್ಥಳಗಳನ್ನು ಒಪ್ಪಿ, ಉಳಿದವುಗಳನ್ನು ಕೈಬಿಡಲು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಸ್ಥಳೀಯ ಶಾಸಕರು ಹಾಗೂ ನಗರ ಪಾಲಿಕೆ ಸದಸ್ಯರುಗಳು ಶಿಫಾರಸ್ಸು ಮಾಡಿದ ಸ್ಥಳಗಳನ್ನು ಒಪ್ಪಿ, ಉಳಿದವುಗಳನ್ನು ಕೈಬಿಡಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 14 (209)/10-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2008-09ನೇ ಸಾಲಿನಲ್ಲಿ ಟೆಂಡರ್ ಕರಾರು ದಿನಾಂಕ:25.06.2008 ರಂತೆ ಒಟ್ಟು 627 'ಡಿ' ಮಾದರಿಯ ಬಸ್ ತಂಗುದಾಣಗಳನ್ನು ಮೆ॥ಆಡ್‌ಲ್ಯಾಬ್ಸ್ ಫಿಲಿಮ್ಸ್ ಪ್ರೈ. ಲಿ., ಮೆ॥ ಟೈಮ್ಸ್ ಇನ್ನೋವೇಟಿವ್ ಪ್ರೈ. ಲಿ., ಮೆ॥ ಕ್ಲಿಯರ್ ಚಾನೆಲ್ ಕಮ್ಯೂನಿಕೇಷನ್ಸ್ ಮತ್ತು ಮೆ॥ ಹೈಪ್ ಇಂಟಿಗ್ರೇಟೆಡ್ ಕಮ್ಯೂನಿಕೇಷನ್ಸ್ ಸಂಸ್ಥೆಯವರಿಗೆ ವಹಿಸಿಕೊಡಲಾಗಿದೆ. ಇದರ ಪೈಕಿ ಸಮಸ್ಯಾತ್ಮಕ ಬಸ್ ತಂಗುದಾಣಗಳ ಸ್ಥಳಗಳಲ್ಲಿ ನಿರ್ಮಾಣವಾಗದೇ ಇರುವ 227 ಬಸ್ ತಂಗುದಾಣಗಳ ಲೈಸನ್ಸ್ ಅನ್ನು ಮಹಾನಗರ ಪಾಲಿಕೆ, ಮಹಾನಗರ ಸಾರಿಗೆ ಸಂಸ್ಥೆ ಮತ್ತು ಸಂಚಾರ ಪೊಲೀಸ್ ಅಧಿಕಾರಿಗಳ ಜಂಟಿ ಪರಿವೀಕ್ಷಣಾ ವರದಿಯಂತೆ ರದ್ದುಗೊಳಿಸಲಾಗಿದೆ. ಪೂರ್ಣಗೊಂಡಿರುವ ಬಸ್ ತಂಗುದಾಣಗಳಿಂದ ಪಾಲಿಕೆಗೆ ವಾರ್ಷಿಕ ಲೈಸನ್ಸ್ ಶುಲ್ಕ ರೂ.8,49,52,055/- ಗಳು ಮತ್ತು ವಾರ್ಷಿಕ ಜಾಹೀರಾತು ತೆರಿಗೆ ರೂ. 1,47,59,871/- ಗಳು ಒಟ್ಟು ಲೈಸನ್ಸ್ ಶುಲ್ಕ ಮತ್ತು ಜಾಹೀರಾತು ತೆರಿಗೆ ಸೇರಿಸಿ ರೂ.9,97,11,926/-ಗಳು ಪಾವತಿಯಾಗುತ್ತಿರುತ್ತದೆ.

2009-10ನೇ ಸಾಲಿನಲ್ಲಿ ಟೆಂಡರ್ ಕರಾರು ದಿನಾಂಕ: 09.12.2009ರಂತೆ ಒಟ್ಟು 288 ಕಿಯಾಸ್ಕ್ ಮಾದರಿಯ ಬಸ್ ತಂಗುದಾಣಗಳನ್ನು 11 ಪ್ಯಾಕೇಜ್‌ಗಳಲ್ಲಿ ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಪ್ರೈ. ಲಿ., ಮೆ॥ ಸ್ಕೈಲೈನ್ ಅಡ್ವರ್‌ಟೈಸಿಂಗ್ ಪ್ರೈ.. ಲಿ., ಮೆ॥ ಮೊವ್ವ ಅಸೋಸಿಯೇಟ್ಸ್, ಮೆ॥ ರಿಪ್ಪಲ್ ಮೀಡಿಯಾ, ಮೆ॥ ಓ.ಓ.ಹೆಚ್. ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ವಹಿಸಿಕೊಡಲಾಗಿದೆ. ಎಲ್ಲಾ ಬಸ್ ತಂಗುದಾಣಗಳನ್ನು ಪೂರ್ಣಗೊಳಿಸಿದ್ದರೆ ಪಾಲಿಕೆಗೆ ವಾರ್ಷಿಕ ಲೈಸನ್ಸ್ ಶುಲ್ಕ ರೂ.2,50,01,044/- ಗಳು ಮತ್ತು ವಾರ್ಷಿಕ ಜಾಹೀರಾತು ತೆರಿಗೆ ರೂ.95,71,841/- ಗಳು ಒಟ್ಟು ಲೈಸನ್ಸ್ ಶುಲ್ಕ ಮತ್ತು ಜಾಹೀರಾತು ತೆರಿಗೆ ಸೇರಿಸಿ ರೂ.3,45,72,885/-ಗಳು ಪಾವತಿಯಾಗುತ್ತದೆ. ದಿನಾಂಕ: 23.09.2010 ರಂತೆ 228 ಕಿಯಾಸ್ಕ್ ಮಾದರಿಯ ಬಸ್ ತಂಗುದಾಣಗಳು ಪೂರ್ಣಗೊಂಡಿರುತ್ತವೆ.

ಮಾನ್ಯ ಸಂಚಾರ ಅಪರ ಪೊಲೀಸ್ ಆಯುಕ್ತರು ದಿನಾಂಕ: 13.10.2010 ರಂದು ಪತ್ರವನ್ನು ಬರೆದು 160 ಬಸ್ ತಂಗುದಾಣಗಳನ್ನು ಹೊಸದಾಗಿ ನಿರ್ಮಿಸಬೇಕಾಗಿರುತ್ತದೆ ಎಂದು, 28 ಪೂರ್ಣಗೊಂಡಿರುವ ಬಸ್ ತಂಗುದಾಣಗಳನ್ನು ತೆರವುಗೊಳಿಸಲು, 32 ಪೂರ್ಣಗೊಂಡಿರುವ ಬಸ್ ತಂಗುದಾಣಗಳನ್ನು ಸ್ಥಳಾಂತರಿಸಲು ಹಾಗೂ ಪಾಲಿಕೆಯ ಸದಸ್ಯರು ಮತ್ತು ಸಂಘ ಸಂಸ್ಥೆಗಳ ಅಧ್ಯಕ್ಷರುಗಳು ಈ ಕೆಳಕಂಡ 87 ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಿಸುವಂತೆ ಕೋರಿರುತ್ತಾರೆ.

| ಕ್ರ. ಸಂ. | ಪಾಲಿಕೆ ಸದಸ್ಯರ ಹೆಸರು ಮತ್ತು ವಾರ್ಡ್ ಸಂ. | ಸ್ಥಳಗಳು | ಸಂ. |
|---|---|---|---|
| 1 | ಬಿ.ಬಿ.ಎಂ.ಪಿ. ಯಲಹಂಕ ವಲಯ, ವಾರ್ಡ್-05 ಶ್ರೀ. ಕೆ.ಎ.ಮುನೀಂದ್ರಕುಮಾರ್ ಪಾಲಿಕೆಯ ಸದಸ್ಯರು | 1. ವಿನಾಯಕನಗರ, ಬಾಗಲೂರು ಕ್ರಾಸ್<br>2. ದ್ವಾರಕಾ ನಗರ, ಬಾಗಲೂರು ಮುಖ್ಯರಸ್ತೆ<br>3. ಕಟ್ಟಿಗೇನ ಹಳ್ಳಿ, ಬಾಗಲೂರು ಮುಖ್ಯರಸ್ತೆ<br>4. ಕೋಗಿಲು ಲೇಔಟ್, ಕೋಗಿಲು ಮುಖ್ಯರಸ್ತೆ<br>5. ಕೋಗಿಲು ಗ್ರಾಮ, ಕೋಗಿಲು ಮುಖ್ಯರಸ್ತೆ<br>6. ಶ್ರೀನಿವಾಸಪುರ, ಕೋಗಿಲು ಮುಖ್ಯರಸ್ತೆ<br>7. ಜಕ್ಕೂರು ಮತ್ತು ಅಗ್ರಹಾರ ಬಡಾವಣೆ<br>8. ಡಯಾನ ಕಾಲೇಜ್ ಆಫ್ ನರ್ಸಿಂಗ್ ಹತ್ತಿರ, ಚೊಕ್ಕನಹಳ್ಳಿ, ಆರ್.ಕೆ.ಹೆಗ್ಗಡೆನಗರ ಮುಖ್ಯರಸ್ತೆ | 16 |

..........................2

| | | | |
|---|---|---|---|
| 2 | ಶ್ರೀ. ಟಿ. ತಿಮ್ಮೇಗೌಡ<br>ವಾರ್ಡ್ ನಂ-156 | 1. ಬ್ಯಾಂಕ್ ಕಾಲೋನಿಯ ಬಸ್ ನಂ-43 ಎ ನಿಲ್ಲುವ ಜಾಗ | 1 |
| 3 | ಶ್ರೀ. ಸೋಮಶೇಖರ್<br>ವಾರ್ಡ್ ನಂ-179 | 1. 24ನೇ ಮುಖ್ಯರಸ್ತೆ, 1ನೇ ಹಂತ, ಜೆ.ಪಿ.ನಗರ (ಹಳೇ ಶೆಲ್ಟರ್‌ನ್ನು ಕೆಡವಿ) | 1 |
| 4 | ನಿಸರ್ಗ ಲೇಔಟ್ ವೆಲ್‌ಫೇರ್ ಅಸೋಸಿಯೇನ್ಸ್<br>ವಾರ್ಡ್-85 | 1. ದೊಡ್ಡನಕುಂದಿ ವಿಲೇಜ್ ಮುಖ್ಯ ಬಸ್ ಸ್ಟಾಪ್<br>2. ದೊಡ್ಡನಕುಂದಿ ಕ್ರಾಸ್ ಹಳೇ ಏರ್‌ಪೋರ್ಟ್ ರಸ್ತೆಯಿಂದ<br>3. ಕಾರ್ತಿಕ್‌ನಗರ ಕಡೆಗೆ (ರಿಂಗ್ ರಸ್ತೆ) | 4 |
| 5 | ಶ್ರೀ. ಎಸ್.ದಯಾನಂದ್<br>ಮಾನ್ಯ ಉಪ ಮಹಾಪೌರರು | 1. ಎನ್.ಜಿ.ಇ.ಎಫ್ ಬಸ್ ನಿಲ್ದಾಣ ಸದಾನಂದ ನಗರದ ಕಡೆಗೆ-4<br>2. ಎನ್.ಜಿ.ಇ.ಎಫ್ ಫ್ಯಾಕ್ಟರಿ ಮುಂಭಾಗ ವೃತ್ತದಲ್ಲಿ<br>3. ಸದಾನಂದ ನಗರ 4ನೇ ಮುಖ್ಯರಸ್ತೆ<br>4. ಸದಾನಂದ ನಗರ 8ನೇ ಮುಖ್ಯರಸ್ತೆ<br>5. ಸದಾನಂದ ನಗರ ಪಾರ್ಕಿನ ಹತ್ತಿರ ಕಸ್ತೂರಿನಗರದ ಕಡೆಗೆ<br>6. ಹಳೇ ಮದ್ರಾಸ್ ರಸ್ತೆ<br>7. ಮೆಟ್ರೋ ರಸ್ತೆ<br>8. ಬೈಯಪ್ಪನ ಹಳ್ಳಿ ರೈಲ್ವೆ ಸಮಾನಂತರ ರಸ್ತೆ<br>9. ಕಸ್ತೂರಿನಗರ 2ನೇ ಮುಖ್ಯರಸ್ತೆ<br>10. ಕೃಷ್ಣಯ್ಯನ ಪಾಳ್ಯ ಇ.ಎಸ್.ಐ. ಮುಂಭಾಗ ಸದಾನಂದ ನಗರದ ಕಡೆಗೆ<br>11. ಕೃಷ್ಣಯ್ಯನ ಪಾಳ್ಯ ಗ್ರಾಮ ಅರಳಿ ಕಟ್ಟೆಯ ಹತ್ತಿರ<br>12. ಚನ್ನಸಂದ್ರ ಬಿ. ಮುಖ್ಯರಸ್ತೆ<br>13. ಬೆನ್ನಿಗಾನಹಳ್ಳಿ ಗ್ರಾಮದ ಮುಂಭಾಗ<br>14. ಕಸ್ತೂರಿ ನಗರ 1ನೇ ಮುಖ್ಯರಸ್ತೆ 2ನೇ ಮುಖ್ಯರಸ್ತೆ-5<br>15. ಚಿಕ್ಕ ಬಾಣಸವಾಡಿ ಮುಖ್ಯ ದ್ವಾರದ ಹತ್ತಿರ ಸಿ.ಎಂ.ಆರ್. ಕಾಲೇಜ್ ಹತ್ತಿರ<br>16. ಲಾಲ್ ಬಹದ್ದೂರ್ ನಗರ ರಾಘವೇಂದ್ರ ಭವನ ಮುಂಭಾಗ | 20 |
| 6 | ಶ್ರೀಮತಿ. ಪಿ.ಎಂ. ಸರೋಜ ವೀರಪ್ಪ, ಈಜೀಪುರ,<br>ವಾರ್ಡ್ ನಂ-148<br>ಪಾಲಿಕೆ ಸದಸ್ಯರು | 1. 80 ಅಡಿ ರಸ್ತೆಯ ಎಸ್.ಟಿ. ಬೆಡ್ ಮುಖ್ಯದ್ವಾರ ಮಹಾರಾಜ ಹೋಟೆಲ್ ಬಳಿ<br>2. ತಾನಿಶ್ಕ್ ಶೋ ರೂಂ ಬಳಿ<br>3. ವಿಪ್ರೋ ಪಾರ್ಕ್ ಸಿಗ್ನಲ್ ಬಳಿ | 3 |
| 7 | ಶ್ರೀ. ಎಸ್.ವೆಂಕಟೇಶ್ ಬಾಬು<br>ಕೊಟ್ಟಿಗೆಪಾಳ್ಯ, ವಾರ್ಡ್-73<br>ಪಾಲಿಕೆ ಸದಸ್ಯರು | 1. ನಾಗರಬಾವಿ 9ನೇ ಬ್ಲಾಕ್<br>2. ನಾಗರಬಾವಿ 10ನೇ ಬ್ಲಾಕ್ ಹೈಮಾಸ್ ದೀಪದ ಬಳಿ<br>3. ನಾಗರಬಾವಿ 11ನೇ ಬ್ಲಾಕ್<br>4. ಪಾಪರೆಡ್ಡಿಪಾಳ್ಯ ವೃತ್ತ<br>5. ಮಾಳಗಾಳ<br>6. ಅಪೂರ್ವ ಲೇಔಟ್ | 6 |

| | | | |
|---|---|---|---|
| 8 | ಶ್ರೀ. ಮಂಜುನಾಥ್<br>ಶಿವನಗರ, ವಾರ್ಡ್-107<br>ಪಾಲಿಕೆ ಸದಸ್ಯರು | 1. 60 ಅಡಿ ರಸ್ತೆ, ಪುಷ್ಪಾಂಜಲಿ ಚಿತ್ರಮಂದಿರದ ಪಕ್ಕ<br>2. ತಿಮ್ಮಯ್ಯ ರಸ್ತೆ, ಕ್ಲಾಸಿಕ್ ಫೋಟೋ ಸ್ಟುಡಿಯೋ ಹತ್ತಿರ<br>3. ರಾಜಾಜಿನಗರ ಕೈಗಾರಿಕಾ ನಗರದ ಆಟೋ ನಿಲ್ದಾಣದ ಹತ್ತಿರ<br>4. ರಾಜರಾಜೇಶ್ವರಿ ಟ್ರೇಡರ್ಸ್ ಎದುರು, ಡೋಬಿ ಗಾಟ್<br>5. ಪಶ್ಚಿಮ ಕಾರ್ಡ್ ರಸ್ತೆ, ವಿಘ್ನೇಶ್ ಮೋಟಾರ್ಸ್ ಹತ್ತಿರ | 5 |
| 9 | ಶ್ರೀ. ಮುನಿರತ್ನ,<br>ವಾರ್ಡ್ ನಂ-37, ಯಶವಂತಪುರ<br>ಪಾಲಿಕೆ ಸದಸ್ಯರು | ಯಶವಂತಪುರ ಕೊನೆ ಸ್ಟಾಪ್ | 4 |
| 10 | ಆರ್.ಎಸ್. ಸತ್ಯನಾರಾಯಣ<br>ವಾರ್ಡ್ ನಂ-77 | 1. ದತ್ತಾತ್ರೇಯ ದೇವಸ್ಥಾನ ಪಕ್ಕ<br>2. ಲಿಂಕ್ ರಸ್ತೆ ಮಲ್ಲೇಶ್ವರಂ, ಬ್ರಾಡ್ ವೇ ಟೈಲರ್ ಎದುರು | 2 |
| 11 | ದಿ ಹೆಚ್.ಎ.ಎಲ್ 2ನೇ ಸ್ಟೇಜ್<br>ಸಿವಿಲ್ ಅಮ್ನೆಟಿಸ್ ಅಂಡ್<br>ಕಲ್ಚರಲ್ ಅಸೋಸಿಯೇಷನ್, ಬೆಂ. | 100 ಅಡಿ ರಸ್ತೆ, 12ನೇ ಮುಖ್ಯರಸ್ತೆ, ಹೆಚ್.ಎ.ಎಲ್. 2ನೇ ಹಂತ, ವಾರ್ಡ್ ನಂ-112. | 1 |
| 12 | ಬಿ.ಎಂ.ಟಿ.ಸಿ<br>A.R.M. Embedded Technologies Pvt. ltd., | ಕನಕಪುರ ಮುಖ್ಯರಸ್ತೆಯ ರಘುವನಹಳ್ಳಿ ಬಸ್ ನಿಲುಗಡೆ (ಸಿದ್ಧಗಂಗಾ ಪ್ರೌಢಶಾಲಾ ಎದುರು)<br>ಉಚಿತವಾಗಿ (ಜಾಹೀರಾತು ಹಕ್ಕುಗಳಿಲ್ಲದೇ) | 2 |
| 13 | ಓ.ಓ.ಹೆಚ್.ಅಡ್ವರ್‌ಟೈಸಿಂಗ್ | 1. ಎನ್.ಜಿ.ಇ.ಎಫ್ ಬಸ್ ನಿಲ್ದಾಣ ಸದಾಶಿವನಗರ ಕಡೆಗೆ<br>2. ಎನ್.ಜಿ.ಇ.ಎಫ್ ಫ್ಯಾಕ್ಟರಿ ಎದುರು ಸರ್ಕಲ್<br>3. ಕಸ್ತೂರಿನಗರ 1ನೇ ಕ್ರಾಸ್<br>4. ಚಿಕ್ಕ ಬಾಣಸವಾಡಿ ನಗರ ಸಿಎಂಆರ್ ಕಾಲೇಜ್ | 4 |
| 14 | ಶ್ರೀ.ಸೋಮಶೇಖರ್<br>ಪಾಲಿಕೆ ಸದಸ್ಯರು | ಜೆ.ಪಿ.ನಗರ 1ನೇ ಸ್ಟೇಜ್, 24ನೇ ಮುಖ್ಯ ರಸ್ತೆ, ಫುಡ್ ವರ್ಲ್ಡ್ ಎದುರು | 1 |
| 15 | ಶ್ರೀ. ಎಸ್.ಹರೀಶ್<br>ನಾಗಪುರ,<br>ವಾರ್ಡ್-128 ಪಾಲಿಕೆ ಸದಸ್ಯರು | 1. ರಾಜಾಜಿನಗರ 1ನೇ ಹಂತ, ಡಯಾಕಾನ್ ಕ್ಲಿನಿಕ್ ಹತ್ತಿರ-1<br>2. ಪಾಂಡೇ ಮಠ ಬಂಡಾರ್ ವೆಸ್ಟ್ ಆಫ್ ಕಾರ್ಡ್ ರಸ್ತೆ-2<br>3. ಗೆಳೆಯ ಬಳಗ ಸಂಘದ ಹತ್ತಿರ-1 | 4 |
| 16 | ಶ್ರೀ. ಕೆ.ಉಮೇಶ್ ಶೆಟ್ಟಿ<br>ನಾಗರಭಾವಿ, ವಾರ್ಡ್-128<br>ಪಾಲಿಕೆ ಸದಸ್ಯರು | 1. ನಾಗರಭಾವಿ ಸರ್ಕಲ್<br>2. ಮಾನಸ ನಗರ<br>3. ನಾಗರಭಾವಿ ವಿಲೇಜ್ | 3 |
| 17 | ಶ್ರೀ.ಎಂ.ಶಿವರಾಜು<br>ಶಂಕರಮಠ, ವಾರ್ಡ್-75 ಪಾಲಿಕೆ ಸದಸ್ಯರು | 1. ಜೈಮಾರುತಿ ದೇವಸ್ಥಾನ ವೃತ್ತ (96ಜಿ ಬಸ್ ಮಾರ್ಗ ಕಮಲಾನಗರ)<br>2. ವಾಟರ್ ಟ್ಯಾಂಕ್ ಬಸ್ ನಿಲ್ದಾಣ (ಸಿದ್ಧಯ್ಯ ಪುರಾಣಿಕ್ ರಸ್ತೆ)<br>3. ಕುರುಬರಹಳ್ಳಿ ಬಸ್ ನಿಲ್ದಾಣ (ಕುರುಬರಹಳ್ಳಿ) | 3 |

.........................4

| | | | |
|---|---|---|---|
| 18 | ಶ್ರೀಮತಿ. ಕೆ.ಪೂರ್ಣಿಮಾ<br>ಬಸವನಪುರ, ವಾರ್ಡ್-53<br>ಪಾಲಿಕೆ ಸದಸ್ಯರು | 1. ದೇವಸಂದ್ರ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಹತ್ತಿರ<br>2. ಚಿಕ್ಕದೇವಸಂದ್ರ ಸಹಾಯವಾಣಿ ಕೇಂದ್ರದ ಮುಂಭಾಗ<br>3. ಸೀಗೇಹಳ್ಳಿ ಆಂಜನೇಯ ದೇವಸ್ಥಾನ ಪಕ್ಕ/ಹೆರಿಗೆ ಆಸ್ಪತ್ರೆ ಪಕ್ಕ<br>4. ಗಾಯತ್ರಿ ಬಡಾವಣೆ 2ನೇ ಹಂತದ ಹೈಟೆಂಕ್ಷನ್ ಕಂಬದ ಕೆಳಭಾಗ<br>5. ಚಿಕ್ಕಬಸವನಪುರ ಆಶ್ವಥ್‌ಕಟ್ಟೆ ಎಡಭಾಗ<br>6. ಮೇಡಹಳ್ಳಿ ಸರ್ಕಾರಿ ಶಾಲೆ ಮುಂಭಾಗ<br>7. ಅಯ್ಯಪ್ಪ ನಗರ ಮುನೇಶ್ವರ ದೇವಸ್ಥಾನದ ಮುಂಭಾಗ | 7 |
| 19 | ಶ್ರೀ.ಡಿ.ವೆಂಕಟೇಶ್ ಮೂರ್ತಿ<br>ಅಧ್ಯಕ್ಷರು<br>ಅಪೀಲುಗಳ ಸ್ಥಾಯಿ ಸಮಿತಿ | 1. ಕತ್ತರಿಗುಪ್ಪೆ ಮುಖ್ಯರಸ್ತೆ, ಖಾದಿ ಲೇಔಟ್, ಗಣೇಶ ದೇವಸ್ಥಾನ ಮುಂಭಾಗ<br>2. ಕತ್ತರಿಗುಪ್ಪೆ 43 ಎ ಬಸ್ ನಿಲ್ದಾಣ<br>3. ವಾಟರ್ ಟ್ಯಾಂಕ್ ಸರ್ಕಲ್<br>4. ಕತ್ತರಿಗುಪ್ಪೆ ಮುಖ್ಯರಸ್ತೆ, ಐ.ಟಿ.ಐ. ಲೇಔಟ್, ಬಸ್ ನಿಲ್ದಾಣ<br>5. ಕತ್ತರಿಗುಪ್ಪೆ ಆರ್ಚ್ ಬಳಿ<br>6. ಬ್ಯಾಂಕ್ ಕಾಲೋನಿ ಬಸ್ ನಿಲ್ದಾಣ<br>7. ಜನತಾ ಬಜಾರ್ ಬಸ್ ನಿಲ್ದಾಣ<br>8. ಕತ್ತರಿಗುಪ್ಪ ಪುಡ್ ವರ್ಲ್ಡ್ (ರಿಂಗ್ ರಸ್ತೆ) ಎದುರು<br>9. ಬ್ಯಾಂಕ್ ಕಾಲೋನಿ 12ನೇ ಮುಖ್ಯರಸ್ತೆ ಬಸ್ ನಿಲ್ದಾಣ<br>10. ಶ್ರೀನಿವಾಸನಗರ 4ನೇ ಮುಖ್ಯರಸ್ತೆ ಬಸ್ ನಿಲ್ದಾಣ | 10 |
| | | **ಒಟ್ಟು** | **97** |

ದಿನಾಂಕ: 22.12.2010ರಂದು ನಡೆದ ಪಾಲಿಕೆ, ಮಹಾನಗರ ಸಾರಿಗೆ ಸಂಸ್ಥೆ ಅಧಿಕಾರಿಗಳು ಹಾಗೂ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡುವ ಸಂಸ್ಥೆಗಳ ಪ್ರತಿನಿಧಿಗಳ ಸಭೆಯಲ್ಲಿ ಈ ಕೆಳಕಂಡಂತೆ ಬಸ್ ತಂಗುದಾಣಗಳು ಪೂರ್ಣಗೊಳ್ಳದೇ ಇರುತ್ತದೆ.

1. ಮೆ॥ ವಾಂಟೇಜ್ ಮತ್ತು ಸ್ಕೈಲೈನ್ ಅಡ್ವರ್‌ಟೈಸಿಂಗ್ ಸಂಸ್ಥೆಯವರು 17 ಕಿಯಾಸ್ಕ್ ಮಾದರಿ
2. ಮೆ॥ ಓ.ಓ.ಹೆಚ್. ಅಡ್ವರ್‌ಟೈಸಿಂಗ್ Hop-on and Hop-off 5 ಕಿಯಾಸ್ಕ್ ಮಾದರಿ
3. ಮೆ॥ ಓ.ಓ.ಹೆಚ್. ಅಡ್ವರ್‌ಟೈಸಿಂಗ್ ಪ್ಯಾಕೇಜ್ : 10 ರಲ್ಲಿ 13 ಸಂಖ್ಯೆ ಕಿಯಾಸ್ಕ್ ಮಾದರಿ
4. ಮೆ॥ ಕ್ಲಿಯರ್ ಚಾನೆಲ್ 'ಡಿ' ಮಾದರಿ ತೆರವುಗೊಳಿಸಿರುವ 5 ಸಂಖ್ಯೆ

ಮಾನ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.10.2009ರಂದು ನಡೆದ ಸಭೆಯಲ್ಲಿ ಖಾಸಗಿ ಸಾರ್ವಜನಿಕ ಸಹಭಾಗಿತ್ವದಡಿಯಲ್ಲಿ ಪಾಲಿಕೆಯ ಹೊಸ ಐದು ವಲಯಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲು ಪ್ರತಿಕ್ರಿಯೆ ಇಲ್ಲದೆ ಇರುವ ಪ್ರಯುಕ್ತ ಅಂತಹ ಸ್ಥಳಗಳಲ್ಲಿ ಮಹಾನಗರ ಸಾರಿಗೆ ಸಂಸ್ಥೆಯವರು ಶೇ. 50: 50 ಪ್ರಮಾಣದಲ್ಲಿ ಪಾಲಿಕೆಯೊಂದಿಗೆ ಆದಾಯವನ್ನು ಹಂಚಿಕೊಳ್ಳುವ ಷರತ್ತುಗಳೊಂದಿಗೆ ವಹಿಸಿಕೊಡಲು ನಿರ್ಣಯವಾಗಿರುತ್ತದೆ.

ಅದರಂತೆ, ದಿನಾಂಕ: 05.12.2009ರ ಮಾನ್ಯ ಆಡಳಿತಗಾರರ ವಿಷಯದ ಸಂಖ್ಯೆ: 446/2009-10ರ ನಡವಳಿಗಳಲ್ಲಿ ಬಸ್ ತಂಗುದಾಣಗಳ ನಿರ್ಮಾಣ ಕಾರ್ಯವನ್ನು ವಾಣಿಜ್ಯ ಆದಾಯದಲ್ಲಿ ಶೇ. 50:50

............................5

ಪ್ರಮಾಣದಲ್ಲಿ ಮಹಾನಗರ ಪಾಲಿಕೆ ಮತ್ತು ಮಹಾನಗರ ಸಾರಿಗೆ ಸಂಸ್ಥೆ ಹಂಚಿಕೊಳ್ಳುವ ಷರತ್ತುಗಳೊಂದಿಗೆ ವಹಿಸಿಕೊಡಲು ಅನುಮೋದನೆಯಾಗಿರುತ್ತದೆ. ದಿನಾಂಕ:15.12.2009ರಂದು ಪಾಲಿಕೆಯು 288 ಬಸ್ ತಂಗುದಾಣಗಳನ್ನು ಹೊರತುಪಡಿಸಿ ಉಳಿದ ಜಾಗಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು ಬಸ್ ತಂಗುದಾಣಗಳನ್ನು ನಿರ್ಮಿಸಲು ವಹಿಸಿಕೊಡಲಾಗಿದೆ.

**ಈ ಹಿನ್ನೆಲೆಯಲ್ಲಿ ಬಸ್ ತಂಗುದಾಣಗಳ ನಿರ್ಮಾಣದ ಬಗ್ಗೆ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.**

1. ಬಾಕಿ ಉಳಿದಿರುವ 35 ಸಂಖ್ಯೆ 'ಕಿಯಾಸ್ಕ್' ಮಾದರಿ ಹಾಗೂ ಸ್ಥಳಾಂತರಿಸಬೇಕಾಗಿರುವ 'ಡಿ' ಮಾದರಿಯ 5 ತಂಗುದಾಣಗಳಿಗೆ ಬದಲಿ ಸ್ಥಳಗಳನ್ನು ನೀಡಬಹುದಾಗಿದೆ.
2. ಮಾನ್ಯ ಅಪರ ಸಂಚಾರ ಪೊಲೀಸ್ ಆಯುಕ್ತರವರು 28 ಸ್ಥಳಗಳಲ್ಲಿ ನಿರ್ಮಾಣಗೊಂಡಿರುವ ಬಸ್ ತಂಗುದಾಣಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಈ ಬಸ್ ತಂಗುದಾಣಗಳನ್ನು ಪಾಲಿಕೆಯ ಸದಸ್ಯರು ಕೋರಿರುವ ಸ್ಥಳಗಳಿಗೆ ಬದಲಿ ಸ್ಥಳಗಳನ್ನು ನೀಡಬಹುದಾಗಿದೆ.
3. ಮಾನ್ಯ ಅಪರ ಸಂಚಾರ ಪೊಲೀಸ್ ಆಯುಕ್ತರುರವರು 32 ಸ್ಥಳಗಳಲ್ಲಿ ನಿರ್ಮಾಣಗೊಂಡಿರುವ ಬಸ್ ತಂಗುದಾಣಗಳನ್ನು ಸ್ಥಳಾಂತರಿಸಲು ಕೋರಿರುತ್ತಾರೆ. ಈ 32 ಬಸ್ ತಂಗುದಾಣಗಳನ್ನು ಸ್ಥಳಾಂತರಿಸಲು ಸೂಚಿಸಬಹುದಾಗಿದೆ.
4. ಬಾಕಿ ಇರುವ 40 ಮತ್ತು 28 ತೆರವುಗೊಳಿಸುವ ಬಸ್ ತಂಗುದಾಣಗಳನ್ನು ಹೊರತುಪಡಿಸಿ ಮಾನ್ಯ ಅಪರ ಸಂಚಾರ ಪೊಲೀಸ್ ಆಯುಕ್ತರು ಮತ್ತು ಮಾನ್ಯ ಪಾಲಿಕೆ ಸದಸ್ಯರುಗಳ ಬೇಡಿಕೆಯಂತೆ ಉಳಿದ 189 ಬಸ್ ತಂಗುದಾಣಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಬಹುದಾಗಿದೆ.
5. ಈಗಾಗಲೇ ಬಸ್ ತಂಗುದಾಣಗಳ ನಿರ್ಮಾಣ ಕಾರ್ಯವನ್ನು ಮಹಾನಗರ ಸಾರಿಗೆ ಸಂಸ್ಥೆಗೆ ವಹಿಸಿಕೊಡಲಾಗಿದ್ದು, ಪುನಃ ಪಾಲಿಕೆ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲು ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ.

ಮೇಲ್ಕಂಡ ಅಂಶಗಳ ಕುರಿತು ಸೂಕ್ತ ತೀರ್ಮಾನ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಜಾಹೀರಾತು ಹಕ್ಕುಗಳ ಎದುರು ಒಂದು ನವೀನ ಮಾದರಿಯ ಬಸ್ಸು ನಿಲ್ದಾಣಗಳನ್ನು ನಿರ್ಮಿಸಲು ಪಾಲಿಕೆ ವತಿಯಿಂದಲೇ E-Procurement ಮೂಲಕ ಟೆಂಡರ್ ಕರೆಯುವಂತೆ ಸೂಚಿಸಲು ತೀರ್ಮಾನಿಸಲಾಯಿತು. ಇನ್ನು ಮುಂದೆ ಟೆಂಡರ್‌ನಲ್ಲಿ ನಮೂದಿಸಿರುವ ಸ್ಥಳಗಳನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಿಸತಕ್ಕದ್ದಲ್ಲ. ಪಾಲಿಕೆ ಸದಸ್ಯರ, ಸಂಘ ಸಂಸ್ಥೆಗಳ, ಸಾರ್ವಜನಿಕರ ಕೋರಿಕೆಯಂತೆ ಸ್ಥಳ ಪರಿಶೀಲಿಸಿ ವಲಯವಾರು ಟೆಂಡರ್‌ಗಳನ್ನು ಕರೆಯುವಂತೆ ಸೂಚಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:11-01-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಭಾಗಶಃ ಒಪ್ಪುತ್ತಾ, ಸ್ಥಳೀಯ ಶಾಸಕರು, ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಪಟ್ಟಿಯಲ್ಲಿರುವ ಒಟ್ಟು 150 ಬಸ್ ತಂಗುದಾಣಗಳನ್ನು ಸ್ಥಳ ಪರಿಶೀಲಿಸಿ, ವಲಯವಾರು ಟೆಂಡರ್ ಕರೆಯಲು ಸಭೆಯು ತೀರ್ಮಾನಿಸಿತು".

..........................6

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ದಿನಾಂಕ:11–01–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಸ್ಥಳೀಯ ಶಾಸಕರು, ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಪಟ್ಟಿಯಲ್ಲಿರುವ ಒಟ್ಟು 150 ಬಸ್ ತಂಗುದಾಣಗಳನ್ನು ಸ್ಥಳ ಪರಿಶೀಲಿಸಿ, ವಲಯವಾರು ಟೆಂಡರ್ ಕರೆಯಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ್

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 15 (210)/10-11

ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:11-12-2010 ರಂದು ಸನ್ಮಾನ್ಯ ಶ್ರೀ.ಅಶೋಕ್, ಗೃಹ, ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ, ಪಾಲಿಕೆಯ ಆಡಳಿತ ಪಕ್ಷದ ನಾಯಕರು, ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು, ಪಾಲಿಕೆಯ ಆಯುಕ್ತರು ಹಾಗೂ ಪಾಲಿಕೆಯ ಅಧಿಕಾರಿಗಳೊಂದಿಗೆ ಕೇಂದ್ರ ಕಛೇರಿಯ ಸಭಾಂಗಣ-1 ರಲ್ಲಿ ಮಧ್ಯಾಹ್ನ 12 ರಿಂದ 3.00 ಘಂಟೆಯವರೆಗೆ ನಡೆದ ಸಭೆಯಲ್ಲಿ ಬೃ.ಬೆಂ.ಮ.ಪಾಲಿಕೆಯ ಜಾಹೀರಾತು ನೀತಿಯಲ್ಲಿ ಜಾಹೀರಾತು ತೆರಿಗೆಯಲ್ಲಿ ಹೆಚ್ಚು ಆದಾಯ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಾಗಿ ತಿಳಿಸಿ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಹಲವಾರು ಬದಲಾವಣೆಗಳನ್ನು ಜಾರಿಗೆ ತಂದು ಸಾರ್ವಜನಿಕರ ಪ್ರಾಣ ರಕ್ಷಣೆ ಮತ್ತು ಆಸ್ತಿ ರಕ್ಷಣೆಗೆ ಒತ್ತು ನೀಡಿ ಪಾಲಿಕೆಗೆ ಯಾವುದೇ ಆದಾಯ ಸೋರಿಕೆ ಆಗದಂತೆ ಹಾಗೂ ಹೆಚ್ಚು ಆದಾಯವನ್ನು ತಂದು ಕೊಡುವ ಬಗ್ಗೆ ಪ್ರಸ್ತಾಪಿಸಿದ ಮಾನ್ಯ ಸಚಿವರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಾನ್ಯ ಆಯುಕ್ತರು ಕ್ರಮ ವಹಿಸಲು ಸೂಚಿಸಿರುತ್ತಾರೆ. ಈ ಸಂದರ್ಭದಲ್ಲಿ ಒಂದು ಜಾಹೀರಾತು ಸಂಘದ ಅಧ್ಯಕ್ಷರಾದ ಶ್ರೀ.ಆರ್.ಕೃಷ್ಣ ದೇವರಾಯ ರವರು ಹಾಜರಿದ್ದು, ಜಾಹೀರಾತು ತೆರಿಗೆಯ ಹಾಲಿ ಸ್ಥಿತಿಯನ್ನು ಮುಂದುವರೆಸುವಂತೆ ಸುಮಾರು ಕುಟುಂಬಗಳು ಈ ಕೈಗಾರಿಕೆ ಮೇಲೆ ಅವಲಂಬಿತರಾಗಿರುವುದಾಗಿ ಮನವಿ ಮಾಡಿದರು. ಮಾನ್ಯ ಸಚಿವರು ಎಲ್ಲಾ ಅಹವಾಲುಗಳನ್ನು ಆಲಿಸಿ ಹಾಲಿ ಇರುವ ಜಾಹೀರಾತು-2006 ಕ್ಕೆ ತಿದ್ದುಪಡಿ ತರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಒಂದು ವಾರದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಪ್ರಸ್ತಾವನೆ ಮಂಡಿಸಿ, ಮುಂದಿನ ಪಾಲಿಕೆ ಸಭೆಯಲ್ಲಿ ವಿಷಯ ಮಂಡಿಸಿ, ಚರ್ಚಿಸಿ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಿರುತ್ತಾರೆ.

(1) ಈಗಾಗಲೇ ಹಾಲಿ ಇರುವ ಬೈಲಾದಂತೆ 'ಎ' ವಲಯದಲ್ಲಿ ಜಾಹೀರಾತು ನಿಷೇಧಿಸಿದ್ದು, ಸದರೀ ವಲಯಕ್ಕೆ ನಗರದ ಚಾಲುಕ್ಯ ವೃತ್ತದಿಂದ ಬಸವೇಶ್ವರ ವೃತ್ತ, ಹಳೇ ಹೈಗ್ರೌಂಡ್ಸ್ ಪೋಲೀಸ್ ವೃತ್ತ ಬಾಲಬ್ರೂಹಿ ಅತಿಥಿ ಗೃಹ ಮತ್ತು ಗಾಲ್ಫ್ ಕ್ಲಬ್ ಮೂಲಕ ಸಂಚರಿಸುವ ರಸ್ತೆ ವಿಂಡ್ಸರ್ ಮ್ಯಾನರ್ ಜಂಕ್ಷನ್, ಬಿ.ಡಿ.ಎ ಜಂಕ್ಷನ್ ಮೂಲಕ – ಕಾವೇರಿ ಜಂಕ್ಷನ್ ಮೂಲಕ ಮೇಖ್ರಿ ವೃತ್ತದವರೆಗೆ ಸೇರಿಸಬೇಕೆಂದು ಹಾಗೂ ಕಾವೇರಿ ಜಂಕ್ಷನ್‌ನಿಂದ ಬಾಷ್ಯಂ ವೃತ್ತದವರೆಗೆ ಸೇರಿಸಬೇಕೆಂದು ಆದೇಶಿಸಿರುತ್ತಾರೆ.

(2) 'ಎ' ವಲಯಗಳಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಮೂಲ ಸೌಲಭ್ಯಗಳನ್ನು ಸೃಷ್ಟಿ ಮಾಡುವ ಯೋಜನೆಗಳನ್ನು ಬಿಟ್ಟು ಯಾವುದೇ ತರಹದ ಜಾಹೀರಾತಿಗೆ ಅವಕಾಶ ನೀಡತಕ್ಕದ್ದಲ್ಲ.

(3) ಕಟ್ಟಡಗಳ ಮೇಲೆ ಯಾವುದೇ ಕಾರಣಕ್ಕೂ ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ರಕ್ಷಣೆ ದೃಷ್ಟಿಯಿಂದ ಹಾಗೂ ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡುವ ದೃಷ್ಠಿಯಿಂದ ಮತ್ತು ಬೆಂಗಳೂರು ನಗರದ ಸೌಂದರ್ಯವನ್ನು ಕಾಪಾಡುವ ದೃಷ್ಠಿಯಿಂದ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡತಕ್ಕದ್ದಲ್ಲ. ಈ ಕೂಡಲೇ ಎಲ್ಲಾ ಕಟ್ಟಡಗಳ ಮೇಲೆ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸತಕ್ಕದ್ದು.

(4) ಬಿ.ಬಿ.ಎಂ.ಪಿ ಸ್ವತ್ತುಗಳ ಜಾಹೀರಾತಿಗೆ ಸಂಬಂಧಿಸಿದಂತೆ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆ ವಿಧಿಸುವ ಪದ್ಧತಿ ಅವೈಜ್ಞಾನಿಕವಾಗಿದ್ದು, ಸದರಿ ತೆರಿಗೆಯನ್ನು ವಲಯ ಅಥವಾ ಪ್ಯಾಕೇಜ್ ಅಥವಾ ವಾರ್ಡ್‌ವಾರು ಟೆಂಡರ್ / ಹರಾಜು ಮಾಡಿ ಅದರಂತೆ ಗರಿಷ್ಠ ತೆರಿಗೆಯನ್ನು ನಿಗಧಿಪಡಿಸಿ ಕರಾರು ಪತ್ರ ಪಡೆದು, Security Deposit /Bank Guarantee ಪಡೆದು ಪ್ರತಿ ಮೂರು ವರ್ಷಗಳಿಗೊಮ್ಮೆ ವಲಯ ಅಥವಾ ವಾರ್ಡ್‌ವಾರು ಹರಾಜು ಮುಖಾಂತರ ನಿಗದಿಪಡಿಸಿದ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸತಕ್ಕದ್ದು.

............................2

(5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ/ಪ್ಯಾಕೇಜ್/ವಾರ್ಡ್‌ವಾರು ಖಾಸಗೀ ಸ್ವತ್ತುಗಳಲ್ಲಿಯೂ ಸಹ ಜಾಹೀರಾತು ಹಕ್ಕುಗಳನ್ನು ಹರಾಜು ಮಾಡಿ ಪಾಲಿಕೆ ಆದಾಯದ ದೃಷ್ಟಿಯಿಂದ ಹೆಚ್ಚು ಆದಾಯವನ್ನು ಪಡೆಯುವಂತೆ ಕ್ರಮ ವಹಿಸುವುದು.

(6) ಹಾಲಿ ಇರುವ ಜಾಹೀರಾತು ನೀತಿಯನ್ನು ದಿ:31-12-2010 ರವರೆಗೆ ಮಾತ್ರ ಮುಂದುವರೆಸಿ, ದಿ:01-1-2011 ರಿಂದ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರುವುದು.

(7) ಸ್ವಜಾಹೀರಾತುಗಳಿಗೆ ಸಂಬಂಧಿಸಿದಂತೆ ಈ ಜಾಹೀರಾತುಗಳು ಯಾವ ವಲಯ ಅಥವಾ ಪ್ಯಾಕೇಜಿಗೆ ಅನ್ವಯವಾಗುತ್ತವೋ ಅಲ್ಲಿಗೆ ನಿಗಧಿಪಡಿಸಿದ ಜಾಹೀರಾತು ತೆರಿಗೆಯನ್ನು ವಿಧಿಸಲಾಗುವುದು.

(8) ಬಿ.ಬಿ.ಎಂ.ಪಿಗೆ ಸೇರಿದ ಸ್ವತ್ತುಗಳು ಅಂದರೆ Pole Kiosks, Bus-shelters, Glow sign Boxes, Police Umbrallas, Sky walks, Road medians, Toilet Spaces, ಮೊದಲಾದ ಸ್ವತ್ತುಗಳ ಮೇಲೆ ಪ್ರದರ್ಶಿಸಲಾಗುವ ಜಾಹೀರಾತುಗಳನ್ನು ನೀಡುವಲ್ಲಿ ಸಹ Tender Cum auction ಮುಖಾಂತರ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಲಾಗುವುದು. ಪರಂತು ಈಗಾಗಲೇ ಇಂತಹ ಸ್ವತ್ತುಗಳ ಮೇಲೆ ನಿಗಧಿಪಡಿಸಿರುವ ಜಾಹೀರಾತು ತೆರಿಗೆಯನ್ನು ಪ್ರಸಕ್ತ ಹರಾಜಿನಲ್ಲಿ ನಿಗಧಿಪಡಿಸಿದ ತೆರಿಗೆಗೆ ಸರಿಸಮಾನವಾಗಿ ಪರಿಷ್ಕರಿಸಲಾಗುವುದು. ಈ ರೀತಿ ಪರಿಷ್ಕೃತ ತೆರಿಗೆಗೆ ಒಪ್ಪದಿರುವ ಪ್ರಕರಣಗಳ ಒಪ್ಪಂದಗಳನ್ನು ರದ್ದುಪಡಿಸಿ ಹೊಸದಾಗಿ Tender Cum auction ಮುಖಾಂತರ ವಿಲೇವಾರಿ ಮಾಡಲಾಗುವುದು

(9) ಭೂ ಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆ, ಮುಂತಾದ ಅನಿವಾರ್ಯ ಕಾರಣದಿಂದ ಅಳವಡಿಸಲಾಗಿರುವ ಫಲಕಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ.10,000-00 ವಿಧಿಸಿ ಅನುಮತಿ ನೀಡಬಹುದಾಗಿದೆ. ಅದೇ ರೀತಿ ರೂ.10,000-00 ವರ್ಗಾವಣೆ ಶುಲ್ಕ ವಿಧಿಸಿ ಒಂದು ಸಂಸ್ಥೆಯು ನೊಂದಾಯಿಸಿರುವ ಜಾಹೀರಾತು ಫಲಕಗಳನ್ನು ಮತ್ತೊಂದು ಸಂಸ್ಥೆಗೆ ವರ್ಗಾಯಿಸಿಕೊಳ್ಳಲು ಅನುಮತಿ ನೀಡಬಹುದಾಗಿರುತ್ತದೆ.

(10) ನಿಯಾನ್ ಬೋರ್ಡ್‌ಗಳು ಮತ್ತು ಎಲ್.ಇ.ಡಿ ಬೋರ್ಡ್‌ಗಳಿಗೂ ಸಹ ವಲಯ/ಪ್ಯಾಕೇಜುವಾರು ಹರಾಜು ಮಾಡಿ ಪ್ರತ್ಯೇಕವಾಗಿ ಗರಿಷ್ಠ ಜಾಹೀರಾತು ತೆರಿಗೆಯನ್ನು ವಿಧಿಸಬಹುದಾಗಿದೆ.

(11) 4ಎ(ii) ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000-00 ಮೊತ್ತವನ್ನು ರೂ.20,000-00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ, ಹಾಲಿ ಇರುವ ಮೊತ್ತ ರೂ.2,000-00 ಗಳಿಂದ ರೂ.5,000-00 ಗಳಿಗೆ ಹೆಚ್ಚಿಸುವುದು.

## ತಿದ್ದುಪಡಿ

These Amended Bye-laws shall be called Amended Bye-laws of 2010 and come into effect from 1st Jan 2011 or from the date of approval by the Government.

ಈ ತಿದ್ದುಪಡಿ ಉಪವಿಧಿಗಳನ್ನು 2010ರ ತಿದ್ದುಪಡಿ ಉಪವಿಧಿಗಳೆಂದು ಹಾಗೂ 1ನೇ ಜನವರಿ 2011 ರಿಂದ ಅಥವಾ ಸರ್ಕಾರದಿಂದ ಅನುಮೋದಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

Wherever it is mentioned as corporation or Bangalore city corporation in these Bye-laws it should be read as Bruhat Bangalore Mahanagara Palike.

..........................3

ಎಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯೆಂದು ಉಲ್ಲೇಖಿಸಲಾಗಿದೆಯೋ ಅದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ಓದತಕ್ಕದ್ದು.

## Defnition :

## ಸ್ಪಷ್ಟೀಕರಣ:

1.A(1) These Bye-laws shall be called Bruhath Bangalore Mahanagara Palike, Advertisement Bye-laws.

**1.(ಎ)(1)** ಈ ಉಪವಿಧಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳೆಂದು ಪರಿಗಣಿಸತಕ್ಕದ್ದು.

2.A(2)(a) The Advertisement Tax leived by the corporation on all advertisements as per section 134 of KMC Act 1976 and such advertisement tax can be fixed by way of tendering or auction- ioning the advertisement rights and the maximum amount got by such auction shall be fixed as advertisement tax for that term of three years.

**2.ಎ(2)(ಎ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆ.ಎಂ.ಸಿ ಕಾಯ್ದೆ 1976 ಕಲಂ 134ರಂತೆ ವಿಧಿಸುವ ಜಾಹೀರಾತು ತೆರಿಗೆಯನ್ನು ಟೆಂಡರ್ ಮತ್ತು ಹರಾಜಿನ ಮುಖಾಂತರ ನಿಗಧಿಪಡಿಸಲಾಗುವುದು ಹಾಗೂ ಅತಿ ಹೆಚ್ಚಿನ ಮೊತ್ತವನ್ನು ಜಾಹೀರಾತು ತೆರಿಗೆಯಾಗಿ ಮುಂದಿನ 3 ವರ್ಷಗಳ ಕಾಲಾವಧಿಗೆ ವಿಧಿಸಲಾಗುವುದು.

1.A(1) The Bye laws will come into effect in all the eight zones of BBMP. In these Bye-laws Corporation or Bangalore city corporation should be read as Bruhat Bangalore Mahanagara Palike

**1.ಎ(1)** ಜಾಹೀರಾತು ಉಪವಿಧಿಗಳು ಎಲ್ಲಾ ಪಾಲಿಕೆಯ 8 ವಲಯಗಳಲ್ಲಿ ಅನ್ವಯವಾಗುವುದು. ಈ ಉಪ ವಿಧಿಗಳಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯ ಉಲ್ಲೇಖನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಪರಿಗಣಿಸತಕ್ಕದ್ದು.

2.A(11) Commissioner means Commissioner of Bangalore Mahanagara Palike (BBMP)

2.ಎ(11) ಆಯುಕ್ತರು ಎಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು.

12) For the words BMP – BBMP shall be incorporated.

**12)** ಬೆಂ.ಮ.ಪಾ ಅನ್ನು ಬೃ.ಬೆಂ.ಮ.ಪಾ ಎಂದು ನಮೂದಿಸತಕ್ಕದ್ದು.

13) For the words Bangalore Mahanagara Palike shall be incorporated

**13)** ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ನಮೂದಿಸತಕ್ಕದ್ದು.

2.A(21) Shall be deleted (as it diverts the attention of drivers & leads to accidents)

**2.ಎ(21)** ಕೈ ಬಿಡತಕ್ಕದ್ದು (ವಾಹನ ಚಾಲಕರನ್ನು ದಿಕ್ಕುತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ)

............................4

(22) The words or "any portion of a roof " shall be deleted
**(22)** ವಾಕ್ಯ ಅಥವಾ ಮೇಲ್ಚಾವಣಿಯ ಎಲ್ಲಾ ವಿಧಗಳ ಭಾಗವನ್ನು ಕೈಬಿಡತಕ್ಕದ್ದು.

## Section II

## ಕಲಂ II

3.A (2) " or any portion of a roof " shall be delected

**3.A (2)** "ಅಥವಾ ಮೇಲ್ಚಾವಣಿಯ ಎಲ್ಲಾ ಭಾಗದಲ್ಲಿ" ಕೈಬಿಡತಕ್ಕದ್ದು.

3.A (7) at a Rate not less than one lakh rupees & removal of such hoarding without any further notice & to take action to cancel the Registration of the agency.

3.A (7) ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಆಗದಂತ ದರ ಮತ್ತು ನೋಟೀಸ್ ಅನ್ನು ನೀಡದೆ ಫಲಕವನ್ನು ತೆರವುಗೊಳಿಸುವುದು ಹಾಗೂ ಸಂಸ್ಥೆಯ ನೊಂದಣಿಯನ್ನು ರದ್ದುಗೊಳಿಸಲು ಕ್ರಮವಹಿಸುವುದು.

3.A (8) The words "In respect of high rise buildings, NOC should be obtained from Fire force Department" shall be deleted.

**3.ಎ (8)** ಎತ್ತರದ ಕಟ್ಟಡಗಳಿಗೆ ಅಗ್ನಿ ಶಾಮಕ ದಳ ಇಲಾಖೆಯಿಂದ ನಿರಾಕ್ಷೇಪಣ ಪತ್ರವನ್ನು ಪಡೆಯುವುದು ಕೈಬಿಡುವುದು.

3A (14) "and 30 feet by 15 feet when erected on a roof top provided the hoarding does not project beyond building line or beyond roof edges" shall be deleted.

3A (14) "ಮತ್ತು 30 ಅಡಿ x 15 ಅಡಿ ಜಾಹೀರಾತು ಫಲಕಗಳನ್ನು ಮೇಲ್ಚಾವಣಿಯಲ್ಲಿ ಅಳವಡಿಸಿದರೆ ಅಂತಹ ಜಾಹೀರಾತು ಫಲಕಗಳು ಕಟ್ಟಡದ ರೇಖೆಗಳನ್ನು ಅಥವಾ ಮೇಲ್ಚಾವಣಿಯ ತುದಿಗಳನ್ನು ಅತಿಕ್ರಮಿಸುವುದು" ಎನ್ನುವುದನ್ನು ಕೈಬಿಡತಕ್ಕದ್ದು.

3A (14) (i) "The minimum distance between the two hoardings shall be 10 Metres" shall be included.

3A(14) (i) "ಎರಡು ಫಲಕಗಳ ನಡುವಿನ ಅಂತರ ಕನಿಷ್ಠ 10 ಮೀಟರು ನಷ್ಟಿರಬೇಕು" ಎಂದು ಸೇರಿಸತಕ್ಕದ್ದು.

(ii) "The minimum distance to be maintained between two hoardings shall be Ten metres" shall be included.

(ii) "ಎರಡು ಫಲಕಗಳ ನಡುವಿನ ಅಂತರ ಕನಿಷ್ಠ 10 ಮೀಟರು ನಷ್ಟಿರಬೇಕು" ಎಂದು ಸೇರಿಸತಕ್ಕದ್ದು.

(iii) "Shall Ten Metres" shall be included. "No hoardings shall be permitted one above the other, when erected on roof of any building" shall be deleted.

"The hoardings one above the other may be permitted on the ground" shall be included

(iii) "10 ಮೀಟರು"ಗಳೆಂದು ಸೇರಿಸತಕ್ಕದ್ದು, – "ಕಟ್ಟಡಗಳ ಛಾವಣಿಯ ಮೇಲೆ ಯಾವುದೇ ಫಲಕಗಳು ಒಂದರ ಮೇಲೊಂದು ಅಳವಡಿಸತಕ್ಕದಲ್ಲ." ಎನ್ನುವುದನ್ನು ಕೈಬಿಡತಕ್ಕದ್ದು.

............................5

"ನೆಲದ ಮೇಲೆ ಫಲಕಗಳನ್ನು ಒಂದರ ಮೇಲೆ ಮತ್ತೊಂದನ್ನು ಅಳವಡಿಸಲು ಅನುಮತಿ ನೀಡಬಹುದು" ಎಂದು ಸೇರಿಸತಕ್ಕದ್ದು.

(v) <u>From ground</u>

| | | |
|---|---|---|
| Zone A | - | No hoardings including neons |
| Zone B | - | 40 feet (From Ground) |
| Zone C | - | 50 feet (From Ground) |
| Zone D | - | 80 feet (From Ground) |

(v) <u>ನೆಲದಿಂದ</u>

| | | |
|---|---|---|
| ಎ ವಲಯ | – | 'ಜಾಹೀರಾತು ಫಲಕಗಳು ಹಾಗೂ ನಿಯಾನ್ ಸೈನ್ ಒಳಗೊಂಡಂತೆ ಕಡ್ಡಾಯವಾಗಿ ಅನುಮತಿ ಇಲ್ಲ. |
| ಬಿ ವಲಯ | – | 40 ಅಡಿ (ನೆಲದಿಂದ) |
| ಸಿ ವಲಯ | – | 50 ಅಡಿ (ನೆಲದಿಂದ) |
| ಡಿ ವಲಯ | – | 80 ಅಡಿ (ನೆಲದಿಂದ) |

3.A (22) "All Advertisement tax shall be paid by the 30th July each year in single installment". The Advertiser shall furnish security deposit of one year advance and furnish a Bank Guarantee for the total amount of the period which may be mentioned in the agreement. All other provisions in this sub rule shall be deleted.

3.A (22) "ಏಜೆನ್ಸಿಗಳು ಎಲ್ಲಾ ಜಾಹೀರಾತುಗಳ ವಾರ್ಷಿಕ ತೆರಿಗೆಯನ್ನು ಒಂದೇ ಕಂತಿನಲ್ಲಿ ಪ್ರತಿ ವರ್ಷ ಜುಲೈ 30ನೇ ದಿನಾಂಕದೊಳಗಾಗಿ ಪಾವತಿಸತಕ್ಕದ್ದು." ಜಾಹೀರಾತುದಾರರು ಭದ್ರತಾ ಠೇವಣಿಯಾಗಿ ಮುಂಗಡ ವಾರ್ಷಿಕ ಠೇವಣಿಯನ್ನು ಪಾವತಿಸತಕ್ಕದ್ದು. ಮತ್ತು ಕರಾರಿನಲ್ಲಿ ನಮೂದಿಸಿರುವ ಅವಧಿಗೆ ಬ್ಯಾಂಕ್ ಭರವಸೆ ನೀಡುವುದು. ಇತರೇ ನಿಯಮಗಳನ್ನು ಕೈ ಬಿಡತಕ್ಕದ್ದು.

ಮೇಲ್ಕಂಡಂತೆ ತಿದ್ದುಪಡಿಗಳನ್ನು ಅಳವಡಿಸಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-12-2010 ರ ಟಿಪ್ಪಣಿ ಹಾಗೂ ದಿನಾಂಕ 26-10-2010 ರಂದು ಮಾನ್ಯ ಆಯುಕ್ತರು ತೀರ್ಮಾನಕ್ಕಾಗಿ ಮಂಡಿಸಿದ್ದ ಟಿಪ್ಪಣಿಯನ್ನು ದಿನಾಂಕ 15-11-2010 ರಂದು ನಿರ್ಣಯ ಮಾಡಿ, ದಿನಾಂಕ: 29-12-2010 ರಂದು ನಡೆದ ಪಾಲಿಕೆ ಸಭೆ ಮುಂದೆ ವಿಷಯದ ಸಂಖ್ಯೆ:12(145)/2010-11 ರಂತೆ ಮಂಡಿಸಿದ್ದು, ಜಾಹಿರಾತು ಬೈಲಾಗಳ ತಿದ್ದುಪಡಿ ಕಾಯ್ದಿರಿಸಿ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:34737-34747/2010 ರಂತೆ ತಾತ್ಕಾಲಿಕ ತೀರ್ಮಾನವನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದಂತೆ, ಮಾನ್ಯ ಆಯುಕ್ತರು ದಿನಾಂಕ:23-12-2010ರಂದು ಬೈಲಾಗಳ ಸಮಗ್ರ ತಿದ್ದುಪಡಿ ಮತ್ತು ಹಲವು ಬದಲಾವಣೆಗಳನ್ನು ಕೋರಿ ಟಿಪ್ಪಣಿಯನ್ನು ಮಂಡಿಸಿರುತ್ತಾರೆ. ಈ ಮೇಲ್ಕಂಡ ಎರಡು ಟಿಪ್ಪಣಿಗಳನ್ನು ಸಮಗ್ರವಾಗಿ ಪರಿಶೀಲಿಸಿ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಈ ಕೆಳಕಂಡಂತೆ ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

............................6

<u>ಮಾರ್ಪಾಡುಗಳು</u>

***ಮೇಲ್ಕಂಡ ಕ್ರಮ ಸಂಖ್ಯೆ 1 ರಿಂದ 10 ರವರೆಗಿನ ಅಂಶಗಳ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.***

ಮಾನ್ಯ ಮುಖ್ಯ ಮಂತ್ರಿಯವರ ದಿನಾಂಕ:25–08–2008ರ ನಡವಳಿಯ ರೀತಿ ಒಂದು ಸಮಗ್ರ ಜಾಹೀರಾತು ನೀತಿಯನ್ನು ತಯಾರಿಸಲು ಸೂಚಿಸಿದ್ದು ಈ ಬಗ್ಗೆ ಕೆಲವು ರಸ್ತೆಗಳನ್ನು 'ಎ' 'ಬಿ' 'ಸಿ' 'ಡಿ' ವಲಯಗಳನ್ನು ಅದಲು ಮಾಡಿ ಈ ಕೆಳಕಂಡಂತೆ ತೀರ್ಮಾನಿಸಿದೆ.

<u>ಎ, ಬಿ, ಸಿ, ಡಿ ವಲಯಗಳಲ್ಲಿ ಅದಲು ಬದಲು ಮಾಡಿರುವ ಪಟ್ಟಿ</u>

<u>ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಎ' ವಲಯಕ್ಕೆ ಸೇರಿಸುವ ಪ್ರಸ್ತಾವನೆ</u>

| ಕ್ರ ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಹಳೇ ಹೈಗ್ರೌಂಡ್ಸ್ ಪೋಲಿಸ್ ಸ್ಟೇಷನ್ ವೃತ್ತದಿಂದ ವಿಂಡ್ಸರ್ ಮ್ಯಾನರ್ ವೃತ್ತದವರೆಗೆ ಮಾತ್ರ (ವೃತ್ತವನ್ನು ಹೊರತು ಪಡಿಸಿ) | 'ಸಿ' | 'ಎ' |

***<u>ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಬಿ' ವಲಯಕ್ಕೆ ಸೇರಿಸುವ ಪ್ರಸ್ತಾವನೆಯ ಬಗ್ಗೆ ಕೆಳಕಂಡಂತೆ ತೀರ್ಮಾನಿಸಿದೆ:</u>***

| ಕ್ರ ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಕನ್ನಿಂಗ್‌ಹ್ಯಾಂ ರಸ್ತೆ–ಸ್ಯಾಂಕಿ ರಸ್ತೆಯಿಂದ ಕ್ವೀನ್ಸ್ ಸರ್ಕಲ್ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 2 | ರಾಜಾಜಿನಗರ 60ನೇ ಕ್ರಾಸ್–ಕಾರ್ಡ್ ರಸ್ತೆ ಜಂಕ್ಷನ್‌ನಿಂದ ಭಾಷ್ಯಂ ಸರ್ಕಲ್ ವರೆಗೆ | 'ಸಿ' | 'ಬಿ' |
| 3 | ರಾಜಾಜಿನಗರ 59ನೇ ಕ್ರಾಸ್ ರಸ್ತೆ–ಭಾಷ್ಯಂ ಸರ್ಕಲ್ ಮೂಲಕ ಓಕಳಿಪುರಂ ಮುಖ್ಯರಸ್ತೆಯಿಂದ ಫ್ಲಾಟ್‌ಫಾರಂ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 4 | ವಿಠಲ್ ಮಲ್ಯ ರಸ್ತೆ–ಸೆಂಟ್ ಮಾರ್ಕ್ಸ್ ರಸ್ತೆಯಿಂದ ಟೀಫಾನೀಸ್ ಸರ್ಕಲ್‌ನಿಂದ ರಾಜಾರಾಂ ಮೋಹನ್ ರಾಯ್ ರಸ್ತೆ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 5 | ಬಳ್ಳಾರಿ ರಸ್ತೆಯಲ್ಲಿ ವಿಂಡ್ಸರ್ ಮ್ಯಾನರ್ ವೃತ್ತದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಮತ್ತು ಕಾವೇರಿ ವೃತ್ತದಿಂದ ಭಾಷ್ಯಂ ಸರ್ಕಲ್‌ವರೆಗೆ | 'ಡಿ' | 'ಬಿ' |
| 6 | ಪ್ಯಾಲೇಸ್ ರಸ್ತೆ–ಸಿಂಧೂ ಹೋಟೆಲ್‌ನಿಂದ ಅಂಡರ್ ಬ್ರಿಡ್ಜ್‌ವರೆಗೆ | 'ಡಿ' | 'ಬಿ' |
| 7 | ಜಯಮಹಲ್ ರಸ್ತೆ–ಮೇಖ್ರಿ ವೃತ್ತದಿಂದ ದಂಡು ರೈಲ್ವೆ ನಿಲ್ದಾಣದವರೆಗೆ | 'ಡಿ' | 'ಬಿ' |
| 8 | ಮಿಲ್ಲರ್ಸ್ ರಸ್ತೆ–ನೇತಾಜಿ ರಸ್ತೆಯಿಂದ ಡಾ॥ಎಂ.ವಿ. ಜಯರಾಮ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 9 | ಸ್ಟೇಷನ್ ರಸ್ತೆ–ನೇತಾಜಿ ರಸ್ತೆ ದಂಡು ರೈಲ್ವೆ ನಿಲ್ಧಾಣದಿಂದ ಟಾನ್ರಿ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 10 | ರಿಚ್‌ಮಂಡ್ ರಸ್ತೆ–ವೆಲ್ಲಾರ್ ಜಂಕ್ಷನ್‌ನಿಂದ ಟ್ರಿನಿಟಿ ಸರ್ಕಲ್‌ವರೆಗೆ | 'ಡಿ' | 'ಬಿ' |

..........................7

| | | | |
|---|---|---|---|
| 11 | ವಿಕ್ಟೋರಿಯಾ ರಸ್ತೆ–ಡಿಸೋಜ ಸರ್ಕಲ್‌ನಿಂದ ಏರ್‌ಪೋರ್ಟ್ ರಸ್ತೆವರೆಗೆ | 'ಡಿ' | 'ಬಿ' |
| 12 | ಕೇಂಬ್ರಿಡ್ಜ್ ರಸ್ತೆ–ಹಲಸೂರು ಸರ್ಕಲ್‌ನಿಂದ ಏರ್‌ಪೋರ್ಟ್ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 13 | ಇಂಟರ್‌ಮಿಡಿಯಟ್ ರಿಂಗ್ ರಸ್ತೆ–ಕೋರಮಂಗಲದಿಂದ ಏರ್‌ಪೋರ್ಟ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 14 | 100 ಅಡಿ ರಸ್ತೆ–ಇನ್ನರ್ ರಿಂಗ್ ರಸ್ತೆ (17ನೇ ಮುಖ್ಯರಸ್ತೆ ಕೋರಮಂಗಲ) ಹೊಸೂರು ರಸ್ತೆ ಜಂಕ್ಷನ್‌ನಿಂದ ಕೇಂದ್ರಿಯ ಸದನದಿಂದ ಸರ್ಜಾಪುರ ರಸ್ತೆ ಜಂಕ್ಷನ್‌ನಿಂದ, ಬಿ.ಡಿ.ಎ. ಕಾಂಪ್ಲೆಕ್ಸ್‌ನಿಂದ 80 ಅಡಿ ಪೆರಿಫೆರಿಯಲ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 15 | ಇನ್‌ಫ್ಯಾಂಟ್ರಿ ರಸ್ತೆ | -- | 'ಬಿ' |

1. ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ಪರಿಷ್ಕೃತ ಜಾಹೀರಾತು ತೆರಿಗೆ ವಿಧಿಸಿ 2 ವರ್ಷಗಳ ಅವಧಿಗೆ ಅಂದರೆ 2010–11 ಮತ್ತು 2011–12ನೇ ಸಾಲಿಗೆ ನವೀಕರಿಸುವುದು. ಪರಿಷ್ಕೃತ ಜಾಹೀರಾತು ತೆರಿಗೆ ಪೂರ್ವಾನ್ವಯ ದಿನಾಂಕ: 01–07–2010 ರಿಂದ ಜಾರಿಗೆ ಬರುವುದು.
2. 'ಬಿ' ಜಾಹೀರಾತು ವಲಯದಲ್ಲಿ ಶೇಕಡ 15% ರಷ್ಟು ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು. ಉಳಿದ 'ಸಿ' ಮತ್ತು 'ಡಿ' ವಲಯಗಳಲ್ಲಿ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 25% ರಷ್ಟು ಹೆಚ್ಚು ಮಾಡುವುದು.
3. ಭೂಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆಗಳಿಂದಾಗಿ ನೈಜ ಕಾರಣದಿಂದ ಒಂದು ಸ್ಥಳದಿಂದ ಮೊತ್ತೊಂದು ಸ್ಥಳಕ್ಕೆ ಹಾಗೂ ಒಂದು ಕಂಪನಿ/ಏಜೆನ್ಸಿಯಿಂದ ಮತ್ತೊಂದು ಕಂಪನಿ/ಏಜೆನ್ಸಿ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ವರ್ಗಾಯಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ.5,000–00 ವಿಧಿಸಿ ಅನುಮತಿ ನೀಡುವುದು.
4. ದಿನಾಂಕ:29–11–2008ರ ಸುತ್ತೋಲೆಯನ್ನು ಸೂಕ್ತವಾಗಿ ಮಾರ್ಪಡಿಸಿ, 'ಎ' ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ಹೊಸದಾಗಿ ಖಾಸಗಿ ಸ್ವತ್ತುಗಳ ಮೇಲೆ ವಾಣಿಜ್ಯ ಜಾಹೀರಾತು ಫಲಕಗಳಿಗೆ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ವಿಶೇಷ ಪ್ರಕರಣಗಳಲ್ಲಿ ಅನುಮತಿ ನೀಡಲು ಹೊಸ ದರಗಳನ್ನು ನಿಗಧಿಪಡಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಕಡತ ಮಂಡಿಸುವುದು.
5. ಎಲ್.ಇ.ಡಿ, ಹಾಗೂ ಟ್ರೈವಿಜನ್, ಬೋರ್ಡ್‌ಗಳಿಗೆ ಈಗ ಹಾಲಿ ಇರುವ ದರಗಳ ಮೇಲೆ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು.
6. ಜಾಹೀರಾತು ಬೈಲಾ 3ಎ(7) ನಿಯಮವನ್ನು ತಿದ್ದುಪಡಿ ಮಾಡಿ ಯಾವುದೇ ಅನಧಿಕೃತ ಜಾಹೀರಾತು ಫಲಕಗಳಿಗೆ ಮಾಹಿತಿ ಲಭ್ಯವಿದ್ದಲ್ಲಿ ಜಾಹೀರಾತುದಾರರಿಗೆ, ಇಲ್ಲವಾದಲ್ಲಿ ಕಟ್ಟಡ/ಸ್ವತ್ತಿನ ಮಾಲೀಕರಿಗೆ ಸದರಿ ಅಳತೆಯ ಜಾಹೀರಾತು ಫಲಕದ 2 ವರ್ಷಗಳ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ವಸೂಲಿ ಮಾಡುವುದು.
7. 2009ರಿಂದ ಅನುಮತಿ ಪಡೆದಿರುವ ಫಲಕಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳಲ್ಲಿ ಘನ ನ್ಯಾಯಾಲಯಗಳಲ್ಲಿ ಸದರಿ ಫಲಕಗಳನ್ನು ತೆರವುಗೊಳಿಸದಂತೆ ಡೀಮ್ಡ್ ನವೀಕರಣವನ್ನು ಕೋರಿ ಅರ್ಜಿ ಸಲ್ಲಿಸಿ ತಡೆಯಾಜ್ಞೆಗಳನ್ನು ಪಡೆದಿದ್ದು, ಸದರಿ ವಾಣಿಜ್ಯ ಜಾಹೀರಾತು ಪ್ರದರ್ಶಿಸಿರುವ ಅವಧಿಗೆ ಅಂದರೆ 01–07–2010 ರಿಂದಲೇ ಪರಿಷ್ಕರಿಸಿದ ಜಾಹೀರಾತು ಶುಲ್ಕವನ್ನು ಸದರಿ ಜಾಹೀರಾತುದಾರರಿಂದ ಪಾವತಿಸಿಕೊಂಡು ನವೀಕರಿಸುವುದು.

.........................8

8. ಜಾಹೀರಾತು ಬೈಲಾ-2006 ಬೃ.ಬೆಂ.ಮ.ಪಾ. ವ್ಯಾಪ್ತಿಯ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳ ಜೊತೆಗೆ ಉಳಿಕೆ 5 ವಲಯಗಳಾದ 01) ಬೊಮ್ಮನಹಳ್ಳಿ ವಲಯ 02) ಯಲಹಂಕ ವಲಯ 03) ರಾಜರಾಜೇಶ್ವರಿ ನಗರ ವಲಯ 04) ದಾಸರಹಳ್ಳಿ ವಲಯ 05) ಮಹದೇವಪುರ ವಲಯಗಳಲ್ಲಿಯೂ ದಿನಾಂಕ:16-01-2007 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ತರುವುದು.
9. 4ಎ(ii)ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000-00 ಮೊತ್ತವನ್ನು ರೂ.20,000-00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ ಹಾಲಿ ಇರುವ ಮೊತ್ತ ರೂ.2,000-00 ಗಳಿಂದ ರೂ.5,000-00 ಗಳಿಗೆ ಹೆಚ್ಚಿಸುವುದು.
10. ಅನಧಿಕೃತ ಜಾಹೀರಾತು ಫಲಕಗಳನ್ನು ದಂಡ ವಿಧಿಸಿ ಸಕ್ರಮಗೊಳಿಸುವ ಬಗ್ಗೆ ಅಂಕಿಅಂಶಗಳನ್ನು ಕ್ರೂಢೀಕರಿಸಿಕೊಳ್ಳಲು ಒಂದು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವಂತೆ ಎರಡು ವಾರ ಗಡುವು ನೀಡಿ ಪತ್ರಿಕಾ ಪ್ರಕಟಣೆ ಹೊರಡಿಸಿ ತದನಂತರ ಬಂದ ಅರ್ಜಿಗಳನ್ನು ವಲಯವಾರು ವಿಂಗಡಿಸಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸುವುದು.

## ಜಾಹಿರಾತು ಬೈಲಾ-2006 ಕ್ಕೆ ಅನುಮೋದಿಸಿರುವ ತಿದ್ದುಪಡಿಗಳು

These Amended Bye-laws shall be called Amended Bye-laws of 2010 and come into effect from the date of the approval by the government.

ಈ ತಿದ್ದುಪಡಿ ಉಪವಿಧಿಗಳನ್ನು 2010 ರ ತಿದ್ದುಪಡಿ ಉಪವಿಧಿಗಳೆಂದು ಹಾಗೂ ಈ ಉಪವಿಧಿಗಳು ಸರ್ಕಾರವು ಅನುಮೋದಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

wherever it is mentioned as corporation or Bangalore city corporation in these Bye-laws it should be read as Bruhat Bangalore Mahanagara Palike

ಎಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯೆಂದು ಉಲ್ಲೇಖಿಸಲಾಗಿದೆಯೋ ಅದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ಓದತಕ್ಕದ್ದು.

### Definition :

**ಸ್ಪಷ್ಟೀಕರಣ:**

**1.A(1)** These Bye-laws shall be called Bruhath Bangalore Mahanagara Palike, Advertisement Bye-laws.

**1.(ಎ)(1)** ಈ ಉಪವಿಧಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳೆಂದು ಪರಿಗಣಿಸತಕ್ಕದ್ದು.

**2.A(2)(a)** The Advertisement Tax leived by the corporation on all advertisements as per section 134 of KMC Act 1976 and such advertisement tax can be fixed by way of tendering or auction- ioning the advertisement rights and the maximum amount got by such auction shall be fixed as advertisement tax for that term of three years.

**2.ಎ(2)(ಎ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆ.ಎಂ.ಸಿ ಕಾಯ್ದೆ 1976 ರ ಕಲಂ 134 ರಂತೆ ವಿಧಿಸುವ ಜಾಹೀರಾತು ತೆರಿಗೆಯನ್ನು ಟೆಂಡರ್ ಮತ್ತು ಹರಾಜಿನ ಮುಖಾಂತರ ನಿಗಧಿಪಡಿಸಲಾಗುವುದು. ಹಾಗೂ ಅತಿ ಹೆಚ್ಚಿನ ಮೊತ್ತವನ್ನು ಜಾಹೀರಾತು ತೆರಿಗೆಯಾಗಿ ಮುಂದಿನ 3 ವರ್ಷಗಳ ಕಾಲಾವಧಿಗೆ ವಿಧಿಸಲಾಗುವುದು.

............................9

ದಿನಾಂಕ: 29-12-2010 ರಂದು ಪಾಲಿಕೆ ಸಭೆಯಲ್ಲಿ ನಿರ್ಣಯ ಮಾಡಿರುವಂತೆ, ಈ ವಿಷಯವನ್ನು ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ರಚಿಸಲು ಉದ್ದೇಶಿಸಿರುವ ಸದರಿ ಸಮಿತಿಯ ತೀರ್ಮಾನಕ್ಕೆ ಕಾಯ್ದಿರಿಸಿದೆ.

**1.A(1)** The Bye laws will come into effect in all the eight zones of BBMP. In these Bye-laws Corporation or Bangalore city corporation should be read as Bruhat Bangalore Mahanagara Palike.
**1.ಎ(1)** ಜಾಹೀರಾತು ಉಪವಿಧಿಗಳು ಎಲ್ಲಾ ಪಾಲಿಕೆಯ 8 ವಲಯಗಳಲ್ಲಿ ಅನ್ವಯವಾಗುವುದು ಈ ಉಪ ವಿಧಿಗಳಲ್ಲಿ ಪಾಲಿಕೆ ಅಥವಾ ಬೆಂಗಳೂರು ನಗರ ಪಾಲಿಕೆಯ ಉಲ್ಲೇಖನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಪರಿಗಣಿಸತಕ್ಕದ್ದು.

2.A(11) Commissioner means commissioner of Bangalore Mahanagara Palike (BBMP)
2.ಎ(11) ಆಯುಕ್ತರು ಎಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು

12) For the words BMP – BBMP shall be incorporated

**12)** ಬೆಂ.ಮ.ಪಾ ಅನ್ನು ಬೃ.ಬೆಂ.ಮ.ಪಾ ಎಂದು ನಮೂದಿಸತಕ್ಕದ್ದು.

**13)** For the words Bangalore Mahanagara Palike shall be Incorporated.
**13)** ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂದು ನಮೂದಿಸತಕ್ಕದ್ದು.

2.A(21) Shall be deleted. (as it diverts the attention of drivers & leads to accidents)
**2.ಎ(21)** ಕೈ ಬಿಡತಕ್ಕದ್ದು. (ವಾಹನ ಚಾಲಕರನ್ನು ದಿಕ್ಕುತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ)

## Section II

3.A (7) at a Rate not less than one lakh rupees & removal of such hoarding without any further notice & to take action to cancel the Registration of the agency.
**3.ಎ (7)** ರೂಪಾಯಿ ಒಂದು ಲಕ್ಷಕ್ಕಿಂತ ಕಡಿಮೆ ಆಗದಂತ ದರ ಮತ್ತು ನೋಟೀಸ್ ಅನ್ನು ನೀಡದೆ ಫಲಕವನ್ನು ತೆರವುಗೊಳಿಸುವುದು ಹಾಗೂ ಸಂಸ್ಥೆಯ ನೊಂದಣಿಯನ್ನು ರದ್ದುಗೊಳಿಸಲು ಕ್ರಮವಹಿಸುವುದು.

| | |
|---|---|
| (v) Zone D | - 80 feet (From Ground) |
| (v) ಡಿ ವಲಯ | - 80 ಅಡಿ (ನೆಲದಿಂದ) |

3.A (22) "All Advertisement tax shall be paid by the 30th July each year in single installment". The Advertiser shall furnish security deposit of one year advance and furnish a Bank Guarantee for the total amount of the period which may be mentioned in the agreement.

**3.ಎ (22)** "ಏಜೆನ್ಸಿಗಳು ಎಲ್ಲಾ ಜಾಹೀರಾತುಗಳ ವಾರ್ಷಿಕ ತೆರಿಗೆಯನ್ನು ಒಂದೇ ಕಂತಿನಲ್ಲಿ ಪ್ರತಿ ವರ್ಷ ಜುಲೈ 30ನೇ ದಿನಾಂಕದೊಳಗಾಗಿ ಪಾವತಿಸತಕ್ಕದ್ದು." ಜಾಹೀರಾತುದಾರರು ಭದ್ರತಾ ಠೇವಣಿಯಾಗಿ ಮುಂಗಡ ವಾರ್ಷಿಕ ಠೇವಣಿಯನ್ನು ಪಾವತಿಸತಕ್ಕದ್ದು. ಮತ್ತು ಕರಾರಿನಲ್ಲಿ ನಮೂದಿಸಿರುವ ಅವಧಿಗೆ ಬ್ಯಾಂಕ್ ಭರವಸೆ ನೀಡುವುದು.

............................10

ಮೇಲ್ಕಂಡಂತೆ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಮುಂದೂಡಿದೆ".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ:219/2010-11

ಶ್ರೀ ಗಂಗಭೈರಯ್ಯ ರವರು ಈ ಕೆಳಕಂಡ ಪ್ರಸ್ತಾವನೆಯನ್ನು ಮಂಡಿಸಿದರು.

ಡಾ: ನೀರಜ್ ಪಾಟೀಲ್, ಲ್ಯಾಂಬೆತ್ ನಗರದ ಮಹಾಪೌರರಾಗಿದ್ದ ಸಂದರ್ಭದಲ್ಲಿ ಕರ್ನಾಟಕದವರೊಬ್ಬರು ಇಂಗ್ಲೆಂಡ್ ದೇಶದ ಒಂದು ನಗರದ ಮಹಾಪೌರರಾಗಿ ಚುನಾಯಿತರಾಗಿದ್ದಕ್ಕೆ ಸಭೆಯಲ್ಲಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಅವರು ಬೆಂಗಳೂರು ನಗರಕ್ಕೆ ಬಂದಾಗ ಪೌರ ಸನ್ಮಾನವನ್ನು ಮಾಡಬೇಕೆಂದು ತೀರ್ಮಾನಿಸಿ, ಶ್ರೀಯುತರು ದಿನಾಂಕ:04-02-2011 ರಿಂದ ದಿನಾಂಕ:06-02-2011 ರವರೆಗೆ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಉದ್ದೇಶದಿಂದ ಬೆಂಗಳೂರು ನಗರದಲ್ಲಿದ್ದು, ಸದರಿ ಸಮ್ಮೇಳನದ ನಂತರದ ದಿನವಾದ 07ನೇ ತಾರೀಖಿನಂದು ಅವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪೌರ ಸನ್ಮಾನವನ್ನು ಏರ್ಪಡಿಸಬೇಕೆಂದು ಕೋರಿದರು.

ಮಹಾಪೌರರು ಮೇಲ್ಕಂಡ ಪ್ರಸ್ತಾವನೆ ಮತಕ್ಕೆ ಹಾಕಲಾಗಿ ಪ್ರಸ್ತಾವನೆ ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಡಾ: ನೀರಜ್ ಪಾಟೀಲ್, ಲ್ಯಾಂಬೆತ್ ನಗರದ ಮಹಾಪೌರರಾಗಿದ್ದ ಸಂದರ್ಭದಲ್ಲಿ ಕರ್ನಾಟಕದವರೊಬ್ಬರು ಇಂಗ್ಲೆಂಡ್ ದೇಶದ ಒಂದು ನಗರದ ಮಹಾಪೌರರಾಗಿ ಚುನಾಯಿತರಾಗಿದ್ದಕ್ಕೆ ಸಭೆಯಲ್ಲಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಅವರು ಬೆಂಗಳೂರು ನಗರಕ್ಕೆ ಬಂದಾಗ ಪೌರ ಸನ್ಮಾನವನ್ನು ಮಾಡಬೇಕೆಂದು ತೀರ್ಮಾನಿಸಿ, ಶ್ರೀಯುತರು ದಿನಾಂಕ:04-02-2011 ರಿಂದ 06-02-2011 ರವರೆಗೆ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಉದ್ದೇಶದಿಂದ ಬೆಂಗಳೂರು ನಗರದಲ್ಲಿದ್ದು, ಸದರಿ ಸಮ್ಮೇಳನದ ನಂತರದ ದಿನವಾದ 07ನೇ ತಾರೀಖಿನಂದು ಅವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪೌರ ಸನ್ಮಾನವನ್ನು ಏರ್ಪಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 220/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ಸುಮಾರು 800.00 ಚ.ಕಿ.ಮೀ ವಿಸ್ತೀರ್ಣದಿಂದ ಕೂಡಿರುತ್ತದೆ. ಬೆಂಗಳೂರು ನಗರದ ವ್ಯಾಪ್ತಿಯನ್ನು 5 ಹೊಸ ವಲಯಗಳಾದ ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಮಹದೇವಪುರ, ಬ್ಯಾಟರಾಯನಪುರ, ದಾಸರಹಳ್ಳಿ ವಲಯಗಳಾಗಿ ಸೃಷ್ಟಿಸಿ ಸೇರ್ಪಡೆ ಮಾಡಲಾಗಿದ್ದು, ಹಾಲಿ 8 ವಲಯಗಳಾಗಿ ವಿಭಜಿಸಿ ಕಾರ್ಯನಿರ್ವಹಣೆ ಮಾಡಲಾಗಿರುತ್ತದೆ. ಬೆಂಗಳೂರು ನಗರದ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ ಸುಮಾರು 60 ಲಕ್ಷವಿದ್ದು, 2025 ರ ವೇಳೆಗೆ ಜನಸಂಖ್ಯೆಯ ಪ್ರಮಾಣ ಸುಮಾರು 122 ಲಕ್ಷಗಳಷ್ಟು ಆಗಬಹುದೆಂದು ಅಂದಾಜಿಸಲಾಗಿದೆ. ವಾಹನ ಸಂಖ್ಯೆಯ ವಾರ್ಷಿಕ ಬೆಳವಣಿಗೆಯು ಪ್ರಸ್ತುತ 12 ರಿಂದ 14 ರಷ್ಟಿದ್ದು, ಒಟ್ಟು ವಾಹನ ಸಂಖ್ಯೆಯು 35 ರಿಂದ 38 ಲಕ್ಷಗಳಷ್ಟು ಇರುತ್ತದೆ.

ಬೆಂಗಳೂರು ಮಹಾನಗರವು ದಕ್ಷಿಣ ಭಾರತದಲ್ಲೇ ಒಂದು ಪ್ರಮುಖ ನಗರವಾಗಿ ಬೆಳವಣಿಗೆಯಾಗುತ್ತಿದ್ದು, ಆರ್ಥಿಕವಾಗಿ ವಾರ್ಷಿಕ ಸುಮಾರು 26000.00 ಕೋಟಿಗಳಷ್ಟು ವಹಿವಾಟು ನಡೆಸಲಾಗುತ್ತಿರುತ್ತದೆ ಎಂದು ಅಂದಾಜಿಸಲಾಗಿದೆ ಹಾಗೂ ಬೆಂಗಳೂರು ನಗರವು ಮಾಹಿತಿ ತಂತ್ರಜ್ಞಾನದಲ್ಲಿ ಪ್ರಪಂಚದಲ್ಲೇ ಒಂದು ಪ್ರಮುಖ ನಗರವಾಗಿ ಗುರುತಿಸಲಾಗಿದೆ ಹಾಗೂ ಇದು ಸಿಲಿಕಾನ್ ನಗರವೆಂದು ಪ್ರಸಿದ್ಧಿಯಾಗಿದೆ. ಈ ಎಲ್ಲಾ ಕಾರಣಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲಾಗುತ್ತಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಮುಖ್ಯ ಕಣಿವೆಗಳಾದ ವೃಷಭಾವತಿ, ಕೋರಮಂಗಲ, ಹೆಬ್ಬಾಳ, ಛಲಘಟ್ಟ ನೀರುಗಾಲುವೆಗಳು ಹರಿಯುತ್ತಿರುತ್ತವೆ. ನಗರ ಪ್ರದೇಶದಲ್ಲಿ ಈಶಾನ್ಯ ಮತ್ತು ನೈರುತ್ಯ ಮುಂಗಾರು ಮಳೆಯಿಂದ ಒಟ್ಟು ಸುಮಾರು 800 ಮಿಲಿ ಮೀಟರ್‌ನಷ್ಟು ವಾರ್ಷಿಕ ಮಳೆಯಾಗುತ್ತಿರುತ್ತದೆ.

2010-11 ನೇ ಸಾಲಿನಲ್ಲಿ ಮಹಾನಗರ ಪಾಲಿಕೆಯಿಂದ ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳ ಅಡಿಯಲ್ಲಿ ಯೋಜನಾ ಶಾಖೆಯ ವತಿಯಿಂದ ಆರ್.ಓ.ಬಿ/ಆರ್.ಯು.ಬಿ.ಗಳು, ಸುರಂಗಮಾರ್ಗಗಳು, ರಸ್ತೆಗೆ ಸಂಬಂಧಪಟ್ಟ ಕಾಮಗಾರಿಗಳು, ಮೂಲಭೂತ ಸೌಕರ್ಯಗಳ ಶಾಖೆಗೆ ಸಂಬಂಧಪಟ್ಟ ಕಾಮಗಾರಿಗಳು ಬೃಹತ್ ರಸ್ತೆಗಳು ವಿಭಾಗದ ಕಾಮಗಾರಿಗಳು, ಮಳೆನೀರಿನ ಚರಂಡಿಗಳ ಕಾಮಗಾರಿಗಳು, ಸಂಸ್ಕೃತಿ ಮತ್ತು ಕ್ರೀಡೆಗೆ ಸಂಬಂಧಪಟ್ಟಂತೆ ಕ್ರೀಡಾಂಗಣ, ಆಟದ ಮೈದಾನ ಮತ್ತು ಉದ್ಯಾನವನದ ಕಾಮಗಾರಿಗೆ ಒಟ್ಟು ರೂ.1,26,478.97 ಲಕ್ಷಗಳನ್ನು 2010-11 ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. ಇವುಗಳಲ್ಲಿ ರೂ.70,745.00 ಲಕ್ಷಗಳನ್ನು ಯೋಜನಾ ವಿಭಾಗದ ಕಾಮಗಾರಿಗಳಿಗೆ ರೂ.15,255.00 ಲಕ್ಷಗಳನ್ನು ಜೆ.ಎನ್.ಎನ್.ಯು.ಆರ್.ಎಂ. ಕಾಮಗಾರಿಗಳಿಗೆ ಹಾಗೂ ರೂ.3000.00 ಲಕ್ಷಗಳನ್ನು ಮೆಗಾಸಿಟಿ ಯೋಜನೆಯ ಕಾಮಗಾರಿಗಳಿಗೆ ಸಾಲ ಪಡೆಯಲು 2010-11 ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.89000.00 ಲಕ್ಷಗಳನ್ನು ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಈ ಕೆಳಕಂಡ ಲೆಕ್ಕ ಶೀರ್ಷಿಕೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.

..........................2

| ಆಯವ್ಯಯ ಪುಸ್ತಕದ ಕ್ರಮ ಸಂಖ್ಯೆ | | ಲೆಕ್ಕ ಶೀರ್ಷಿಕೆಯ ವಿವರ | ಆಯವ್ಯಯ ಪುಸ್ತಕದ ಪು.ಸಂ. | 2010-11 ನೇ ಸಾಲಿಗೆ ಬೇಕಾಗುವ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 19 | | ಕಾಮಗಾರಿ ಯೋಜನಾ ಶಾಖೆ | | |
| | 1 | ಇತರೆ ಮೂಲಭೂತ ಸೌಕರ್ಯ ಕಾಮಗಾರಿಗಳು | 102-106 | 4766.73 |
| | 2 | ಆರ್.ಓ.ಬಿ/ಆರ್.ಯು.ಬಿ.ಗಳು | 106-109 | 6444.80 |
| | 3 | ಕ್ರೀಡಾಂಗಣ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 109-111 | 3600.23 |
| | 4 | ಸುರಂಗಮಾರ್ಗಗಳು | 110-111 | 1647.68 |
| | 5 | ಮೂಲಭೂತ ಸೌಕರ್ಯ ಕಾಮಗಾರಿಗಳು (ಚಾಮರಾಜಪೇಟೆ ರುದ್ರಭೂಮಿ ಮತ್ತು ಹರಿಶ್ಚಂದ್ರ ಘಾಟ್) | 112 | 105.06 |
| | 6 | ರಸ್ತೆಗೆ ಸಂಬಂಧಿಸಿದ ಕೆಲಸಗಳು (ರಸ್ತೆ ಮೇಲು ಸೇತುವೆ) | 113-115 | 3796.61 |
| | 7 | ರಸ್ತೆಗೆ ಸಂಬಂಧಪಟ್ಟ ಕೆಲಸಗಳು | 115 | 21146.03 |
| 20 | | ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | | |
| | 1 | ಕೂಡು ರಸ್ತೆಗಳ ಅಭಿವೃದ್ಧಿ (ಬೃಹತ್ ರಸ್ತೆಗಳು) ರಸ್ತೆಗೆ ಸಂಬಂಧಪಟ್ಟ ಕೆಲಸಗಳು | 125-126 | 25883.70 |
| | 2 | ರಸ್ತೆ ಅಗಲೀಕರಣ | 126-128 | 30303.61 |
| 21 | 1 | ಮಳೆನೀರಿನ ಚರಂಡಿಗಳ ಕಾಮಗಾರಿಗಳು (ಜೆ.ಎನ್.ಎನ್.ಯು.ಆರ್.ಎಂ.) | 129 | 19969.00 |
| | 2 | ಇತರೆ ಕಾಮಗಾರಿಗಳು ಕೊಳಚೆ ಚರಂಡಿ ಮೋರಿಗಳ ಕಾಮಗಾರಿಗಳು | 130 | 6264.00 |
| 24 | | ಸಂಸ್ಕೃತಿ ಮತ್ತು ಕ್ರೀಡೆ: ಮೂಲಭೂತ ಸೌಕರ್ಯಗಳು ಕ್ರೀಡಾಂಗಣ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 137-139 | 9551.52 |
| | | ಒಟ್ಟು | | 126478.97 |

ಮೇಲ್ಕಂಡ ಲೆಕ್ಕಶೀರ್ಷಿಕೆಯಲ್ಲಿನ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ 2010-11 ನೇ ಸಾಲಿನಲ್ಲಿ ವಿವಿಧ ಹಣಕಾಸು ಸಂಸ್ಥೆಗಳಿಂದ ಬ್ಯಾಂಕುಗಳಿಂದ ರೂ.860.00 ಕೋಟಿಗಳ ಸಾಲ ಪಡೆಯಲು ದಿನಾಂಕ: 29-09-2011 ರಂದು ನಡೆದ ಪಾಲಿಕೆಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಈ ಮೊತ್ತದಲ್ಲಿ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ರೂ.250.00 ಕೋಟಿ ಸಾಲವನ್ನು ಪಡೆಯಲು ಅನುಮೋದನೆಯನ್ನು ನೀಡಲಾಗಿರುತ್ತದೆ. ಈ ಅನುಮೋದನೆಯಂತೆ ರೂ.250.00 ಕೋಟಿ ಸಾಲವನ್ನು ಪಡೆಯಲಾಗಿದೆ.

ದಿನಾಂಕ:18-10-2010 ರಂದು ರೂ.860.00 ಕೋಟಿ ಸಾಲವನ್ನು ವಿವಿಧ ಬ್ಯಾಂಕ್‌ಗಳಿಂದ ಪಡೆಯಲು ಅನುಮೋದನೆ ಕೋರಿ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ 2010-11 ನೇ ಸಾಲಿನಲ್ಲಿ ಪುನ: ರೂ.250.00 ಕೋಟಿ ಸಾಲವನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆಯಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-01-2011 ರ ಟಿಪ್ಪಣಿ ಮತ್ತು ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 221/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ದಿನಾಂಕ:25-11-2010 ರಂದು ಪತ್ರ ಬರೆದು ಕಲ್ಯಾಣ ವಿಭಾಗದ ಹಳೆಯ ಮೂರು ವಲಯಗಳಲ್ಲಿ (ಹಳೆಯ 100 ವಾರ್ಡ್‌ಗಳು) ಒಂದು ವಾರ್ಡಿಗೆ 2 ರಂತೆ ಸುಮಾರು 200 ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದ್ದು, ಈಗ ಹೊಲಿಗೆ ತರಬೇತಿ ಕೇಂದ್ರಗಳನ್ನು ಎಲ್ಲಾ 08 ವಲಯಗಳ 198 ವಾರ್ಡ್‌ಗಳಿಗೆ ತಲಾ ಒಂದು ವಾರ್ಡಿಗೆ ಒಂದು ಹೊಲಿಗೆ ಯಂತ್ರ ತರಬೇತಿ ಕೇಂದ್ರದಂತೆ ವಿಂಗಡಣೆ ಮಾಡಿ ವಿಸ್ತರಿಸಿದಲ್ಲಿ ಎಲ್ಲಾ ವಲಯಗಳಲ್ಲಿರುವ ನಿರುದ್ಯೋಗಿ ಮಹಿಳೆಯರಿಗೆ ಅನುಕೂಲವಾಗುತ್ತದೆಂದು ಪತ್ರ ಬರೆದು ಕೋರಿರುತ್ತಾರೆ.

ಈ ಮೇಲ್ಕಂಡ ಪತ್ರದೊಂದಿಗೆ ಶ್ರೀಮತಿ. ಕವಿತಾ ಬಾಬುರಾಜ್, ಪಾಲಿಕೆ ಸದಸ್ಯರು, ವಾರ್ಡ್ ನಂ.191, ಸಿಂಗಸಂದ್ರ ರವರು ಸಹ ದಿನಾಂಕ:16-11-2010 ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಸಿಂಗಸಂದ್ರ ವಾರ್ಡಿನಲ್ಲಿ ಬಡಕುಟುಂಬಕ್ಕೆ ಸೇರಿದ ಮಹಿಳೆಯರು ವಾಸವಾಗಿದ್ದು, ಇವರಿಗೆಲ್ಲಾ ಸ್ವಯಂ ಉದ್ಯೋಗಕ್ಕಾಗಿ ಅನುಕೂಲವಾಗುವಂತೆ ಹೊಸ ವಲಯಗಳಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ತೆರೆಯಲು ಅನುಮತಿ ಕಲ್ಪಿಸಿ ಕೊಡಬೇಕೆಂದು ಕೋರಿದ್ದು, ಇದಕ್ಕೆ ಮಾನ್ಯ ಆಯುಕ್ತರು **"ಒಪ್ಪಿದೆ"** ಎಂದು ಆದೇಶಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:27-04-2000 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:61(52) ರಲ್ಲಿ ಒಂದು ವಾರ್ಡಿಗೆ 02 ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲು ಅನುಮೋದನೆಯಾಗಿರುತ್ತದೆ. ಅದರಂತೆ, ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ರಾಜರಾಜೇಶ್ವರಿ ನಗರ ವಲಯಗಳಲ್ಲಿ ಒಟ್ಟು 198 ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿರುತ್ತದೆ. (ವಲಯಗಳ ಪುನರ್ ವಿಂಗಡಣೆ ಸಮಯದಲ್ಲಿ ಪಶ್ಚಿಮ ವಲಯದ ಒಟ್ಟು 07 ತರಬೇತಿ ಕೇಂದ್ರಗಳು ರಾಜರಾಜೇಶ್ವರಿ ನಗರ ವಲಯಕ್ಕೆ ವರ್ಗಾವಣೆಗೊಂಡಿರುತ್ತದೆ.)

ಸದರಿ ನಿರ್ಣಯದಂತೆ, ಈ ಹಿಂದಿನ ನೂರು ವಾರ್ಡ್‌ಗಳ ವ್ಯಾಪ್ತಿಯಲ್ಲಿ ಪ್ರತಿ ವಾರ್ಡಿಗೆ ಎರಡು (02) ಹೊಲಿಗೆ ತರಬೇತಿ ಕೇಂದ್ರಗಳಂತೆ ಒಟ್ಟು 198 ಹೊಲಿಗೆ ತರಬೇತಿ ಕೇಂದ್ರಗಳನ್ನು ಈ ಕೆಳಕಂಡಂತೆ ನಡೆಸಲಾಗುತ್ತಿದೆ.

| ಕ್ರ.ಸಂ. | ವಲಯದ ಹೆಸರು | ಒಟ್ಟು ಹೊಲಿಗೆ ತರಬೇತಿ ಕೇಂದ್ರಗಳು | ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕಿಯರು |
|---|---|---|---|
| 1 | ಪೂರ್ವ | 68 | 62 |
| 2 | ಪಶ್ಚಿಮ | 64 | 64 |
| 3 | ದಕ್ಷಿಣ | 59 | 59 |
| 4 | ರಾಜರಾಜೇಶ್ವರಿನಗರ | 07 | 07 |
| **ಒಟ್ಟು** | | **198** | **192** |

..........................2

ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರು ಕೋರಿರುವ ಹಳೆಯ 03 ವಲಯಗಳಲ್ಲಿ ನಡೆಯುತ್ತಿರುವ 198 ಹೊಲಿಗೆ ತರಬೇತಿ ಕೇಂದ್ರಗಳನ್ನು ಹಾಲಿ 08 ವಲಯಗಳಾದ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ಯಲಹಂಕ, ದಾಸರಹಳ್ಳಿ ಹಾಗೂ ರಾಜರಾಜೇಶ್ವರಿ ನಗರಗಳಲ್ಲಿರುವ ಒಟ್ಟು 198 ವಾರ್ಡ್‌ಗಳಿಗೆ ಪ್ರತಿ ವಾರ್ಡಿಗೆ ಒಂದು ಕೇಂದ್ರದಂತೆ ವಿಂಗಡಣೆ ಮಾಡಲು ತೀರ್ಮಾನ ತೆಗೆದುಕೊಳ್ಳಲು ಒಂದು ಕಾರ್ಯನೀತಿಯನ್ನು (Policy) ರೂಪಿಸಬೇಕಾಗಿರುತ್ತದೆ.

ಆದಕಾರಣ, ಮೇಲ್ಕಂಡ ವಿಷಯದ ಬಗ್ಗೆ ಕಾರ್ಯನೀತಿಯನ್ನು ರೂಪಿಸುವ ಬಗ್ಗೆ ತೀರ್ಮಾನಕ್ಕಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-12-2010 ರ ಟಿಪ್ಪಣಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ 100 ವಾರ್ಡಿಗಳೊಂದಿಗೆ ಏಳು ಸಿ.ಎಂ.ಸಿ. ಒಂದು ಟಿ.ಎಂ.ಸಿ ಹಾಗೂ 110 ಹಳ್ಳಿಗಳನ್ನು ಸೇರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಅಸ್ತಿತ್ವಕ್ಕೆ ಬಂದಿದೆ. 100 ವಾರ್ಡ್‌ಗಳಲ್ಲಿ ಪ್ರತಿ ವಾರ್ಡಿಗೆ ಎರಡರಂತೆ ಒಟ್ಟು 198 ಹೊಲಿಗೆ ತರಬೇತಿ ಕೇಂದ್ರಗಳನ್ನು ಹಾಲಿ ನಡೆಸಲಾಗುತ್ತಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ತರಬೇತಿ ಕೇಂದ್ರಗಳನ್ನು 198 ವಾರ್ಡಿಗೆ ವಿಸ್ತರಿಸಬೇಕಾದ ಅಗತ್ಯವಿರುತ್ತದೆ.

ಈ ಹಿನ್ನಲೆಯಲ್ಲಿ, ಹಾಲಿ ಮೂರು ವಲಯಗಳಲ್ಲಿ ಇರುವ 198 ಹೊಲಿಗೆ ತರಬೇತಿ ಕೇಂದ್ರಗಳನ್ನು (ಹಳೆ ವಾರ್ಡಿನಲ್ಲಿರುವ ಎರಡು ತರಬೇತಿ ಕೇಂದ್ರಗಳ ಬದಲಾಗಿ ಒಂದನ್ನು ಉಳಿಸಿಕೊಂಡು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಪ್ರತಿ ವಾರ್ಡಿಗೆ ಒಂದರಂತೆ ವಿಂಗಡಿಸಿ, ಆಯಾಯ ವಾರ್ಡಿನ ನಗರ ಸಭಾ ಸದಸ್ಯರು ಸೂಚಿಸುವ ಸ್ಥಳದಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು, ವಾರ್ಡಿನ ವ್ಯಾಪ್ತಿಯಲ್ಲಿ ನಗರ ಪಾಲಿಕೆಯ ಕಟ್ಟಡ ಇಲ್ಲದಿದ್ದ ಪಕ್ಷದಲ್ಲಿ ಕಟ್ಟಡವನ್ನು ಬಾಡಿಗೆಗೆ ಪಡೆದು ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಹಾಗೂ ವಾರ್ಡಿನ ವ್ಯಾಪ್ತಿಯು ಭೌಗೋಳಿಕವಾಗಿ ವಿಸ್ತಾರವಾಗಿದ್ದಲ್ಲಿ ಮತ್ತು ವಾರ್ಡಿನ ವ್ಯಾಪ್ತಿಯಲ್ಲಿ ಹೊಲಿಗೆ ತರಬೇತಿಗೆ ಹೆಚ್ಚಿನ ಅರ್ಜಿದಾರರು ಲಭ್ಯವಿದ್ದಲ್ಲಿ, ಅಂತಹ ವಾರ್ಡಿನಲ್ಲಿ ಒಂದಕ್ಕಿಂತ ಹೆಚ್ಚಿನ ಕೇಂದ್ರಗಳನ್ನು ಪ್ರಾರಂಭಿಸಲು ಸಮಿತಿಯು ತೀರ್ಮಾನಿಸಿ, ಅನುಮೋದನೆಗಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:29-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 29-01-2011ರ ನಿರ್ಣಯವನ್ನು ಒಪ್ಪುತ್ತಾ, ಹಾಲಿ ಮೂರು ವಲಯಗಳಲ್ಲಿ ಇರುವ 198 ಹೊಲಿಗೆ ತರಬೇತಿ ಕೇಂದ್ರಗಳನ್ನು ಹಳೆ ವಾರ್ಡಿನಲ್ಲಿರುವ ಎರಡು ತರಬೇತಿ ಕೇಂದ್ರಗಳ ಬದಲಾಗಿ (ಅವಶ್ಯಕತೆಗೆ ತಕ್ಕಂತೆ ಎರಡು ಕೇಂದ್ರಗಳನ್ನು ಮೀರದಂತೆ) ಒಂದನ್ನು ಉಳಿಸಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಪ್ರತಿ ವಾರ್ಡಿಗೆ ಒಂದರಂತೆ ವಿಂಗಡಿಸಿ, ಆಯಾಯ ವಾರ್ಡಿನ ನಗರ ಸಭಾ ಸದಸ್ಯರು ಸೂಚಿಸುವ ಸ್ಥಳದಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು, ವಾರ್ಡಿನ ವ್ಯಾಪ್ತಿಯಲ್ಲಿ ನಗರ ಪಾಲಿಕೆಯ ಕಟ್ಟಡ ಇಲ್ಲದಿದ್ದ ಪಕ್ಷದಲ್ಲಿ ಕಟ್ಟಡವನ್ನು ಬಾಡಿಗೆಗೆ ಪಡೆದು ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಹಾಗೂ ವಾರ್ಡಿನ ವ್ಯಾಪ್ತಿಯು ಭೌಗೋಳಿಕವಾಗಿ ವಿಸ್ತಾರವಾಗಿದ್ದಲ್ಲಿ ಮತ್ತು ವಾರ್ಡಿನ ವ್ಯಾಪ್ತಿಯಲ್ಲಿ ಹೊಲಿಗೆ ತರಬೇತಿಗೆ ಹೆಚ್ಚಿನ ಅರ್ಜಿದಾರರು ಲಭ್ಯವಿದ್ದಲ್ಲಿ, ಅಂತಹ ವಾರ್ಡಿನಲ್ಲಿ ಒಂದಕ್ಕಿಂತ ಹೆಚ್ಚಿನ ಕೇಂದ್ರಗಳನ್ನು ಪ್ರಾರಂಭಿಸುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 29-01-2011ರ ನಿರ್ಣಯವನ್ನು ಒಪ್ಪುತ್ತಾ, ಹಾಲಿ ಮೂರು ವಲಯಗಳಲ್ಲಿ ಇರುವ 198 ಹೊಲಿಗೆ ತರಬೇತಿ ಕೇಂದ್ರಗಳನ್ನು ಹಳೆ ವಾರ್ಡಿನಲ್ಲಿರುವ ಎರಡು ತರಬೇತಿ ಕೇಂದ್ರಗಳ ಬದಲಾಗಿ (ಅವಶ್ಯಕತೆಗೆ ತಕ್ಕಂತೆ ಎರಡು ಕೇಂದ್ರಗಳನ್ನು ಮೀರದಂತೆ) ಒಂದನ್ನು ಉಳಿಸಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಪ್ರತಿ ವಾರ್ಡಿಗೆ ಒಂದರಂತೆ ವಿಂಗಡಿಸಿ, ಆಯಾಯ ವಾರ್ಡಿನ ನಗರ ಸಭಾ ಸದಸ್ಯರು ಸೂಚಿಸುವ ಸ್ಥಳದಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು, ವಾರ್ಡಿನ ವ್ಯಾಪ್ತಿಯಲ್ಲಿ ನಗರ ಪಾಲಿಕೆಯ ಕಟ್ಟಡ ಇಲ್ಲದಿದ ಪಕ್ಷದಲ್ಲಿ ಕಟ್ಟಡವನ್ನು ಬಾಡಿಗೆಗೆ ಪಡೆದು ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಹಾಗೂ ವಾರ್ಡಿನ ವ್ಯಾಪ್ತಿಯು ಬೌಗೋಳಿಕವಾಗಿ ವಿಸ್ತಾರವಾಗಿದ್ದಲ್ಲಿ ಮತ್ತು ವಾರ್ಡಿನ ವ್ಯಾಪ್ತಿಯಲ್ಲಿ ಹೊಲಿಗೆ ತರಬೇತಿಗೆ ಹೆಚ್ಚಿನ ಅರ್ಜಿದಾರರು ಲಭ್ಯವಿದ್ದಲ್ಲಿ, ಅಂತಹ ವಾರ್ಡಿನಲ್ಲಿ ಒಂದಕ್ಕಿಂತ ಹೆಚ್ಚಿನ ಕೇಂದ್ರಗಳನ್ನು ಪ್ರಾರಂಭಿಸುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01–02–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 222/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು, ಉಪ ಮಹಾಪೌರರು ಮತ್ತು ಸದಸ್ಯರುಗಳಿಗೆ ಗೌರವ ಸಂಭಾವನೆ, ವಾಹನ ಭತ್ಯೆ, ಸಭಾಭತ್ಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 94 ಎಂಎಲ್ಆರ್ 2010 (ಭಾಗ) ಬೆಂಗಳೂರು ದಿನಾಂಕ:05–01–2011 ರಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದರೆ, 97 ರ ಸರ್ಕಾರಿ ಆದೇಶದ ದಿನಾಂಕದಿಂದ 2 ತಿಂಗಳಿಗೊಮ್ಮೆ ರೂ.750/– ರಂತೆ ದೂರವಾಣಿ ಭತ್ಯೆಯನ್ನು ನೀಡಲಾಗುತ್ತಿರುವುದನ್ನು, ಇದುವರೆವಿಗೂ ಪರಿಷ್ಕರಿಸದೇ ಇರುವ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರುಗಳಿಗೆ ಸ್ಥಿರ/ಸಂಚಾರಿ ದೂರವಾಣಿ ಭತ್ಯೆ ಮಾಸಿಕ ರೂ.3000/– ಗಳನ್ನು ನೀಡಲು ಪಾಲಿಕೆಯ ಸಭೆಯ ಅನುಮೋದನೆ ಕೋರಲು ಮಂಡಿಸಿರುವ ತೆರಿಗೆ ಮತ್ತು ಆರ್ಥಿಕ ಸಮಿತಿಯ ದಿನಾಂಕ:10–01–2011 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–01–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01–02–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 223/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ 260 ಶಿಕ್ಷಕಿಯರು, 24 ಮೇಲ್ವಿಚಾರಕರು, 3 ಹೊಲಿಗೆ ಯಂತ್ರ ದುರಸ್ಥಿಗಾರರು ಗೌರವಧನ ಆಧಾರದ ಮೇಲೆ ನೇಮಕಗೊಂಡು ಕೆಲಸ ನಿರ್ವಹಿಸುತ್ತಿದ್ದಾರೆ.

ಸದರಿ ನಾಕರರುಗಳು ಸುಮಾರು 20–22 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, ಪ್ರಸ್ತುತ, ಶಿಕ್ಷಕಿಯರಿಗೆ ಮಾಸಿಕ ರೂ.4,000–00 ಮೇಲ್ವಿಚಾರಕರು ಮಾಸಿಕ ರೂ.4,500–00 ಹಾಗೂ ದುರಸ್ಥಿಗಾರರು ಮಾಸಿಕ ರೂ.4,250–00 ಗೌರವಧನ ನೀಡಲಾಗುತ್ತಿದ್ದು, ಇದರಿಂದ ಮಕ್ಕಳ ವಿದ್ಯಾಭ್ಯಾಸದ ವೆಚ್ಚ, ಮನೆ ಬಾಡಿಗೆ, ದಿನಸಿಗಳು, ವಿದ್ಯುತ್/ನೀರಿನ ಬಿಲ್ಲುಗಳ ಪಾವತಿ ಸೇರಿದಂತೆ ದಿನನಿತ್ಯದ ಎಲ್ಲಾ ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿದ್ದು, ಇದರಿಂದ ಜೀವನ ನಿಭಾಯಿಸಲು ತುಂಬಾ ಕಷ್ಟಕರವಾಗಿದ್ದು, ತಮ್ಮಗಳ ಗೌರವ ಧನವನ್ನು ರೂ.10,000–00 ಗಳಿಗೆ ಹೆಚ್ಚಿಸಬೇಕೆಂದು ಸಲ್ಲಿಸಿರುವ ಸದರಿ ನೌಕರರುಗಳ ಮನವಿಯನ್ನು ಪರಿಗಣಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಪೂಜ್ಯ ಮಹಾಪೌರರ ದಿನಾಂಕ: 07–01–2011 ರ ಟಿಪ್ಪಣಿ ಹಾಗೂ ಪ್ರಸ್ತುತ ಕಲ್ಯಾಣ ಇಲಾಖೆಯಲ್ಲಿ ಗೌರವಧನ ಆಧಾರದ ಮೇಲೆ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ಶಿಕ್ಷಕಿಯರು, ಮೇಲ್ವಿಚಾರಕರು ಹಾಗೂ ದುರಸ್ಥಿಗಾರರಿಗೆ ಹಾಲಿ ನೀಡುತ್ತಿರುವ ಮಾಸಿಕ ಗೌರವಧನ ಇಂದಿನ ದಿನಗಳಲ್ಲಿ ಕಡಿಮೆಯೆಂದು ಕಂಡುಬರುವುದರಿಂದ ಅವರ ಮನವಿಯನ್ನು ಮಾನವೀಯತೆಯ ದೃಷ್ಟಿಯಿಂದ ಪರಿಗಣಿಸಿ ಹಾಲಿ ಪಡೆಯುತ್ತಿರುವ ಮಾಸಿಕ ಗೌರವಧನಕ್ಕೆ ಹೆಚ್ಚುವರಿಯಾಗಿ ರೂ.2000–00 ಗಳನ್ನು ಸೇರಿಸಿ 2011–ಜನವರಿ ಮಾಹೆಯಿಂದ ಗೌರವಧನವನ್ನು ಹೊಸದಾಗಿ ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸಮಿತಿಯ ದಿನಾಂಕ:10–01–2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–01–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:01–02–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ: 224/2010–11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟು ವಲಯಗಳಲ್ಲಿ ಎಂಟು ಉಪ ಆಯುಕ್ತರ ಹುದ್ದೆಗಳಿದ್ದು, ಸದರಿ ಎಂಟು ಉಪ ಆಯುಕ್ತರ ಹುದ್ದೆಗಳನ್ನು ನಗರ ಪಾಲಿಕೆಯ ಖಾಯಂ ಅಧಿಕಾರಿಗಳಿಂದಲೇ ನಿರ್ವಹಿಸಿದ್ದಲ್ಲಿ, ಉತ್ತಮವಾದ ಆಡಳಿತವನ್ನು ನೀಡಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾಯಂ ಕಂದಾಯ ಅಧಿಕಾರಿಗಳಾಗಿ ನಿರ್ವಹಿಸುತ್ತಿರುವವರಿಗೆ ಉಪ ಆಯುಕ್ತರವರ ಹುದ್ದೆಗೆ ಬಡ್ತಿ ನೀಡಿ ಎಂಟು ವಲಯಗಳಿಗೆ ನೇಮಕ ಮಾಡುವುದು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟು ವಲಯಗಳಲ್ಲಿ ಎಂಟು ಉಪ ಆಯುಕ್ತರ ಹುದ್ದೆಗಳಿದ್ದು, ಸದರಿ ಎಂಟು ಉಪ ಆಯುಕ್ತರ ಹುದ್ದೆಗಳನ್ನು ನಗರ ಪಾಲಿಕೆಯ ಖಾಯಂ ಅಧಿಕಾರಿಗಳಿಂದಲೇ ನಿರ್ವಹಿಸಿದ್ದಲ್ಲಿ, ಉತ್ತಮವಾದ ಆಡಳಿತವನ್ನು ನೀಡಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾಯಂ ಕಂದಾಯ ಅಧಿಕಾರಿಗಳಾಗಿ ನಿರ್ವಹಿಸುತ್ತಿರುವವರಿಗೆ ಉಪ ಆಯುಕ್ತರವರ ಹುದ್ದೆಗೆ ಬಡ್ತಿ ನೀಡಿ ಎಂಟು ವಲಯಗಳಿಗೆ ನೇಮಕ ಮಾಡುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜ)

ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 225/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಲಕ್ಷ್ಮಣರಾವ್ ರವರು ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ಅಧಿಕಾರಿಯಾಗಿ ಹಲವಾರು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ, ಬೆಂಗಳೂರು ನಗರವನ್ನು ಹಸಿರು ನಗರವನ್ನಾಗಿಸಲು ಹಾಗೂ ನಗರದ ಏಳಿಗೆಗೆ ಶ್ರಮವಹಿಸಿರುತ್ತಾರೆ. ವಾರ್ಡ್-179, ಶಾಕಂಬರಿನಗರದಲ್ಲಿರುವ ಲಕ್ಷ್ಮಣರಾವ್ ಬುಲೆವಾರ್ಡ್‌ನಲ್ಲಿ ಲಕ್ಷ್ಮಣರಾವ್ ರವರು ಪುತ್ಥಳಿಯನ್ನು ಅನಾವರಣಗೊಳಿಸಬೇಕೆಂದು ಸ್ಥಳೀಯ ಸಾರ್ವಜನಿಕರು ಹಾಗೂ ನಗರ ಪಾಲಿಕೆ ಸದಸ್ಯರು ಕೋರಿರುವುದರಿಂದ, ವಾರ್ಡ್-179, ಶಾಕಂಬರಿನಗರದಲ್ಲಿರುವ ಲಕ್ಷ್ಮಣರಾವ್ ಬುಲೆವಾರ್ಡ್‌ನಲ್ಲಿ ಲಕ್ಷ್ಮಣರಾವ್ ರವರ ಪುತ್ಥಳಿಯನ್ನು ಅನಾವರಣಗೊಳಿಸಲು ಅಗತ್ಯ ಕ್ರಮ ವಹಿಸಲು ಆಯುಕ್ತರವರಿಗೆ ಸೂಚಿಸಲು ಈ ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಲಕ್ಷ್ಮಣರಾವ್ ರವರು ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ಅಧಿಕಾರಿಯಾಗಿ ಹಲವಾರು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ, ಬೆಂಗಳೂರು ನಗರವನ್ನು ಹಸಿರು ನಗರವನ್ನಾಗಿಸಲು ಹಾಗೂ ನಗರದ ಏಳಿಗೆಗೆ ಶ್ರಮವಹಿಸಿರುತ್ತಾರೆ. ವಾರ್ಡ್-179, ಶಾಕಂಬರಿನಗರದಲ್ಲಿರುವ ಲಕ್ಷ್ಮಣರಾವ್ ಬುಲೆವಾರ್ಡ್‌ನಲ್ಲಿ ಲಕ್ಷ್ಮಣರಾವ್ ರವರು ಪುತ್ಥಳಿಯನ್ನು ಅನಾವರಣಗೊಳಿಸಬೇಕೆಂದು ಸ್ಥಳೀಯ ಸಾರ್ವಜನಿಕರು ಹಾಗೂ ನಗರ ಪಾಲಿಕೆ ಸದಸ್ಯರು ಕೋರಿರುವುದರಿಂದ, ವಾರ್ಡ್-179, ಶಾಕಂಬರಿನಗರದಲ್ಲಿರುವ ಲಕ್ಷ್ಮಣರಾವ್ ಬುಲೆವಾರ್ಡ್‌ನಲ್ಲಿ ಲಕ್ಷ್ಮಣರಾವ್ ರವರ ಪುತ್ಥಳಿಯನ್ನು ಅನಾವರಣಗೊಳಿಸಲು ಅಗತ್ಯ ಕ್ರಮ ವಹಿಸಲು ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ. ನಟರಾಜ)**
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

### ವಿಷಯದ ಸಂಖ್ಯೆ: 226/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕರ್ನಾಟಕ ರತ್ನ, ಭಾರತ ರತ್ನ ಭೂಷಣರಾಗಿದ್ದ ಗಾನ ಗಂಧರ್ವ ಪಂಡಿತ್ ಭೀಮಸೇನ್ ಜೋಶಿರವರು ದಿನಾಂಕ:24-01-2011 ರಂದು ದೈವಾಧೀನರಾಗಿದ್ದು, ದಿವಂಗತರು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯಲ್ಲಿ ಜನಿಸಿ, ಭಾರತೀಯ ಸಂಗೀತ ಪರಂಪರೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳಸಿರುತ್ತಾರೆ. ಸ್ವರ ಸಾಮ್ರಾಟರ ನಿಧನದಿಂದಾಗಿ, ಹಿಂದೂಸ್ತಾನಿ ಸಂಗೀತದ ಒಂದು ಯುಗ ಅಂತ್ಯ ಕಂಡಿದೆ.

ದಿವಂಗತರು ಸಂಗೀತ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ. ಗಂಗಭೈರಯ್ಯ ರವರು, ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಕರ್ನಾಟಕ ರತ್ನ, ಭಾರತ ರತ್ನ ಭೂಷಣರಾಗಿದ್ದ ಗಾನ ಗಂಧರ್ವ ಪಂಡಿತ್ ಭೀಮಸೇನ್ ಜೋಶಿರವರು ದಿನಾಂಕ:24-01-2011 ರಂದು ದೈವಾಧೀನರಾಗಿದ್ದು, ದಿವಂಗತರು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯಲ್ಲಿ ಜನಿಸಿ, ಭಾರತೀಯ ಸಂಗೀತ ಪರಂಪರೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳಸಿರುತ್ತಾರೆ. ಸ್ವರ ಸಾಮ್ರಾಟರ ನಿಧನದಿಂದಾಗಿ, ಹಿಂದೂಸ್ತಾನಿ ಸಂಗೀತದ ಒಂದು ಯುಗ ಅಂತ್ಯ ಕಂಡಿದೆ.

ದಿವಂಗತರು ಸಂಗೀತ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಸಭೆಯು ಪ್ರಾರ್ಥಿಸುತ್ತದೆ".

(ಎಸ್.ಕೆ. ನಟರಾಜ)
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

**ವಿಷಯದ ಸಂಖ್ಯೆ: 227/2010-11**

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್ ನಂ.180, ಬನಶಂಕರಿ ದೇವಸ್ಥಾನ ವಿಭಾಗದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದ ಮಹಮ್ಮದ್ ಆಲಿ ರವರು ದಿನಾಂಕ:16-01-2011 ರಂದು ದುಷ್ಕರ್ಮಿಗಳ ದಾಳಿಯಿಂದ ತುತ್ತಾಗಿ ನಿಧನರಾಗಿರುತ್ತಾರೆ. ದಿವಂಗತರು ನಗರ ಪಾಲಿಕೆ ಸದಸ್ಯರಾಗಿ, ಎಲ್ಲ ಸದಸ್ಯರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದು, ಅವರ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ.

ದಿವಂಗತರು ಸಲ್ಲಿಸಿರುವ ಸೇವೆಯನ್ನು ಇಮದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ. ಗಂಗಭೈರಯ್ಯ ರವರು, ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್ ನಂ.180, ಬನಶಂಕರಿ ದೇವಸ್ಥಾನ ವಿಭಾಗದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದ ಮಹಮ್ಮದ್ ಆಲಿ ರವರು ದಿನಾಂಕ:16-01-2011 ರಂದು ದುಷ್ಕರ್ಮಿಗಳ ದಾಳಿಯಿಂದ ತುತ್ತಾಗಿ ನಿಧನರಾಗಿರುತ್ತಾರೆ. ದಿವಂಗತರು ನಗರ ಪಾಲಿಕೆ ಸದಸ್ಯರಾಗಿ, ಎಲ್ಲ ಸದಸ್ಯರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದು, ಅವರ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ.

ದಿವಂಗತರು ಸಲ್ಲಿಸಿರುವ ಸೇವೆಯನ್ನು ಇಮದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಸಭೆಯು ಪ್ರಾರ್ಥಿಸುತ್ತದೆ".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)

ಮಹಾಪೌರರು.

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ: 228/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕ 2011 (Bill No.1 of 2011), ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಳೀಯ ಸದಸ್ಯರು ಶಿಫಾರಸ್ಸು ಮಾಡುವವರನ್ನು ಪ್ರದೇಶ ಸಭಾಗಳು ಮತ್ತು ವಾರ್ಡ್ ಸಮಿತಿಗಳಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಹಾಗೂ ಸಾರ್ವಜನಿಕ ಕ್ಷೇಮಾಭಿವೃದ್ಧಿ ಸಂಸ್ಥೆಗಳು/ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಇಲ್ಲದ ವಾರ್ಡ್ ಪ್ರದೇಶಗಳಲ್ಲಿ ಹಾಗೂ ಕೊಳಚೆ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ಥಳೀಯ ಸದಸ್ಯರು ಶಿಫಾರಸ್ಸು ಮಾಡುವವರನ್ನು ವಾರ್ಡ್ ಸಮಿತಿ ಸದಸ್ಯರನ್ನಾಗಿ ನೇಮಿಸಲು ಹಾಗೂ ವಾರ್ಡ್ ಸಮಿತಿಯಲ್ಲಿ ತೆಗೆದುಕೊಳ್ಳಲಾಗುವ ತೀರ್ಮಾನಗಳು ಸ್ಥಳೀಯ ನಗರ ಪಾಲಿಕೆ ಸದಸ್ಯರ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆಂದು ಈ ಸಭೆಯು ಅಭಿಪ್ರಾಯಿಸುತ್ತಾ, ಈ ನಿಯಮವನ್ನು ತಿದ್ದುಪಡಿಗಳಲ್ಲಿ ಅಳವಡಿಸುವಂತೆ ಸರ್ಕಾರವನ್ನು ಕೋರುವುದು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕ 2011 (Bill No.1 of 2011), ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಳೀಯ ಸದಸ್ಯರು ಶಿಫಾರಸ್ಸು ಮಾಡುವವರನ್ನು ಪ್ರದೇಶ ಸಭಾಗಳು ಮತ್ತು ವಾರ್ಡ್ ಸಮಿತಿಗಳಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಹಾಗೂ ಸಾರ್ವಜನಿಕ ಕ್ಷೇಮಾಭಿವೃದ್ಧಿ ಸಂಸ್ಥೆಗಳು/ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಇಲ್ಲದ ವಾರ್ಡ್ ಪ್ರದೇಶಗಳಲ್ಲಿ ಹಾಗೂ ಕೊಳಚೆ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ಥಳೀಯ ಸದಸ್ಯರು ಶಿಫಾರಸ್ಸು ಮಾಡುವವರನ್ನು ವಾರ್ಡ್ ಸಮಿತಿ ಸದಸ್ಯರನ್ನಾಗಿ ನೇಮಿಸಲು ಹಾಗೂ ವಾರ್ಡ್ ಸಮಿತಿಯಲ್ಲಿ ತೆಗೆದುಕೊಳ್ಳಲಾಗುವ ತೀರ್ಮಾನಗಳು ಸ್ಥಳೀಯ ನಗರ ಪಾಲಿಕೆ ಸದಸ್ಯರ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆಂದು ಈ ಸಭೆಯು ಅಭಿಪ್ರಾಯಿಸುತ್ತಾ, ಈ ನಿಯಮವನ್ನು ತಿದ್ದುಪಡಿಗಳಲ್ಲಿ ಅಳವಡಿಸುವಂತೆ ಸರ್ಕಾರವನ್ನು ಕೋರುವ ಬಗ್ಗೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಎಸ್.ಕೆ. ನಟರಾಜ)
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 1 (211)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ, ವಿದ್ಯಾ ಇಲಾಖೆಯಲ್ಲಿ ಒಂದು ಸಹಾಯಕ ವಿದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 738 ಡಿಪಿಐ 91(ಪಿ) ಬೆಂಗಳೂರು, ದಿನಾಂಕ:17-02-1995 ರ ಆದೇಶದಂತೆ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಮಂಜೂರಾಗಿರುವ ಒಂದು ಸಹಾಯಕ ವಿದ್ಯಾಧಿಕಾರಿ ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಉನ್ನತೀಕರಿಸಿ, ರೂ.2375-4450 ರ (2007 ರ ಪರಿಷ್ಕೃತ ವೇತನ ಶ್ರೇಣಿ ರೂ.14050-25050) ವೇತನ ಶ್ರೇಣಿ ನಿಗಧಿಪಡಿಸಲು ಪ್ರಧಾನ ಕಾರ್ಯದರ್ಶಿ, ಪಾಲಿಕೆಯ ಶಾಲಾ ಮತ್ತು ಶಿಕ್ಷಕರ ಸಂಘ ರವರ ಮನವಿ ದಿನಾಂಕ:14-05-2010 ರಂತೆ ಮನವಿ ಸಲ್ಲಿಸಿ, ಕೋರಿರುತ್ತಾರೆ.

ಸರ್ಕಾರದ ದಿನಾಂಕ:17-02-1995 ರ ಆದೇಶದಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ಶಿಕ್ಷಣಾಧಿಕಾರಿ ಹುದ್ದೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಉನ್ನತೀಕರಿಸಿ, ರೂ.2375-4450 ರ (2007 ರ ಪರಿಷ್ಕೃತ ವೇತನ ಶ್ರೇಣಿ ರೂ.14050-25050) ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗಿರುತ್ತದೆ.

ಈ ಸಂಬಂಧ, ಕ್ರಮವಾಗಿ ವಿದ್ಯಾಧಿಕಾರಿ ಹಾಗೂ ಮುಖ್ಯಲೆಕ್ಕಾಧಿಕಾರಿ ರವರುಗಳ ದಿನಾಂಕ: 17-06-2010 ಮತ್ತು 22-07-2010 ರಂದು ನೀಡಿರುವ ಅಭಿಪ್ರಾಯದ ಮೇರೆಗೆ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಮಂಜೂರಾಗಿರುವ ಒಂದು ಸಹಾಯಕ ವಿದ್ಯಾಧಿಕಾರಿ ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಉನ್ನತೀಕರಿಸಿ, ರೂ.2375-4450 ರ (2007 ರ ಪರಿಷ್ಕೃತ ವೇತನ ಶ್ರೇಣಿ ರೂ.14050-25050) ವೇತನ ಶ್ರೇಣಿಯನ್ನು ನಿಗಧಿಪಡಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:13-12-2010 ರ ಟಿಪ್ಪಣಿ ಮತ್ತು ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:12-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:12-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:12-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

**ವಿಷಯದ ಸಂಖ್ಯೆ: 2 (212)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾದ ಮೇಲೆ ಕಾರ್ಯವ್ಯಾಪ್ತಿಯು 800 ಚ.ಕಿ.ಮೀ ರಷ್ಟು ವಿಸ್ತಾರಗೊಂಡಿದ್ದು, ಅದನ್ನು ಆಡಳಿತಾತ್ಮಕ ದೃಷ್ಟಿಯಿಂದ 8 ವಲಯಗಳಾಗಿ ವಿಂಗಡಿಸಲಾಗಿದೆ. ವಲಯ ಮಟ್ಟದಲ್ಲಿರುವ ಪ್ರತಿಯೊಂದು ಇಲಾಖೆಗೂ ಅಧಿಕಾರಿಗಳನ್ನು ನೇಮಿಸಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲಾಗುತ್ತದೆ.

ಶ್ರೀ. ಶಿವಶರಣಪ್ಪ ಎಸ್.ಖಂಡ್ರೆ, ಉಪನ್ಯಾಸಕರು, ಓ.ಓ.ಡಿ ಮೇಲೆ ಉಪ ಸಾರ್ವಜನಿಕೆ ಸಂಪರ್ಕಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ:06-10-2010 ರ ಪತ್ರದಲ್ಲಿ, ವಲಯ ಮಟ್ಟದಲ್ಲಿ ಬರುವ ಸಾರ್ವಜನಿಕ ಕುಂದು ಕೊರತೆ, ಪತ್ರಿಕೆಗಳಲ್ಲಿ ಬರುವ ವರದಿ/ ಕುಂದು ಕೊರತೆಗಳಿಗೆ ಸ್ಪಂದಿಸುವ, ವಲಯ ಮಟ್ಟದಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ನಿರ್ವಹಣೆಯನ್ನು ಕೇಂದ್ರ ಕಛೇರಿಯ ಸಾರ್ವಜನಿಕ ಸಂಪರ್ಕ ವಿಭಾಗದಿಂದ ನಿರ್ವಹಿಸಲಾಗುತ್ತಿದೆ. ವಲಯ ಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇಲ್ಲದಿರುವುದರಿಂದ ಸದರಿ ಕೆಲಸಗಳನ್ನು ಅಷ್ಟೊಂದು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಈ ಸಂಬಂಧ ಮಾನ್ಯ ಆಯುಕ್ತರು ಹಲವಾರು ಬಾರಿ ಪ್ರಸ್ತಾಪಿಸಿ ಸಾರ್ವಜನಿಕ ಸಂಪರ್ಕ ವಿಭಾಗಕ್ಕೆ ಹೆಚ್ಚಿನ ಅಧಿಕಾರಿಗಳನ್ನು ನೇಮಿಸಿ ಅದನ್ನು ಬಲಪಡಿಸಲು ಸೂಚನೆ ನೀಡಿರುವಂತೆ, ಪಾಲಿಕೆಯ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಸಿಬ್ಬಂದಿ ವರ್ಗದವರು ಸಾರ್ವಜನಿಕ ಸಂಪರ್ಕ ಅಧಿಕಾರಿ/ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸುವ ಅವಶ್ಯಕ ವಿದ್ಯಾರ್ಹತೆಯನ್ನು ಅಂದರೆ PG Dip. in Public Relation/Mass Communication/Journalism ಹೊಂದಿರುತ್ತಾರೆ. ಈ ಹುದ್ದೆಗಳನ್ನು ಅರ್ಹತೆಯಿರುವ ಪಾಲಿಕೆಯ ಸಿಬ್ಬಂದಿಯವರಿಗೆ ಬಡ್ತಿ ನೀಡಿ ಭರ್ತಿ ಮಾಡುವುದರಿಂದ ಅಧಿಕಾರಿಗಳಲ್ಲಿ ಮನೋಸ್ಥೈರ್ಯ ಮತ್ತು ಕಾರ್ಯಕ್ಷಮತೆ ಹೆಚ್ಚಿಸಿದಂತಾಗುತ್ತದೆ. ಆದ್ದರಿಂದ, ಈಗಾಗಲೇ ಪಾಲಿಕೆಯಲ್ಲಿ 1-ಸಾರ್ವಜನಿಕ ಸಂಪರ್ಕಾಧಿಕಾರಿಯ ಹುದ್ದೆ ಇದ್ದು, ಹೊಸದಾಗಿ ಸೃಷ್ಟಿಯಾದ 5-ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಗೆ ವೇತನ ಶ್ರೇಣಿ ರೂ.11,400-21,600 ರಲ್ಲಿ ಭರ್ತಿ ಮಾಡಲು ವೃಂದ ನೇಮಕಾತಿಯನ್ನು ರೂಪಿಸಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾದ ನಂತರ ಸರ್ಕಾರವು ಸಂಖ್ಯೆ:ನಅಇ 141 ಎಂಎನ್ಆರ್ 2006, ದಿನಾಂಕ:09-03-2007 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 05-ಸಾರ್ವಜನಿಕ ಸಂಪರ್ಕಾಧಿಕಾರಿ / ಉಪ ಸಂಪರ್ಕಾಧಿಕಾರಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಅನುಮೋದನೆ ನೀಡಿರುತ್ತದೆ. ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯು ಎನ್ ಕೇಡರ್ ಹುದ್ದೆಯಾಗಿರುವುದಿಲ್ಲ.

ಬೆಂಗಳೂರು ಮಹಾನಗರ ಪಾಲಿಕೆಯ 1971 ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿ ವೃಂದಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ಅರ್ಹತೆ ಇರುತ್ತದೆ.

| Category | Method of Recruitment | Minimum Qualifications | Authority Competent to appoint |
|---|---|---|---|
| Public Relation Officer | By Promotion by Selection from the class 'B' posts viz., Manager, Council Secretary, Dy.Revenue Officer | Prescribed as detailed in Annexure-1.<br>A minimum of 2 years service in the lower cadre in the corporation for promotion | By the corporation with the approval of Government under Section 84 and 89 of the Corporation Act. |

..........................2

ಈ ಹಿಂದೆ ಮಾನ್ಯ ವಿಶೇಷ ಅಯುಕ್ತರು (ಯೋಜನೆ) ರವರ ಆದೇಶದಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಸಮಗ್ರ ತಿದ್ದುಪಡಿ ಮಾಡಲು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿ ಅಧ್ಯಕ್ಷರಾದ ಹಿಂದಿನ ಅಪರ ಆಯುಕ್ತರು (ರಾಜರಾಜೇಶ್ವರಿನಗರ) ವಲಯರವರ ಮಾರ್ಗದರ್ಶನದಂತೆ ಇಲಾಖಾ ಮುಖ್ಯಸ್ಥರುಗಳು ಸಲ್ಲಿಸಿರುವ ಮಾಹಿತಿಗಳನ್ನು ಆಧರಿಸಿ, ಕರಡು ಪ್ರತಿಯನ್ನು ಸಿದ್ಧಪಡಿಸಿದ್ದು, ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. ಅದರಂತೆ ಪರಿಶೀಲಿಸಲಾಗಿ, ಸಮಿತಿಯಲ್ಲಿ ಮಂಡನೆಯಾಗಿರುವಂತೆ ಸಾರ್ವಜನಿಕ ಸಂಪರ್ಕಾಧಿಕಾರಿ/ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಗೆ ಈ ಕೆಳಕಂಡಂತೆ ಪ್ರಸ್ತಾವನೆ ಇರುತ್ತದೆ.

| **Sl. No.** | **Category of the Scale of Pay** | **No.of Posts** | | **Method of Recruitment** | **Minimum Qualifications** |
|---|---|---|---|---|---|
| | | **Perma -nent** | **Temp-orary** | | |
| 01. | Chief Public Relation Officer 15200-25600 | 01 | - | By deputation from 1 & P of an Officer of equivalent Grade or by promotion of BBMP employees from the cadre of Public Relations Officer. | Who has post Graduate Degree in mass Communication, journalism, Master of Social Work and the Officers working in BBMP shall have any of the aforesaid Qualifications or Post Graduate Dip. In Public relations with other post graduate degrees. |
| 02 | Public Relation officer 14050-25050 | 01 | | By promotion from cadre of Dy. Public Relation Officer. In the absence of qualified officer deputation from the dept. of information Y Publicity Dept. | **For Promotion:**<br>1) Must have put in a service of not less than 2 years in the cadre of Dy.Public Relation Officer.<br>2) Post Graduation Dip, in Public Relation/ Mass Communication |
| 03 | Dy.Public Relation officer 12000-22650 (Additional Post) (New Post) | 05 | | By transfer of persons from any equivalent cadre of BBMP depts.., with equivalent qualifications. | **For Transfer:**<br>Must passed any degree of a recognized university with Dip. In Public Relation/ Dip. In journalism/ Dip.in Mass communication and must possess knowledge of computers and also provision is made for internal transfer from this dept. To another dept. from equivalent cadre. |

............................3

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೇಲ್ಕಂಡಂತೆ ಕ್ರಮ ಸಂಖ್ಯೆ (2) ರಲ್ಲಿರುವ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯನ್ನು ಮುಂಬಡ್ತಿ ಮೂಲಕ ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಆಯ್ಕೆ ವೃಂದದಿಂದ ಸೇವಾ ಹಿರಿತನದ ಮೇಲೆ ಮುಂಬಡ್ತಿಗೆ ಮತ್ತು ಕ್ರಮ ಸಂಖ್ಯೆ (3) ರಲ್ಲಿ ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯನ್ನು ಯಾವುದೇ ವೃಂದದ ಅರ್ಹ ಅಧಿಕಾರಿಗಳಿಂದ ವರ್ಗಾವಣೆ ಮೂಲಕ ತುಂಬಲು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಲು ಅನುಮೋದನೆ ಕೋರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:22-11-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:22-11-2010 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010ರ ನಿರ್ಣಯ .

1. ಕ್ರಮ ಸಂಖ್ಯೆ-1 ರಲ್ಲಿನ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯನ್ನು ತೆಗೆದು ಹಾಕುವುದು.
2. ಆಯುಕ್ತರ ಟಿಪ್ಪಣಿ ದಿನಾಂಕ:22-11-2010 ರ ಪುಟ-2 ರಲ್ಲಿನ ಕ್ರಮ ಸಂಖ್ಯೆ-3 ರ ಉಪ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯ ವೇತನ ಶ್ರೇಣಿಯನ್ನು ರೂ.11,400-21,600 ಎಂಬುದಾಗಿ ತಿದ್ದುಪಡಿ ಮಾಡುವುದು.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 3 (213)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1079 ಉದ್ಯಾನವನಗಳು ಇದ್ದು, 721 ಉದ್ಯಾನವನಗಳನ್ನು ಹಾಗೂ ಸರ್ಕಲ್ಸ್, ಮೀಡಿಯನ್ಸ್‌ಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯಿಂದ ಮಾಡಲಾಗುತ್ತಿದೆ. ಆದಾಗ್ಯೂ ಪಾಲಿಕೆಯ ತೋಟಗಾರಿಕೆ ಇಲಾಖೆಗೆ 872 ತೋಟಗಾರಿಕೆ ಮಾಲಿ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 350 ತೋಟಗಾರಿಕೆ ಮಾಲಿ ಹುದ್ದೆಗಳು ಖಾಲಿ ಇರುತ್ತವೆ. ಇದರಿಂದಾಗಿ, ತೋಟಗಾರಿಕೆ ಮಾಲಿಗಳ ಅಭಾವ ಉಂಟಾಗಿರುತ್ತದೆ. ಅಲ್ಲದೇ, ಪಾಲಿಕೆಯ ತೋಟಗಾರಿಕೆ ಇಲಾಖೆಯ ಉದ್ಯಾನವನಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಪಾಲಿಕೆಯ ತೋಟಗಾರಿಕೆ ಇಲಾಖೆಯ ಕೆಲಸ ಕಾರ್ಯಗಳಿಗೆ ತೋಟಗಾರಿಕೆ ಮಾಲಿ ಹುದ್ದೆಗಳು ಅತ್ಯಾವಶ್ಯಕವಾಗಿರುವುದರಿಂದ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಭರ್ತಿ ಮಾಡಬೇಕಾಗಿರುತ್ತದೆ. ಆದಾಗ್ಯೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ತೋಟಗಾರಿಕೆ ಮಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೆಳಕಂಡಂತೆ ಮಾನದಂಡವಿರುತ್ತದೆ. ಹಾಗೂ ಸದರಿ ಹುದ್ದೆಯ ವೇತನ ಶ್ರೇಣಿ ರೂ.4800-7275 ಗಳಾಗಿರುತ್ತದೆ.

| ಹುದ್ದೆ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|
| ತೋಟಗಾರಿಕೆ ಮಾಲಿ | ನೇರ ನೇಮಕಾತಿ | ಸರ್ಕಾರದಿಂದ ಮಾನ್ಯತೆ ಪಡೆದಿರುವ ಯಾವುದಾದರೂ ಖಾಸಗಿ ನರ್ಸರಿಯಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅನುಭವ ಹೊಂದಿರಬೇಕು. |

ಅದರಂತೆ, ಪಾಲಿಕೆಯ ತೋಟಗಾರಿಕೆ ಇಲಾಖೆಯಲ್ಲಿ ಹಾಲಿ ಖಾಲಿ ಇರುವ 350 ತೋಟಗಾರಿಕೆ ಮಾಲಿ ಹುದ್ದೆಗಳನ್ನು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ಅಗತ್ಯವಿದ್ದು, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ಆಯುಕ್ತರವರ ದಿನಾಂಕ:11-10-2010 ರ ಟಿಪ್ಪಣಿ** ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಮತ್ತು **ಮಾನ್ಯ ಆಯುಕ್ತರ ದಿನಾಂಕ:11-10-2010 ರ ಟಿಪ್ಪಣಿಯನ್ನು ಮಾರ್ಪಡಿಸಿ, ಕನಿಷ್ಠ ವಿದ್ಯಾರ್ಹತೆ 5ನೇ ತರಗತಿ ಉತ್ತೀರ್ಣ, ಗರಿಷ್ಠ ವಿದ್ಯಾರ್ಹತೆ 7ನೇ ತರಗತಿಯಲ್ಲಿ ಅನುತ್ತೀರ್ಣ ಹಾಗೂ ನೇಮಕಾತಿ ಹೊಂದಿದ ಹುದ್ದೆಯಲ್ಲಿ ಕನಿಷ್ಠ 10 ವರ್ಷಗಳ ಸೇವೆಯನ್ನು ಸಲ್ಲಿಸುವ ಷರತ್ತಿನೊಂದಿಗೆ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 08-12-2010 ರ ನಿರ್ಣಯ.**

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:08–12–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 5 (215)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಚಿತವಾಗಿರುವ ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿಯಂತೆ, ಘನತ್ಯಾಜ್ಯ ವಸ್ತುಗಳ ಸುರಕ್ಷತೆ ಮತ್ತು ವೈಜ್ಞಾನಿಕ ವಿಲೇವಾರಿಯು ಆಯಾ ನಗರ ಸಭೆಗಳ/ಪಾಲಿಕೆಗಳ ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಘನತ್ಯಾಜ್ಯಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಲು ಯೋಜನೆಗಳನ್ನು ಹಮ್ಮಿಕೊಂಡಿದೆ. ಇದರ ಅಂಗವಾಗಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲವನ್ನು ತಯಾರಿಸುವ ಪ್ರಸ್ತಾವನೆಯು ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ.84/2010-11, ದಿನಾಂಕ:28-08-2010 ರಂದು ಅನುಮೋದನೆಗೊಂಡಿರುತ್ತದೆ.

ಸದರಿ ನಿರ್ಣಯದಲ್ಲಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ (ಪ್ಲಾಸ್ಟಿಕ್ ಅನ್ನು ತ್ಯಾಜ್ಯದಿಂದ ಬೇರ್ಪಡಿಸಿ) ಕಚ್ಚಾ ತೈಲವನ್ನು ತಯಾರಿಸುವ ತಂತ್ರಜ್ಞಾನವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಒಂದು ಡಿ.ಪಿ.ಆರ್. ಅನ್ನು ಪಾಲಿಕೆ ಸಭೆಯ ಮುಂದೆ ಮಂಡಿಸಲು ಸೂಚಿಸಿದ್ದು, ಅದರಂತೆ Detailed Project Report ಅನ್ನು ತಯಾರಿಸಿದ್ದು, ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆಯ ಸಭೆಯ ಮುಂದೆ ಅನುಮೋದನೆಗೆ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2010 ರ ಟಿಪ್ಪಣಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವಂತೆ ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 07-01-2011 ರ ನಿರ್ಣಯ ಮತ್ತು ಆಯುಕ್ತರ ದಿನಾಂಕ:26-10-2010 ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾವನೆಯನ್ನು ಮುಂದೂಡಲು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಮುಂದೂಡಿದೆ."

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 4 (214)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅಧ್ಯಕ್ಷರು (ಆಯ್ಕೆ ಸಮಿತಿ) ಮತ್ತು ಅಪರ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:14-12-2010 ರಂದು ನಡೆದ ಸಭೆಯ ನಡವಳಿಯಲ್ಲಿ ಪಾಲಿಕೆಯ ಆರೋಗ್ಯ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಆಡಳಿತ ವಿಭಾಗದಲ್ಲಿನ ಈ ಕೆಳಕಂಡ ಹುದ್ದೆಗಳಿಗೆ ಪಾಲಿಕೆಯ 1971ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡಿ ಅಳವಡಿಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ ಹಾಗೂ ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ರವರು ದಿನಾಂಕ:27-11-10 ರ ಟಿಪ್ಪಣಿ ಪತ್ರದಲ್ಲಿ ದಿನಾಂಕ:14-12-2010ರ ನಡವಳಿಯಂತೆ ಕ್ರಮ ವಹಿಸಲು ಕೋರಿರುತ್ತಾರೆ ಹಾಗೂ ಸಹಾಯಕ ಆಯುಕ್ತರು (ನೇಮಕಾತಿ ಮತ್ತು ವಿಚಾರಣೆ) ವಿಭಾಗ ರವರು ದಿನಾಂಕ: 28-12-2010 ರಂತೆ ಸದರಿ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ತರುವ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ.

| ಆರೋಗ್ಯ ಇಲಾಖೆ | ಕಾಮಗಾರಿ ಇಲಾಖೆ | ಆಡಳಿತ ವಿಭಾಗ |
|---|---|---|
| 1) Staff Nurse<br>2) Lab Technician<br>3) Peons<br>4) Special Gangman<br>5) M.C. Gangman<br>6) ALO Gangman \<br>7) Synopsis Gangman<br>8) Disinfectant Gangman<br>9) Sweepers (Poura Karmikas) | 1) Lab Technician<br>2) Work Inspector<br>3) Drivers | 1) Peons |

ಅಧ್ಯಕ್ಷರು (ಆಯ್ಕೆ ಸಮಿತಿ) ಮತ್ತು ಅಪರ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:14-12-10 ರಂದು 1971ರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಸಂಬಂಧ ನಡೆದ ನಡವಳಿಯಲ್ಲಿ ಮೇಲ್ಕಂಡ ಹುದ್ದೆಗಳಿಗೆ ಸಂಬಂಧಿಸಿದಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಕೆಳಕಂಡಂತೆ ಸೂಕ್ತ ತಿದ್ದುಪಡಿ ಮಾಡಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

**1. PROPOSED AMENDMENT to the C & R Regulation 1971 under Health Department**

**Staff Nurse & Lab Technician post**

| PRESENT RULE | | | |
|---|---|---|---|
| **Category of posts** | **Method of Recruitment** | **Minimum Qualification** | **Authority competent to appoint** |
| --- | ---- | ----- | ------ |

............................2

| **PROPOSED AMENDMENT TO THE RULE** | | | |
|---|---|---|---|
| To include the post of Staff Nurse & Lab Technician in the Bangalore Municipal Corporation Services (General) Cadre & Recruitment Regulations 1971 Under the heading " **HEALTH DEPARTMENT"** right below the post of **"General Duty Medical Officer"** i.e., | | | |
| **Category of posts** | **Method of Recruitment** | **Minimum Qualification** | **Authority competent to appoint** |
| **Staff Nurse** | By Direct Recruitment | Must be holder of Diploma in General Nursing OR B.Sc. Nursing from a university which is recognized by NCI. | By the Commissioner Under Section 89 of the Corporation Act. |
| **Lab Technician** | By Direct Recruitment | 1. A pass in SSLC<br>2. Diploma in Lab Technology | By the Commissioner Under Section 89 of the Corporation Act. |

**2. PROPOSED AMENDMENT to the C & R Regulation 1971 under Health Department**

**<u>PEONS POSTS</u>**

| **Present Rule** | | | |
|---|---|---|---|
| In the Present Rule, Peon post is mentioned under the heading ' Health Department' right below the post of Medical Attender, Phone Attender' | | | |
| **Category of posts** | **Method of Recruitment** | **Minimum Qualification** | **Authority competent to appoint** |
| **Helpers, Attenders, Peons, Ayahs, Cleaners, Dhobi's Watchman Disinfection Gangman, Sweepers, Grave Diggers.** | **By Direct Recruitment** | **Nil** | By the Commissioner Under Section 89 of the Corporation Act. |
| **Proposed Amendment to the Rule** | | | |
| To include the post of Peons in the Bangalore Municipal Corporation Services (General) Cadre & Recruitment Regulations 1971 Under the heading **" HEALTH DEPARTMENT"** right below the post of **"Medical Attender, Phone Attender "** i.e., | | | |

..........................3

| Category of posts | Method of Recruitment | Minimum Qualification | Authority competent to appoint |
|---|---|---|---|
| **Peons** | By Direct Recruitment | A pass in 7th Std and fail in 9th Std with kannada as one of the Language | By the Commissioner Under Section 89 of the Corporation Act. |

**Note:** In the Bangalore Municipal Corporation Service (General) Cadre & Recruitments Regulations 1971, under Heading 'Health Department' the posts (Helpers, Attenders, Ayahs, Cleaners, Dhobies Watchmen Grave Diggers) which are mentioned along with the post of PEON shall move to the position next to Disinfection Gangman, Sweepers post as it is decided to fix the Educational qualification as a pass in 5th and 7th Std, to the Disinfection Gangman Pourakarmikas (Sweepers) Post.

**3. PROPOSED AMENDMENT to the C & R Regulation 1971 under Health Department**

**Special Gangman, M.C. Gangman,**
**ALO Gangman, Synopsis Gangman,**
**Disinfectant Gangman, Pourakarmikas (Sweepers) Posts**

| **Present Rule** | | | |
|---|---|---|---|
| **Category of posts** | **Method of Recruitment** | **Minimum Qualification** | **Authority competent to appoint** |
| **Helpers, Attenders, Peons, Ayahs, Cleaners, Dhobies watchmen, Disfection Gangmen, Pourakarmikas (Sweepers), Grave Diggers.** | By Direct Recruitment | Nil | By the Commissioner Under Section 89 of the Corporation Act. |
| **Proposed Amendment to the Rule** | | | |
| To include the post of 5 Types of Gangman and Pourakarmikas (Sweepers) in the Bangalore Municipal Corporation Services (General) Cadre & Recruitment Regulations 1971 Under the heading **" HEALTH DEPARTMENT"** right below the post of **"Peon"** (the post which is kept under 'Proposal for amendment as above) i.e., | | | |

| Category of posts | Method of Recruitment | Minimum Qualification | Authority competent to appoint |
|---|---|---|---|
| **Special Gangman,<br>M.C. Gangman,<br>ALO Gangman,<br>Synopsis Gangman,<br>Disinfectant Gangman,<br>Pourakarmikas (Sweepers)** | By Direct Recruitment | A pass in 7th Std and fail 9th Std with kannada as one of the language. | By the Commissioner Under Section 89 of the Corporation Act. |
| **Group 'D' Post<br>Lab Attender and equalent post** | By Direct Recruitment | A pass in 7th Std or fail in 9th Std with kannada as one of the language. | By the Commissioner Under Section 89 of the Corporation Act. |

**Note:** In the Bangalore Municipal Corporation Service (General) Cadre & Recruitment Regulations 1971, under the heading **'Health Department'** the posts Helpers, Attenders, Ayahs, Cleaners, Dhobies Watchmen Grave Diggers Which are Mentioned along with the posts of **Disinfection Gangman And Sweepers** shall move to the position next to posts as mentioned above (i.e. Special Gangman, M.C. Gangman, ALO Gangman, Synopsis Gangman, Disinfectant Gangman, Pourakarmikas (Sweepers).

### 4. PROPOSED AMENDMENT to the C & R Regulation 1971 under Health Department

**PEON POSTS**

| **Present Rule** | | | |
|---|---|---|---|
| In the Present Rule, peon post is mentioned under the heading **Administration Department** right below the post of **'Daffedara'** | | | |
| **Category of posts** | **Method of Recruitment** | **Minimum Qualification** | **Authority competent to appoint** |
| **Peons, Malies, Female Searchers, Watchmen, Pourakarmikas (Sweepers), Gangmen, Ayahs** | By Direct Recruitment | On the basis of Seniority-Cum-Satisfactory work | By the Commissioner Under Section 89 of the Corporation Act. |
| **Proposed Amendment to the Rule** | | | |
| To include the post of peons in the Bangalore Municipal Corporation Services (General) Cadre & Recruitment Regulations 1971 Under the heading **"ADMINISTRATION DEPARTMENT"** right below the post of **"Process server"** i.e., | | | |
| **Category of posts** | **Method of Recruitment** | **Minimum Qualification** | **Authority competent to appoint** |
| **Peons** | By Direct Recruitment | A pass in 7th Std and fail 9th Std with kannada as one of the languages. | By the Commissioner Under section 89 of the Corporation Act. |

**Note:** In the Bangalore Municipal Corporation Service (General) Cadre & Recruitment Regulations 1971, under the heading 'Administration Department' the posts (Malies, Female Searchers, Watchmen, Gangmen, Ayahs) Which are Mentioned along with the post of **Peon** shall remain in same position and Sweeper, post shall move to the position next to Peon post as it is decided to fix the educational qualification as a pass 5th std and fail 7th std to the Pourakarmikas (**Sweepers)** posts.

### 5. PROPOSED AMENDMENT to the C & R Regulation 1971 under Health Department

**Lab Technician & Work Inspector Posts**

| **Present Rule** | | | |
|---|---|---|---|
| **Category of posts** | **Method of Recruitment** | **Minimum Qualification** | **Authority competent to appoint** |
| --- | --- | --- | --- |

..........................5

| Proposed Amendment to the Rule |
|---|
| To include the post of **Lab Technician & Work Inspector** in the Bangalore Municipal Corporation Services (General) Cadre & Recruitment Regulations 1971 Under the heading **"ENGINEERING DEPARTMENT"** right below the post of **"Junior Engineering"** i.e., |

| Category of posts | Method of Recruitment | Minimum Qualification | Authority competent to appoint |
|---|---|---|---|
| **Lab Technician** | By Direct Recruitment | 1. A pass in SSLC<br>2. Lab Technology in Civil Engineering (QC) | By the Commissioner Under Section 89 of the Corporation Act. |
| **Work Inspector** | 50% By Direct Recruitment<br><br>25% by the Promotion from the Cadre of Engineering Gangman, 25% by promotion from other Group 'D' posts. | 1. A pass in SSLC<br>2.Draughtsmanship Course in Civil Engineering<br><br>1. A pass in SSLC<br>2. Must have passed the Departmental exams which are related to this post. | By the Commissioner Under Section 89 of the Corporation Act. |

**6. PROPOSED AMENDMENT to the C & R Regulation 1971 under Health Department**

## DRIVERS POSTS

| Present Rule |
|---|
| In the Present Rule, Drivers post is mentioned under the post of Pump Operator under the heading **"Engineering Department"** |

| Category of posts | Method of Recruitment | Minimum Qualification | Authority competent to appoint |
|---|---|---|---|
| **Drivers** | By Promotion from any of the cadre which are equivalent to 'Group D Cadre in State Civil Services on the basis of Seniority, Seniority being determined by Treating person holding a post Carrying higher scale of pay as senior to a person holding post carrying lower scale of pay. Seniority interse among persons holding carrying the same scale of pay being determined on the basis of length of service in the respective cadre. In the absence of availability of eligible and suitable Group D Employers, the post of drivers shall filled be filled by direct recruitment. | 1. Must be a holder of a Current valid driving licence<br>2. Must have not less than five years service in Bangalore city Corporation. | ---- |

............................6

**Proposed Amendment to the Rule**

To include the post of **Drivers** in the Bangalore Municipal Corporation Services (General) Cadre & Recruitment Regulations 1971 Under the heading **"ENGINEERING DEPARTMENT"** right below the post of **"Electrician"** i.e.,

| **Category of posts** | **Method of Recruitment** | **Minimum Qualification** | **Authority competent to appoint** |
|---|---|---|---|
| **Drivers** | 50% by Direct Recruitment | 1. A pass SSLC with Kannada as one of the languages.<br>2. Must be a holder of Current Driving Licence for medium Heavy Vehicles.<br>3. Must have experience not less than three years in Driving / First Aid Training Certificate granted by an institution recognized by Government. | By the Commissioner Under Section 89 of the Corporation Act. |
| | 50% by Promotion from the post of cleaner or any other Group D posts. | 1. Must have put in a service of not less than 5 years in the Cadre Cleaner or on any posts in Cadre of D Groups.<br>2. Must have passed 7th Std with Kannada as a language.<br>3. Must be a holder of Current Driving Licence for Medium and Heavy vehicles with on experience of three years in Driving<br>4. Must have obtained first Aid Training Certificate granted by an institution recognized by Government. | |

ಮೇಲ್ಕಂಡಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಆಡಳಿತ ವಿಭಾಗದಲ್ಲಿನ ವಿವಿಧ ವೃಂದಗಳ ಹುದ್ದೆಗಳಿಗೆ 1971 ರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಅಳವಡಿಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-01-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಉದ್ದೇಶಿತ ತಿದ್ದುಪಡಿ-3 ರಲ್ಲಿ ಬರುವ (Special Gangman, MC Gangman, ALO Gangman, Synopsis Gangman, Disinfectant Gangman, Sweepers (Poura Karmikas)) ಹುದ್ದೆಗಳ ನೇಮಕಾತಿಗೆ ನಿಗಧಿಪಡಿಸಿರುವ ವಿದ್ಯಾಭ್ಯಾಸವನ್ನು ಕನಿಷ್ಠ 5ನೇ ತರಗತಿ, ಗರಿಷ್ಠ 7ನೇ ತರಗತಿ ಉತ್ತೀರ್ಣರಾಗಿರಬೇಕು ಎಂಬ ತಿದ್ದುಪಡಿಯೊಂದಿಗೆ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದು.

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಉದ್ದೇಶಿತ ತಿದ್ದುಪಡಿ-3 ರಲ್ಲಿ ಬರುವ (Special Gangman, MC Gangman, ALO Gangman, Synopsis Gangman, Disinfectant Gangman, Sweepers (Poura Karmikas)) ಹುದ್ದೆಗಳ ನೇಮಕಾತಿಗೆ ನಿಗಧಿಪಡಿಸಿರುವ ವಿದ್ಯಾಭ್ಯಾಸವನ್ನು ಕನಿಷ್ಠ 5ನೇ ತರಗತಿ, ಗರಿಷ್ಠ 7ನೇ ತರಗತಿ ಉತ್ತೀರ್ಣರಾಗಿರಬೇಕು ಎಂಬ ತಿದ್ದುಪಡಿಯೊಂದಿಗೆ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 216/2010-11

ಶ್ರೀ ಡಿ.ಎಲ್.ಚಂದ್ರಶೇಖರ್, ಉಪ ಆಯುಕ್ತರು (ಕಂದಾಯ) ಆಗಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ವಯೋಮಿತಿಗನುಗುಣವಾಗಿ ದಿನಾಂಕ:31-01-2011 ರಂದು ಪಾಲಿಕೆಯ ಸೇವೆಯಿಂದ ನಿವೃತ್ತಿ ಹೊಂದಲಿದ್ದಾರೆ.

2008-09ನೇ ಸಾಲಿನಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತಂದಿದ್ದು, ಈ ಸಂಬಂಧ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದೆ ಇರುವಂತಹ ಆಸ್ತಿಗಳನ್ನು ವ್ಯಾಪ್ತಿಗೆ ಒಳಪಡಿಸಲು ಈಗಾಗಲೇ ಸಮಗ್ರ ಸರ್ವೆ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದ್ದು, ಎಲ್ಲ ವಲಯಗಳಲ್ಲಿ ವಿಶೇಷ ಸೂಚನಾ ಪತ್ರ ನೀಡಲು ಕ್ರಮ ಕೈಗೊಳ್ಳಲಾಗಿದೆ. ಮುಂದುವರೆದಂತೆ, 2009-2011 ನೇ ಬ್ಲಾಕ್ ಅವಧಿಯು ದಿನಾಂಕ:31-03-2011 ರ ಅಂತ್ಯಕ್ಕೆ ಪೂರ್ಣಗೊಳ್ಳಲಿದ್ದು, ಮುಂದಿನ ಬ್ಲಾಕ್ ಅವಧಿಗೆ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಬೇಕಾಗಿರುತ್ತದೆ. ಈ ಸಂಬಂಧ ಅರ್ಜಿ ನಮೂನೆಗಳನ್ನು ತಯಾರಿಸಿ ಸಾರ್ವಜನಿಕರಿಗೆ ವಿತರಿಸುವ ಕಾರ್ಯವನ್ನು ಸಹ ಮಾಡಬೇಕಾಗಿರುತ್ತದೆ.

ಮೇಲಿನ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಪಾಲಿಕೆಯ ಕಂದಾಯ ಇಲಾಖೆಯಲ್ಲಿ ಉಪ ಆಯುಕ್ತರು (ಕಂದಾಯ) ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ಅನುಭವವಿರುವ ಶ್ರೀ ಡಿ.ಎಲ್.ಚಂದ್ರಶೇಖರ್, ನಿವೃತ್ತ ಉಪ ಆಯುಕ್ತರು (ಕಂದಾಯ) ರವರನ್ನು ಪಾಲಿಕೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಂದಾಯ ಇಲಾಖೆಗೆ **"ಕಂದಾಯ ಸಲಹೆಗಾರರಾಗಿ"** ನೇಮಿಸಿಕೊಳ್ಳುವುದು ಸೂಕ್ತವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಡಿ.ಎಲ್.ಚಂದ್ರಶೇಖರ್, ನಿವೃತ್ತ ಉಪ ಆಯುಕ್ತರು (ಕಂದಾಯ) ರವರನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.15,000/- (ಹದಿನೈದು ಸಾವಿರ ಮಾತ್ರ) ಗಳ ಸಂಚಿತ ವೇತನದ ಮೇಲೆ **"ಕಂದಾಯ ಸಲಹೆಗಾರರಾಗಿ"** ದಿನಾಂಕ:01-02-2011 ರಿಂದ 6 ತಿಂಗಳ ಅವಧಿಗೆ ನಿಯೋಜಿಸಿಕೊಳ್ಳುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31-01-2011 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:31-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ದಿನಾಂಕ:01-02-2011 ರಿಂದ ಒಂದು ವರ್ಷದ ಅವಧಿಗೆ ನಿಯೋಜಿಸಿಕೊಳ್ಳಲು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:31-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ದಿನಾಂಕ:01-02-2011 ರಿಂದ ಒಂದು ವರ್ಷದ ಅವಧಿಗೆ ನಿಯೋಜಿಸಿಕೊಳ್ಳಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:01–02–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 217/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬಿ.ಓ.ಟಿ ಆಧಾರದಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಎದುರಿಗೆ 648 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ವ್ಯಕ್ತಿಗಳಿಂದ/ಸಂಸ್ಥೆಗಳಿಂದ ಟೆಂಡರ್ ಅನ್ನು ಕ್ರ ಮವಾಗಿ ದಿನಾಂಕ:22–10–2009 ಮತ್ತು ದಿನಾಂಕ:09–11–2009 ರಂದು ಆಹ್ವಾನಿಸಲಾಗಿರುತ್ತದೆ. ಆದರೆ ಸದರಿ ಟೆಂಡರ್‌ನಲ್ಲಿ ಯಾವುದೇ ಸಂಸ್ಥೆಗಳು ಭಾಗವಹಿಸಿರುವುದಿಲ್ಲ ಹಾಗೂ ಸದರಿ ಟೆಂಡರ್‌ನ RFP Document Sl. No. 15.6 ರಂತೆ In case no response is received from any bidder for particular toilet location any other interested persons/institutions will be considered on "FIRST COME FIRST SERVE BASIS SEPERATELY" ಎಂದು ಷರತ್ತನ್ನು ವಿಧಿಸಲಾಗಿರುತ್ತದೆ. ಅದರಂತೆ, ಮೆ॥ದೇವ್ ಪಬ್ಲಿಸಿಟಿ ಸಂಸ್ಥೆಯವರು ದಿನಾಂಕ:02–8–2010 ರಂದು ಪೂಜ್ಯ ಮಹಾಪೌರರಿಗೆ ಮನವಿ ಪತ್ರವನ್ನು ಸಲ್ಲಿಸಿ 25 ಸ್ಥಳಗಳಲ್ಲಿ ಬಿ.ಓ.ಟಿ ಆಧಾರದ ಮೇಲೆ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ಸಿದ್ಧರಿರುವುದಾಗಿ ತಿಳಿಸಿ, ಒಟ್ಟು 30 ವರ್ಷಗಳ ಕಾಲಾವಧಿಗೆ ಲೈಸನ್ಸ್‌ನ್ನು ನೀಡಲು ಕೋರಿರುತ್ತಾರೆ.

RFP Document Sl. No. 15.6 ರಂತೆ ಮೆ॥ದೇವ್ ಪಬ್ಲಿಸಿಟಿ ಸಂಸ್ಥೆಯವರು ಮನವಿಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ, ಸದರಿ ಸಂಸ್ಥೆಯವರಿಗೆ ಒಟ್ಟು 7 ವರ್ಷಗಳ ಕಾಲಾವಧಿಗೆ ಒಟ್ಟು 25 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲು ತೀರ್ಮಾನಿಸಬಹುದಾಗಿರುತ್ತದೆ.

ಷರತ್ತುಗಳು:

1. ಪ್ರತಿ ಶೌಚಾಲಯಕ್ಕೆ ವಾರ್ಷಿಕವಾಗಿ ರೂ.50,000/–ಗಳಂತೆ ಲೈಸನ್ಸ್ ಶುಲ್ಕವನ್ನು ಪಾವತಿಸುವುದು.
2. ಪಾಲಿಕೆಯು ನಿಗಧಿಪಡಿಸುವ ಶುಲ್ಕವನ್ನು ಸಾರ್ವಜನಿಕರಿಂದ ವಸೂಲಿ ಮಾಡತಕ್ಕದ್ದು.
3. ಬಿ.ಓ.ಟಿ ಆಧಾರದ ಟೆಂಡರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಶೌಚಾಲಯಗಳ ಮೇಲೆ ಪಾಲಿಕೆಯು ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ 300 ಚದರ ಅಡಿಗಳಿಗೆ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸುವುದು.
5. ಜಾಹೀರಾತು ಬೈಲಾಗಳು–2006 ರಂತೆ ಜಾಹೀರಾತು ತೆರಿಗೆಯನ್ನು ನಿಯಮಾನುಸಾರ ಪಾವತಿಸುವುದು ಮತ್ತು ಬೈಲಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
6. ಶೌಚಾಲಯಗಳನ್ನು ನಿರ್ಮಿಸುವ ಮೊದಲು ಪಾಲಿಕೆಯ ತಾಂತ್ರಿಕ ವಿಭಾಗದಿಂದ ಶೌಚಾಲಯದ ನಕ್ಷೆಯನ್ನು ಸಲ್ಲಿಸಿ ಅನುಮೋದಿಸಿ ಕೊಡುವುದು.
7. ಶೌಚಾಲಯಗಳ ನಿರ್ಮಾಣಗಳ ಸ್ಥಳಗಳಲ್ಲಿ ನೀರಿನ ಸರಬರಾಜಿಗಾಗಿ ಬೋರ್‌ವೇಲ್‌ಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರತಕ್ಕದ್ದು.
8. ಶೌಚಾಲಯಗಳನ್ನು ನಿರ್ಮಿಸುವ ಸ್ಥಳಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ಗುರುತಿಸಿಕೊಂಡು ಇವರ ಉಸ್ತುವಾರಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು.
9. ದಿನಾಂಕ: 9–11–2009ರ ಟೆಂಡರ್ ಪ್ರಕಟಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
10. ಅನುಮತಿ ಅವಧಿ ಮುಗಿದ ನಂತರ ನಿರ್ಮಿಸಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.

ಈ ಮೇಲಿನ ಷರತ್ತುಗಳ ಅನ್ವಯ ಸಾರ್ವಜನಿಕ ಶೌಚಾಲಯಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ಬಿ.ಓ.ಟಿ ಆಧಾರದಲ್ಲಿ ಒಟ್ಟು 25 ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಮೆ॥ದೇವ್ ಪಬ್ಲಿಸಿಟಿ ಸಂಸ್ಥೆಯವರಿಗೆ ಒಟ್ಟು 7 ವರ್ಷಗಳ ಕಾಲಾವಧಿಗೆ ಬಿ.ಓ.ಟಿ ಆಧಾರದ ಮೇಲೆ ಜಾಹೀರಾತು ಹಕ್ಕುಗಳ ಎದುರು ಖಾಸಗಿ ಸಾರ್ವಜನಿಕ ಸಹಭಾಗಿತ್ವ (PPP) ದಡಿಯಲ್ಲಿ ಅನುಮತಿ ನೀಡಲು ಹಾಗೂ ಅನುಮತಿ ಅವಧಿ ಮುಗಿದ ನಂತರ ಉತ್ತಮ ಸ್ಥಿತಿಯಲ್ಲಿ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ: 26-10-2010ರ ಟಿಪ್ಪಣಿಯನ್ನು ಈ ಕೆಳಕಂಡ 25 ಸ್ಥಳಗಳಲ್ಲಿ ಬಿ.ಓ.ಟಿ ಆಧಾರದ ಮೇಲೆ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು 10 ವರ್ಷಗಳ ಕಾಲಾವಧಿಗೆ ನೀಡುವ ಮಾರ್ಪಾಡಿನೊಂದಿಗೆ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 27-10-2010 ರ ನಿರ್ಣಯ.

| ಕ್ರ. ಸಂ. | ಶೌಚಾಲಯಗಳ ಸ್ಥಳ |
|---|---|
| 1. | ವಾಣಿ ವಿಲಾಸ್ ಆಸ್ಪತ್ರೆ |
| 2. | ರಾಜಾ ರಾಮ್ ಮೋಹನ್ ರಾಯ್ ರಸ್ತೆ, ಅಮೃತ್ ಡಿಸ್ಟಿಯರ್ ನಚಿತರ |
| 3. | ಬಳ್ಳಾರಿ ರಸ್ತೆ, ಗುಟ್ಟ ಹಳ್ಳಿ ಸರ್ಕಲ್ ಪಾರ್ಕ್‌ನಲ್ಲಿ |
| 4. | ಬಳ್ಳಾರಿ ರಸ್ತೆ, ಪ್ಯಾಲೇಸ್ ಕಾಂಪೌಂಡ್ ಪಕ್ಕದಲ್ಲಿ |
| 5. | ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಪುಟಣ್ಣ ಥಿಯೇಟರ್ ಹತ್ತಿರ |
| 6. | ಹೆಬ್ಬಾಳ ಕ್ರಿಮಟೋರಿಯಂ ಹತ್ತಿರ |
| 7. | ವಾರ್ ಮೆಮೋರಿಯಲ್ ಹತ್ತಿರ, ರೆಸಿಡೆನ್ಸಿ ರಸ್ತೆ |
| 8. | ಕ್ವೀನ್ಸ್ ರಸ್ತೆ, ಕಬ್ಬನ್ ಪಾರ್ಕ್, ಎಸ್‌ಪಿಸಿಎ ನಚಿತರ |
| 9. | ಸೋಫಿಯಾ ಸ್ಕೂಲ್ ಎದುರು, ಬಸವ ಭವನ ಪಕ್ಕದಲ್ಲಿ |
| 10. | ಭಾಷ್ಯಂ ಸರ್ಕಲ್, ಸದಾಶಿವನಗರ |
| 11. | ಜಾನ್ಸನ್ ಮಾರ್ಕೆಟ್, ಮಿಲ್ಕ್ ಭೂತ್ ಪಕ್ಕದಲ್ಲಿ |
| 12. | ಡಿಸ್‌ಪ್ಲೇಸರಿ ರಸ್ತೆ ಫಾನಾಸೋನಿಕ್ ಶೋರೂಂ ಎದುರು |
| 13. | ಮೈನ್ ಗಾರ್ಡ್ ಕ್ರಾಸ್ ರಸ್ತೆ, ಸಾಫೀಯಾ ಪ್ಲಾಜಾ ಎದುರು |
| 14. | ಸಾದ್‌ವಾಣಿಸ್ ಎದುರು, ಎಂ.ಜಿ. ರಸ್ತೆ ಜಂಕ್ಷನ್ |
| 15. | ಹರೇ ಕೃಷ್ಣ ರಸ್ತೆ, ಹೈ ಗ್ರೌಂಡ್ಸ್ ಪೊಲೀಸ್ ಸ್ಟೇಷನ್ ಹತ್ತಿರ |
| 16. | ಮಾಧವನ್ ಪಾರ್ಕ್, ಜಯನಗರ |
| 17. | ಪಿಡಬ್ಲ್ಯೂಡಿ ಕಛೇರಿ ಹತ್ತಿರ, ನೃಪತುಂಗ ರಸ್ತೆ |
| 18. | ಕಬ್ಬನ್ ರಸ್ತೆ ಬಿಆರ್‌ವಿ ಥಿಯೇಟರ್ ಎದುರು |
| 19. | ಕಬ್ಬನ್ ರಸ್ತೆ, ಹೆಚ್.ಎ.ಎಲ್ ಕಾಂಪ್ಲೆಕ್ಸ್ ಎದುರು |
| 20. | ಹೊಸೂರು ರಸ್ತೆ ಸಿಮಿಟ್ರಿ, ಕಾನ್‌ಫೀಡೆಂಡ್ ಘ್ರೋಪಸ್ ಹೋಟೆಲ್ ಹತ್ತಿರ |
| 21. | ಕಾಳಿದಾಸ ರಸ್ತೆ, ಫ್ರೇಡಮ್ ಪಾರ್ಕ್ ಹತ್ತಿರ |
| 22. | ಟಿ. ಚೌಡಯ್ಯ ರಸ್ತೆ, ಬಿ.ಡಿ.ಎ. ಹತ್ತಿರ (ಬಳ್ಳಾರಿ ರಸ್ತೆ) |
| 23. | ವಿಲ್ಲರ್ ರಸ್ತೆ, ಡ್ರೈನ್ ಹತ್ತಿರ |
| 24. | ಮಿಲ್ಲರ್ ರಸ್ತೆ ಜೈನ್ ಆಸ್ಪತ್ರೆ ಹತ್ತಿರ |
| 25. | ಜಕರಾಯನಕೆರೆ ಬಸ್ ಸ್ಟಾಪ್ |

ಹಾಗೂ

..........................3

1) ದಿನಾಂಕ:25-01-2011 ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಪ್ರಸ್ತಾವನೆಯಲ್ಲಿರುವ ಮೇಲ್ಕಂಡ 25 ಸ್ಥಳಗಳ ಪೈಕಿ ಕ್ರಮ ಸಂಖ್ಯೆ: 1, 2, 3, 5, 6, 7, 11, 12, 14, 16, 17, 20, 21, 23 ಮತ್ತು 25 ಒಟ್ಟು 15 ಸ್ಥಳಗಳಲ್ಲಿ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ನಿಯಮಗಳ ಅನುಸಾರ ಶೌಚಾಲಯಗಳನ್ನು ನಿರ್ಮಿಸಲು ಮೆ:ದೇವ್ ಪಬ್ಲಿಸಿಟಿ ಸಂಸ್ಥೆಯವರಿಗೆ ಜಾಹೀರಾತು ಹಕ್ಕುಗಳ ಎದುರು 10 ವರ್ಷಗಳ ಕಾಲಾವಧಿಗೆ ನೀಡಲು ಸಮಿತಿಯು ತೀರ್ಮಾನಿಸಿದೆ.

2) ಶ್ರೀ ಬಿ.ಎನ್.ಮಂಜುನಾಥರೆಡ್ಡಿ ಯವರು ಕೋರಿರುವ ಸ್ಥಳಗಳಾದ (i) ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ (ಮಡಿವಾಳ) (ii) ಹೊಸೂರು ಮುಖ್ಯರಸ್ತೆ (ಶ್ರೀನಿವಾಸ ಪೆಟ್ರೋಲ್ ಬಂಕ್ ಎದುರು) (iii) ಹೊಸೂರು ಮುಖ್ಯರಸ್ತೆ (ಸೆಂಟ್‌ಜಾನ್ಸ್ ವಸತಿ ಗೃಹ ಪಕ್ಕದಲ್ಲಿ)

ಸದರನ್ ಫೌಂಡೇಶನ್ ಸಂಸ್ಥೆಯವರು ದಿನಾಂಕ:22-12-2010 ರ ತಮ್ಮ ಅರ್ಜಿಯಲ್ಲಿ 4 ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿ ದರ 1) ಸ್ನಾನಕ್ಕೆ - ರೂ.10.00, 2) ಶೌಚಾಲಯಕ್ಕೆ-ರೂ.3.00 3) ಮೂತ್ರ ವಿಸರ್ಜನೆಗೆ-ರೂ.1-00 4) ಅಂಗವಿಕಲರಿಗೆ ಮತ್ತು ಮಕ್ಕಳಿಗೆ ಉಚಿತ ಮತ್ತು ಸದರಿ ದರಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ಪರಿಷ್ಕರಿಸಲಾಗುವುದೆಂದು ಪ್ರತಿ ಶೌಚಾಲಯಕ್ಕೆ ವಾರ್ಷಿಕ ರೂ.55,000/- ಗಳ ನೆಲಬಾಡಿಗೆ ನೀಡುವುದಾಗಿ 10 ವರ್ಷಗಳ ಕಾಲ ನಿರ್ವಹಿಸಿ ನಂತರ ಬಿ.ಬಿ.ಎಂ.ಪಿಗೆ ವರ್ಗಾಯಿಸುವುದಾಗಿ ತಿಳಿಸಿರುತ್ತಾರೆ.

ಸದರಿ ಅರ್ಜಿಯನ್ನು ಪರಿಗಣಿಸಿ, 10 ವರ್ಷಗಳ ಅವಧಿಗೆ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಸದರಿ ಸಂಸ್ಥೆಯವರಿಗೆ 1) ಕುರುಬರ ಹಳ್ಳಿ ಬಸ್ ನಿಲ್ದಾಣದ ಬಳಿ 2) ಕೆ.ಆರ್.ಪುರಂ, ಐಟಿಐ ಬಸ್ ನಿಲ್ದಾಣದ ಬಳಿ 3) ಕೆ.ಆರ್.ಪುರಂ ಬಸ್ ನಿಲ್ದಾಣ (ಟಿನ್ ಫ್ಯಾಕ್ಟರಿ ಹತ್ತಿರ) ನೀಡಲು ಸಮಿತಿಯು ತೀರ್ಮಾನಿಸಿದೆ. ಈ ಮೂರು ಸ್ಥಳಗಳಲ್ಲಿ ಜಾಹೀರಾತು ಹಕ್ಕುಗಳನ್ನು ಪಾಲಿಕೆ ಇಚ್ಛಿಸಿದಲ್ಲಿ ಟೆಂಡರ್ ಮುಖಾಂತರ ನೀಡಲಾಗುವುದೆಂದು ಹಾಗೂ ಶೌಚಾಲಯದ ದರಗಳನ್ನು ಪಾಲಿಕೆಯು ನಿಗಧಿಪಡಿಸಿದಂತೆ ಸಾರ್ವಜನಿಕರಿಂದ ವಸೂಲು ಮಾಡಲು ತೀರ್ಮಾನಿಸಿದೆ. ಹಾಗೂ ಶ್ರೀ ಬಿ.ಎನ್. ಮಂಜುನಾಥ ರೆಡ್ಡಿ, ಸದಸ್ಯರು, ವಾರ್ಡ್-172, ಮಡಿವಾಳ ಇವರು ಕೋರಿರುವ ಶೌಚಾಲಯಗಳನ್ನು ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-11-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-11-2010 ರ ನಿರ್ಣಯವನ್ನು ಒಪ್ಪುತ್ತಾ, ಹೆಚ್ಚಿನ ಅವಧಿಯ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 26-11-2010 ರ ನಿರ್ಣಯವನ್ನು ಒಪ್ಪುತ್ತಾ, ಹೆಚ್ಚಿನ ಅವಧಿಯ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:01-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ:218/2010-11

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-178, ಬೆಂಗಳೂರು (ದಕ್ಷಿಣ) ತಾಲ್ಲೂಕು, ಉತ್ತರಹಳ್ಳಿ ಹೋಬಳಿಯ ಸಾರಕ್ಕಿ ಗ್ರಾಮಕ್ಕೆ ಅಯೋಧ್ಯೆ ರಾಮರಸ್ತೆ ಮುಖಾಂತರ ಹಾದು ಹೋಗಬೇಕಾಗಿದ್ದು, ಅಯೋಧ್ಯೆ ರಾಮ ರಸ್ತೆಯು 40 ಅಡಿ ರಸ್ತೆಯಾಗಿದ್ದು, ಈ ರಸ್ತೆಯಲ್ಲಿ ಎರಡೂ ಮುಖವಾಗಿ ವಾಹನಗಳು ಸಂಚರಿಸುತ್ತವೆ. 9ನೇ ಮುಖ್ಯ ರಸ್ತೆಯಿಂದ ಮುಂದಕ್ಕೆ ಸಾರಕ್ಕಿ ಗ್ರಾಮಕ್ಕೆ ಹೋಗುವ ರಸ್ತೆಯು ಪ್ರಾರಂಭದಲ್ಲಿ 20 ಅಡಿಯಿಂದ 18 ಅಡಿಗಳಷ್ಟಿದ್ದು, ರಸ್ತೆಯ ಎರಡೂ ಬದಿಗೆ ಚರಂಡಿ ತೆಗೆದರೆ ವಾಹನ ಸಂಚಾರಕ್ಕೆ ಕೆಲವು ಕಡೆ 12 ರಿಂದ 15 ಅಡಿ ಮಾತ್ರ ಉಳಿಯುತ್ತದೆ. ಇದರಿಂದ ಎರಡು ಮುಖವಾಗಿ ವಾಹನಗಳು ಸಂಚರಿಸುವುದು ಕಷ್ಟಕರವಾಗುತ್ತಿರುವುದರಿಂದ ಸಾರಕ್ಕಿ ಗ್ರಾಮದ ರಸ್ತೆಯನ್ನು ಏಕಮುಖ ರಸ್ತೆಯನ್ನಾಗಿ, ಸಾರಕ್ಕಿ ಗೇಟ್ ಮುಖಾಂತರ ಬಲಕ್ಕೆ ತಿರುಗಿ ಪಕ್ಕದ ರಸ್ತೆಯ ಮುಖಾಂತರ ಮತ್ತೊಮ್ಮೆ ಬಲಕ್ಕೆ ತಿರುಗಿ 9ನೇ ಮುಖ್ಯ ರಸ್ತೆಯನ್ನು ಇನ್ನೊಂದು ಏಕಮುಖದ ರಸ್ತೆಯನ್ನಾಗಿ ಮಾಡಿದಲ್ಲಿ ವಾಹನ ಸಂಚಾರವನ್ನು ಸುಗಮಗೊಳಿಸಬಹುದಾಗಿರುತ್ತದೆ ಎಂದೂ, ಈ ರಸ್ತೆಯು 9ನೇ ಮುಖ್ಯ ರಸ್ತೆಗೆ ಸೇರುವಲ್ಲಿ ಖಾಸಗಿ ಸ್ವತ್ತು ಇದ್ದು ಸದರಿ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಜೆ.ಪಿ.ನಗರ-ಉಪವಿಭಾಗ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ, ಭೂ-ಮಾಪಕರು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ, ಭೂಸ್ವಾಧೀನಕ್ಕೊಳಪಡುವ ಸ್ವತ್ತುಗಳ ವಿಸ್ತೀರ್ಣದ ವಿವರಗಳನ್ನೊಳಗೊಂಡ ನಕ್ಷೆಯೊಂದಿಗೆ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಭೂ-ಸ್ವಾಧೀನಕ್ಕೊಳಪಡುವ ಸ್ವತ್ತುಗಳ ವಿವರಗಳು ಆರ್.ಟಿ.ಸಿ ದಾಖಲೆಯಂತೆ ಈ ಕೆಳಕಂಡಂತೆ ಇರುತ್ತದೆ;

**ಬೆಂಗಳೂರು ದಕ್ಷಿಣ (ತಾಲ್ಲೂಕು)** **ಉತ್ತರಹಳ್ಳಿ ಹೋಬಳಿ** **ಗ್ರಾಮ ಸಾರಕ್ಕಿ**

| ಕ್ರ.ಸಂ. | ಖಾತೆದಾರರ ಹೆಸರು (ಆರ್.ಟಿ.ಸಿ. ಯಂತೆ) | ಸರ್ವೆ ನಂ. | ಒಟ್ಟು ವಿಸ್ತೀರ್ಣ (ಎ.ಗು) | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | |
|---|---|---|---|---|---|
| | | | | ಚ.ಮೀ | ಚ.ಅಡಿ |
| 1 | ಜಯರಾಂ | 60/3 | 1-39 | ರಸ್ತೆಗೆ - 32.50 | 350.00 |
| | | | | ಶೌಚಾಲಯಕ್ಕೆ - | 290.22 |
| 2 | ಜಯರಾಂ | 60/6ಎ | 0-18 | 247.00 | 2657.72 |
| ಒಟ್ಟು | | | | **306.5** | **3297.94** |

ಈ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ಜಾಗವು ಅಭಿವೃದ್ಧಿ ಹೊಂದಿರುವ ಪ್ರದೇಶದಲ್ಲಿ ಬರುತ್ತಿದ್ದರೂ ಸಹ ಈ ಜಾಗವು ವ್ಯವಸಾಯದ ಜಮೀನಾಗಿದ್ದು, ವ್ಯವಸಾಯೇತರ ಉದ್ದೇಶಕ್ಕಾಗಿ ಸಮುಚಿತ ಪ್ರಾಧಿಕಾರದಿಂದ ಪರಿವರ್ತನೆ ಆದ ಬಗ್ಗೆ ಯಾವುದೇ ಅಧಿಕೃತ ಆದೇಶ ಇರುವುದಿಲ್ಲ. ಈ ಜಾಗಕ್ಕೆ ಪಾಲಿಕೆಯಲ್ಲಿ ಖಾತೆ ನೋಂದಾವಣೆ ಸಹ ಆಗಿರುವುದಿಲ್ಲ. ಆದ್ದರಿಂದ, ಕಾರ್ಯದರ್ಶಿಗಳು, ಕೇಂದ್ರ ಮೌಲ್ಯಮಾಪನ ಸಮಿತಿಯವರು, ಸಾರಕ್ಕಿ ಗ್ರಾಮದಲ್ಲಿ ವ್ಯವಸಾಯದ ಜಮೀನಿಗೆ ನಿಗಧಿಪಡಿಸಿರುವ ಮಾರ್ಗಸೂಚಿ ಬೆಲೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಅದರಂತೆ, ಸಾರಕ್ಕಿ ಗ್ರಾಮದಲ್ಲಿ ವ್ಯವಸಾಯದ ಜಮೀನಿಗೆ ಎಕರೆ ಒಂದಕ್ಕೆ 1 ಕೋಟಿ ರೂಪಾಯಿಗಳು ಎಂದು ಮಾರ್ಗಸೂಚಿ ಬೆಲೆಯನ್ನು ನಿಗಧಿಪಡಿಸಿದ್ದು ಈ ಬೆಲೆಯನ್ನು ಗಣನೆಗೆ ತೆಗೆದುಕೊಂಡು ಚ.ಅ. ಒಂದಕ್ಕೆ ರೂ.230/- ಎಂದು ಪರಿಗಣಿಸಲಾಗಿದೆ. ಈ ಅಂಶಗಳನೇ ಆಧರಿಸಿ, ಸಹಾಯಕ ಅಭಿಯಂತರರು ವಾರ್ಡ್-178 ರವರು ಪ್ರಸ್ತಾಪಿತ ಸ್ವತ್ತುಗಳ ವ್ಯಾಲ್ಯುಯೇಷನ್ ತಃಖ್ತೆಯನ್ನು ಸಲ್ಲಿಸಿರುತ್ತಾರೆ. ಅದರಂತೆ, ಈ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ವೆಚ್ಚವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

| | | |
|---|---|---|
| 'ಅ' | | |
| 1 | ಚ.ಅ. 1ಕ್ಕೆ ಮಾರ್ಗಸೂಚಿ ಬೆಲೆ ರೂ.230/-ರಂತೆ 3297.94 ಚದರ ಅಡಿಗಳಿಗೆ | ರೂ.7,58,526-00 |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1) (ಎ) ರನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇ.12 ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) | ರೂ.91,023-00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶೆ.30 ರಷ್ಟು ಶಾಸನಬದ್ಧ ಭತ್ಯೆ | ರೂ.2,27,558-00 |
| | **ಒಟ್ಟು** | **ರೂ.10,77,107-00** |
| 'ಆ' | | |
| ಇತರೆ ವೆಚ್ಚಗಳು | | |
| 4 | ಶೆ.10 ರಷ್ಟು ಸಿಬ್ಬಂದಿ ವೆಚ್ಚ | ರೂ.1,07,711-00 |
| 5 | ಶೆ.1 ರಷ್ಟು ಆಡಿಟ್ ವೆಚ್ಚ | ರೂ.10,771-00 |
| 6 | ಪ್ರಕಟಣಾ ವೆಚ್ಚ | ರೂ.1,50,000-00 |
| | **ಒಟ್ಟು** | **ರೂ.2,68,482-00** |

**'ಅ+ಆ' = ಒಟ್ಟು ಮೊತ್ತ ರೂ.13,45,589-00 (ಹದಿಮೂರು ಲಕ್ಷದ ನಲವತ್ತೈದು ಸಾವಿರದ ಐನ್ನೂರ ಎಂಭತ್ತೊಂಭತ್ತು ರೂಪಾಯಿಗಳು ಮಾತ್ರ)**

ಸದರಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ರೂ.13,45,589-00 (ಹದಿಮೂರು ಲಕ್ಷದ ನಲವತ್ತೈದು ಸಾವಿರದ ಐನ್ನೂರ ಎಂಭತ್ತೊಂಭತ್ತು ರೂಪಾಯಿಗಳು ಮಾತ್ರ) ಗಳಾಗಲಿದ್ದು, ಈ ಮೊತ್ತವನ್ನು ಪಾಲಿಕೆಯಿಂದ ಭರಿಸುವ ಬಗ್ಗೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-11-2010 ರ ಟಿಪ್ಪಣಿ ಮತ್ತು ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 1 (229)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:36 (ಹಳೆಯ ವಾರ್ಡ್ ಸಂಖ್ಯೆ:4), ಮತ್ತೀಕೆರೆ ಮೇಲು ಸೇತುವೆಗೆ "ಡಾ॥ ಶ್ಯಾಮಾಪ್ರಸಾದ ಮುಖರ್ಜಿ" ರವರ ಹೆಸರನ್ನು ನಾಮಕರಣ ಮಾಡುವಲ್ಲಿ ದಿನಾಂಕ:27-11-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ.3(98)/2010-11 ರಲ್ಲಿ "ಡಾ॥ ಶ್ಯಾಮಾಪ್ರಸಾದ ಮುಖರ್ಜಿ" ರವರ ಹೆಸರನ್ನು ನಾಮಕರಣ ಮಾಡುವುದೆಂದು ತೀರ್ಮಾನಿಸಲಾಗಿದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13-12-2010 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:36, (ಹಳೆಯ ವಾರ್ಡ್ ಸಂಖ್ಯೆ:4), ಮತ್ತೀಕೆರೆ ಮೇಲು ಸೇತುವೆಗೆ "ಡಾ॥ ಶ್ಯಾಮಾಪ್ರಸಾದ ಮುಖರ್ಜಿ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-01-2011 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:28-01-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:28-01-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 04 (230) /2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬನಶಂಕರಿ 2ನೇ ಹಂತದ ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕೆ ಕರೀಸಂದ್ರ (ಭವಾನಿನಗರ ಸ್ಲಂ), ಕದಿರೇನಹಳ್ಳಿ ಮತ್ತು ಜರಗನಹಳ್ಳಿ ಗ್ರಾಮಗಳ ಹಲವು ಸ್ವತ್ತುಗಳು/ಆಸ್ತಿಗಳು ಒಳಪಟ್ಟಿದ್ದು, ಕರೀಸಂದ್ರ (ಭವಾನಿನಗರ ಸ್ಲಂ) ಕದಿರೇನಹಳ್ಳಿ ಗ್ರಾಮಗಳ ಕೊಳಚೆ ಪ್ರದೇಶ (ಸ್ಲಂ) ರಲ್ಲಿ ಕಳೆದ ಸುಮಾರು 10-15 ವರ್ಷಗಳಿಂದ ತಾತ್ಕಾಲಿಕ ಶೆಡ್/ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕಡುಬಡವರಿಗೆ, ಹಿಂದುಳಿದ ಪಂಗಡದವರಿಗೆ, ಪರಿಶಿಷ್ಟ ವರ್ಗದವರಿಗೆ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರಿಗೆ ಸಕ್ರಮಗೊಳಿಸಿ, ಬಿ.ಡಿ.ಎ. ವತಿಯಿಂದ ನಿವೇಶನ ಮಂಜೂರಾದಂತೆ ಹಲವರು ಹಕ್ಕುಪತ್ರಗಳನ್ನು ಪಡೆದು ಹಾಗೂ ಕಂದಾಯ ಇಲಾಖೆಯಿಂದ ಹಕ್ಕುಪತ್ರಗಳನ್ನು ಪಡೆದು ಮತ್ತು ರೆವಿನ್ಯೂ ನಿವೇಶನಗಳನ್ನು ಕ್ರಯಕ್ಕೆ ಪಡೆದು, ಪಾಲಿಕೆಯಲ್ಲಿ ಖಾತಾ ನೊಂದಾಯಿಸಿಕೊಂಡಿರುತ್ತಾರೆ. ಇನ್ನೂ ಹಲವರು ಬಿ.ಡಿ.ಎ ಯಿಂದ ಸ್ವಾಧೀನ ಪತ್ರ ಹೊಂದಿದ್ದು, ಕೆಲವರು ಯಾವುದೇ ದಾಖಲೆಗಳನ್ನು ಪಡೆಯದೆ ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾರೆ.

ಕೆಳಸೇತುವೆ ನಿರ್ಮಾಣ ಕಾಮಗಾರಿಯು ಕಳೆದ ಸುಮಾರು 2 ವರ್ಷಗಳಿಂದ ನಡೆಯುತ್ತಿದ್ದು, ಶೇಕಡ 70 ರಿಂದ 80 ರಷ್ಟು ಕಾಮಗಾರಿ ನಡೆದಿದ್ದು, ಕೆಲಸ ಪ್ರಗತಿಯಲ್ಲಿರುತ್ತದೆ. ಜಂಕ್ಷನ್ ಬಳಿ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿ ರಸ್ತೆ ಅಗಲೀಕರಣಕ್ಕಾಗಿ ಒಳಪಡುವ ಸ್ವತ್ತುಗಳನ್ನು ಟಿ.ಡಿ.ಆರ್ ಯೋಜನೆಯಡಿ ಸ್ವಾಧೀನಪಡಿಸಿಕೊಳ್ಳಲು ಕ್ರಮವಹಿಸಬೇಕಾಗಿರುತ್ತದೆ. ಸ್ವತ್ತುಗಳ ಮಾಲೀಕರಾದ ಶ್ರೀ.ವೆಂಕಟಾದ್ರಿ, ಶ್ರೀ.ಕೆ.ಗೋವಿಂದನಾಯ್ಡು, ಶ್ರೀ.ಸಿ.ಎಲ್.ನರಸಿಂಹಮೂರ್ತಿ, ಶ್ರೀಮತಿ ಶಮಾದೇವಿ, ಶ್ರೀ.ಅಮೀರ್ ಜಾನ್‌ರವರ ಸ್ವತ್ತುಗಳನ್ನು ಹಕ್ಕು ಬಿಡುಗಡೆ ಪತ್ರದ ಮೂಲಕ ಪಾಲಿಕೆಗೆ ನೊಂದಾಯಿಸಿಕೊಂಡು, ಡಿ.ಆರ್.ಸಿ ನೀಡಿದ್ದು, ಟಿ.ಡಿ.ಆರ್ ಬೈ-ಬ್ಯಾಕ್ ಯೋಜನೆಯಡಿ ಟ್ರಾನ್ಸ್‌ಫರ್ ಡೀಡ್ ಅನ್ನು ಪಾಲಿಕೆಗೆ ನೊಂದಾಯಿಸಿಕೊಂಡು ಸರ್ಕಾರದ ಮಾರ್ಗಸೂಚಿ ದರದಂತೆ ಪರಿಹಾರ ಪಾವತಿ ನಂತರ ಭೌತಿಕ ಸ್ವಾಧೀನತೆಯನ್ನು ಪಡೆದು ಕಟ್ಟಡ ತೆರವುಗೊಳಿಸಲಾಗಿರುತ್ತದೆ. ಐದು ಜನರ ಪೈಕಿ ಶ್ರೀ. ವೆಂಕಟಾದ್ರಿಯವರು ಮಾತ್ರ ತಹಲ್‌ವರೆವಿಗೆ ಆಸ್ತಿ ತೆರಿಗೆ ಪಾವತಿ ಮಾಡಿದ್ದು, ಶ್ರೀ.ಸಿ.ಎಲ್.ನರಸಿಂಹಮೂರ್ತಿ, ಶ್ರೀ.ಗೋವಿಂದನಾಯ್ಡು, ಶ್ರೀ.ಅಮೀರ್‌ಜಾನ್, ಶ್ರೀಮತಿ ಶಮಾದೇವಿಯವರ ಪ್ರಕರಣಗಳಲ್ಲಿ 3 ವರ್ಷಗಳ ಆಸ್ತಿ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಶ್ರೀ.ಸಿ.ಎಲ್.ನರಸಿಂಹಮೂರ್ತಿ ರವರ ಪ್ರಕರಣದ ಆದೇಶ ಪಡೆಯಲಾಗಿರುತ್ತದೆ.

ಈ ವಿಷಯದ ಬಗ್ಗೆ ಮುಕ್ತ ಚರ್ಚೆಗಾಗಿ ಸ್ವತ್ತುಗಳ ಮಾಲೀಕರನ್ನು ಪಾಲಿಕೆಯ ವಾರ್ಡ್‌ನ ಸದಸ್ಯರುಗಳನ್ನು ಹಾಗೂ ಸಂಬಂಧಪಟ್ಟ ಅಧಿಕಾರಿಗಳವರನ್ನು ದಕ್ಷಿಣ ವಲಯ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 06-09-2010 ರಂದು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಕರೆಯಲಾಗಿದ್ದು, ಎಲ್ಲರೂ ಹಾಜರಿದ್ದು, ಚರ್ಚೆ ಮಾಡಲಾಗಿ ಸ್ವಾಧೀನತೆಗೆ ಒಳಪಡುವ ಸ್ವತ್ತುಗಳ ಮಾಲೀಕರು ತಾವುಗಳು ಬಡವರಾಗಿದ್ದು, ಆರ್ಥಿಕವಾಗಿ ದುರ್ಬಲರಾಗಿದ್ದು, ಜೀವನ ನಡೆಸುವುದೇ ತುಂಬಾ ಕಷ್ಟಕರವಾಗಿರುವುದರಿಂದ ಸುಮಾರು 3 ರಿಂದ 5 ವರ್ಷಗಳ ಕಾಲದ ಆಸ್ತಿ ತೆರಿಗೆಯನ್ನು ಪಾವತಿ ಮಾಡಲು ಸಹ ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ವಶಪಡಿಸಿಕೊಳ್ಳಲಾಗುವ ಸ್ವತ್ತುಗಳ ಮಾಲೀಕರಿಗೆ ಪರ್ಯಾಯವಾಗಿ ನಿವೇಶನ/ವಸತಿ ಸೌಕರ್ಯ ಕಲ್ಪಿಸಿಕೊಡಬೇಕೆಂಬ ಹಾಗೂ ಈಗ ನೀಡಲಾಗುತ್ತಿರುವ ಸರ್ಕಾರದ ಮಾರ್ಗಸೂಚಿ ದರವು ತುಂಬಾ ಕಡಿಮೆ ಇದ್ದು, ಪರಿಹಾರದ ಮೊತ್ತವನ್ನು ಹೆಚ್ಚುವರಿ ಮಾಡಬೇಕೆಂದು ಕಾಮಗಾರಿಗೆ ಒಳಪಡುವ ಸ್ವತ್ತುಗಳನ್ನು ಪಾಲಿಕೆಗೆ

..............................2

ಬಿಟ್ಟುಕೊಡುವ ಅನಿವಾರ್ಯತೆ ಇರುವುದರಿಂದ ಸ್ವತ್ತುಗಳ ಮೇಲಿನ ಬಾಕಿಯಿರುವ ಕಂದಾಯ ಪಾವತಿಸುವ ವಿನಾಯಿತಿಯನ್ನು ನೀಡಬೇಕೆಂಬ ಬೇಡಿಕೆಯ ಪ್ರಸ್ತಾಪವನ್ನಿಟ್ಟಿದ್ದು, ಪರ್ಯಾಯ ನಿವೇಶನ/ವಸತಿ ಸೌಕರ್ಯ ಕಲ್ಪಿಸುವುದು ಸಾಧ್ಯವಿಲ್ಲವೆಂಬ ಅಭಿಪ್ರಾಯಕ್ಕೆ ಬಂದು ಸ್ವತ್ತುಗಳನ್ನು ಶೀಘ್ರವಾಗಿ ಪಾಲಿಕೆಗೆ ಬಿಟ್ಟು ಕೊಡಲು ಮಾಲೀಕರುಗಳಿಗೆ ಮನವೊಲಿಸಲಾಗಿದೆ.

ಕಾಮಗಾರಿಗೆ ಒಳಪಡುವ ಸ್ವತ್ತು/ಆಸ್ತಿಗಳ ಮೇಲೆ ಮಾಲೀಕ/ಹಕ್ಕುದಾರರಿಂದ 3 ರಿಂದ 5 ವರ್ಷಗಳ ಕಾಲದ ಕಂದಾಯ ಪಾವತಿ ಬಾಕಿಯಿದ್ದು, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ಸೆಕ್ಷನ್ 110 ರನ್ವಯ ನೀಡಲಾಗಿರುವ ಆಸ್ತಿ ತೆರಿಗೆ ವಿನಾಯಿತಿಯಲ್ಲಿ ಖಾಸಗಿ ಮಾಲೀಕತ್ವಕ್ಕೆ ಸೇರಿದ ನಿವೇಶನ ಹಾಗೂ ಕಟ್ಟಡಗಳು ಒಳಗೊಂಡಿರುವುದಿಲ್ಲ. ಅಲ್ಲದೇ, ಕಾಯ್ದೆಯ ಕಲಮ 108 ರಲ್ಲಿ ಈ ಕಾಯ್ದೆಯಲ್ಲಿ ನೀಡಿರುವ ವಿನಾಯಿತಿಗಳನ್ನು ಹೊರತುಪಡಿಸಿ, ಎಲ್ಲಾ ಸಂದರ್ಭಗಳಲ್ಲೂ ಕಡ್ಡಾಯವಾಗಿ ಆಸ್ತಿ ತೆರಿಗೆಯನ್ನು ವಿಧಿಸಬೇಕೆಂದು ನಿರ್ಧಿಷ್ಟಪಡಿಸಲಾಗಿದೆ. ಕೆ.ಎಂ.ಸಿಕಾಯ್ದೆ ಸೆಕ್ಷನ್-107 ರಲ್ಲಿ ಪಾಲಿಕೆಗೆ ಯಾವುದೇ ತೆರಿಗೆಯನ್ನು ಅಮಾನತ್ತು, ಕಡಿತ ಅಥವಾ ರದ್ದುಗೊಳಿಸಲು ಅವಕಾಶ ನೀಡಲಾಗಿದೆ.

ಆಸ್ತಿ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಕೆ.ಎಂ.ಸಿ ಕಾಯ್ದೆಯಲ್ಲಿ ಪ್ರಾರ್ಥನಾ ಮಂದಿರವನ್ನು ಹೊರತುಪಡಿಸಿ, ಯಾವುದೇ ನಿವೇಶನ/ಕಟ್ಟಡಗಳಿಗೆ ಆಸ್ತಿ ತೆರಿಗೆ ವಿನಾಯಿತಿಗೆ ಅವಕಾಶವಿರುವುದಿಲ್ಲ ಎಂಬುದಾಗಿ ಹಾಗೂ ಇವರಿಗೆ ಸ್ವತ್ತಿನ ಪರಿಹಾರ ಪಾವತಿಸುವ ವೇಳೆಯಲ್ಲಿ ಬಾಕಿಯಿರುವ ಆಸ್ತಿ ತೆರಿಗೆಯನ್ನು ಪರಿಹಾರ ಮೊತ್ತದಲ್ಲಿ ಕಡಿತಗೊಳಿಸಿ, ಉಳಿಕೆ ಪರಿಹಾರವನ್ನು ಪಾವತಿಸುವುದು ಸೂಕ್ತವೆಂದು ಉಪ ಆಯುಕ್ತರು (ಕಂದಾಯ) ರವರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಕಾಮಗಾರಿಗೆ ಒಳಪಡುವ ಸ್ವತ್ತುಗಳ ಸ್ವಾಧೀನತೆಯನ್ನು ಶೀಘ್ರವಾಗಿ ಪಡೆಯಲು ಸ್ವತ್ತುಗಳ ಮಾಲೀಕ/ಹಕ್ಕುದಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸಲು ಒತ್ತಾಯ ಮಾಡದೇ ವಿನಾಯಿತಿ ನೀಡಿರುವುದು ಸೂಕ್ತವೆಂದು ಮಾನ್ಯ ವಿಶೇಷ ಅಯುಕ್ತರು (ಯೋಜನೆ) ರವರು ಚರ್ಚೆ ವೇಳೆ ಅಭಿಪ್ರಾಯಪಟ್ಟಿರುತ್ತಾರೆ.

ಕೆಳಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿಗೆ ಒಳಪಡುವ ಸ್ವತ್ತುಗಳು ರಸ್ತೆ ಅಗಲೀಕರಣಕ್ಕಾಗಿ ಶೀಘ್ರವಾಗಿ ಅತ್ಯಾವಶ್ಯಕತೆ ಇದ್ದು, ಆಸ್ತಿ ಮಾಲೀಕರು/ಹಕ್ಕುದಾರರು ಆರ್ಥಿಕವಾಗಿ ದುರ್ಬಲರು, ಕಡುಬಡವರಾಗಿದ್ದು, ಟಿ.ಡಿ.ಆರ್.ಯೋಜನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಹಾಗೂ 1894 ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಪ್ರಕ್ರಿಯೆ ಹೆಚ್ಚಿನ ಅವಧಿಯ ಕೆಲಸವಾಗಿರುವುದರಿಂದ ಹಾಗೂ ಆರ್ಥಿಕವಾಗಿ ಹೆಚ್ಚಿನ ಹೊರೆಯಾಗುವುದರ ಹಿನ್ನಲೆಯಲ್ಲಿ ಆಸ್ತಿಗಳ ಮೇಲೆ ಬಾಕಿಯಿರುವ ತೆರಿಗೆಯನ್ನು ಪಾವತಿಸಲು ವಿನಾಯಿತಿ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

## ಕದಿರೇನಹಳ್ಳಿ ಕೆಳಸೇತುವೆ ಮತ್ತು ಸರ್ವಿಸ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಕೊಳಪಡುವ ಖಾಸಗಿ ಸ್ವತ್ತುಗಳ ವಿವರ

### ಕನಕಪುರ ರಸ್ತೆಯಿಂದ – ಕದಿರೇನಹಳ್ಳಿ ವೃತ್ತದೆ ಕಡೆ ರಿಂಗ್ ರಸ್ತೆಯ ಎಡಭಾಗದ ಸ್ವತ್ತುಗಳು

| ಕ್ರಮ ಸಂಖ್ಯೆ | ಸ್ವತ್ತಿನ ಮಾಲೀಕರ ಹೆಸರು | ಗ್ರಾಮ | ಸರ್ವೆ ನಂ. | ಸ್ವತ್ತಿನ ನಂ. | ಷರಾ |
|---|---|---|---|---|---|
| 01 | ಎ.ಎನ್.ಶಿವಕುಮಾರ್ | ಕದಿರೇನಹಳ್ಳಿ | 6/2 | 6/2 | ಎಡಭಾಗ |
| 02 | ಕೌಶಲ್ಯ w/o ದೇವರಾಜು | ಕದಿರೇನಹಳ್ಳಿ | 6/2 | 2 | ಎಡಭಾಗ |

..............................3

| | | | | | |
|---|---|---|---|---|---|
| 03 | ಚೆನ್ನವೀರಸ್ವಾಮಿ s/o ಲಕ್ಕಯ್ಯ | ಕರೀಸಂದ್ರ 1/2<br>ಕದಿರೇನಹಳ್ಳಿ 1/2 | 24/2<br>6/2 | 3 | ಎಡಭಾಗ |
| 04 | ರಮಾದೇವಿ | ಕದಿರೇನಹಳ್ಳಿ | 24/2<br>6/2 | 3 | ಎಡಭಾಗ |
| 05 | ಚಂದ್ರಮ್ಮ | ಕದಿರೇನಹಳ್ಳಿ | 6/2 | 3 | ಎಡಭಾಗ |
| 06 | ಶಂಷುದ್ದೀನ್ ಅನ್ಸಾರಿ (ಅಫಸರ್ ಅಹಮದ್) | ಕದಿರೇನಹಳ್ಳಿ 1/2<br>ಕದಿರೇನಹಳ್ಳಿ 1/2 | 24/2<br>6/2 | 1 | ಎಡಭಾಗ |
| 07 | ಜೀನತ್ ಬೇಗಂ w/o ಅಬ್ದುಲ್ ಕಲೀಂ | ಕದಿರೇನಹಳ್ಳಿ | 24/2 | 9 | ಎಡಭಾಗ |
| 08 | ಅಮೀರ್ ಜಾನ್ | ಕದಿರೇನಹಳ್ಳಿ | 24/2 | 28 | ಎಡಭಾಗ |
| 09 | ಗೋವಿಂದನಾಯ್ಡು | ಕದಿರೇನಹಳ್ಳಿ | 24/2 | 30 | ಎಡಭಾಗ |
| 10 | ಮುನಿಸ್ವಾಮಿ s/o ಕಂಟಸ್ವಾಮಿ | ಕದಿರೇನಹಳ್ಳಿ | 24/2 | 52 | ಎಡಭಾಗ |
| 11 | ಬಿ.ಎಸ್.ಪರಮೇಶ್ | ಕದಿರೇನಹಳ್ಳಿ | 24/2 | 53 | ಎಡಭಾಗ |
| 12 | ಸುಬ್ರಮಣ್ಯ s/o ನಲ್ಲಯ್ಯಚಾರಿ | ಕದಿರೇನಹಳ್ಳಿ | 24/2 | 66 | ಎಡಭಾಗ |
| 13 | ಸಯ್ಯದ್ ರೇಪತ್ ಅಹಮದ್ | ಜರಗನಹಳ್ಳಿ | 6 | | ಎಡಭಾಗ |
| 14 | ಕಾರ್ಯಸಿದ್ದ ಗಣಪತಿ | ಜರಗನಹಳ್ಳಿ | | | ಎಡಭಾಗ |
| 15 | ಡೇಪ್ರೆಷ್ (ಗೋವಿಂದರಾಜು) | ಕದಿರೇನಹಳ್ಳಿ | | | ಎಡಭಾಗ |
| 16 | ರಾಮು s/o ಲೇ.ತಿಮ್ಮಯ್ಯ | ಕದಿರೇನಹಳ್ಳಿ | 24/2 | 370 | ಎಡಭಾಗ |
| 17 | ಶಶಿಕಲಾ w/o ಬಿ.ಎನ್.ಜಯಕುಮಾರ್ | ಕದಿರೇನಹಳ್ಳಿ | 7/1ಎ | 7/1ಎ | ಎಡಭಾಗ |
| 18 | ಮುನಿರತ್ನ w/o ಪಿ.ಸುಧಾಕರ | ಕದಿರೇನಹಳ್ಳಿ | 24/2 | 6/2ಬಿ | ಎಡಭಾಗ |
| 19 | ಶಾಂತಮ್ಮ w/o ಮುನಿಯಪ್ಪ | ಕದಿರೇನಹಳ್ಳಿ | 24 | 9 | |
| 20 | ರವೀಂದ್ರನಾಥ (ಸೌಪರ್ಣಿಕ ಹೋಟೆಲ್) | ಕದಿರೇನಹಳ್ಳಿ | | | ಎಡಭಾಗ |
| 21 | ಕೃಷ್ಣನಾಯ್ಡು ಸುಬ್ರಮಣ್ಯಪುರ ಮುಖ್ಯರಸ್ತೆ | ಕದಿರೇನಹಳ್ಳಿ | | 18/2 | ಎಡಭಾಗ |
| 22 | ಷಂಷುದ್ದೀನ್ ಅನ್ಸಾರಿ ಮತ್ತು ಚಂದ್ರಮ್ಮ | ಕದಿರೇನಹಳ್ಳಿ | | | ಎಡಭಾಗ |
| 23 | ಜಿನಿತ್ ಬೇಗಂ w/o ಅಬ್ದುಲ್ ರಹೀಂ | ಕದಿರೇನಹಳ್ಳಿ | | 9 | ಎಡಭಾಗ |
| 24 | ಮುನಿಸ್ವಾಮಿ s/o ಕಂದಸ್ವಾಮಿ | ಕದಿರೇನಹಳ್ಳಿ | 24/2 | 52 | ಎಡಭಾಗ |
| 25 | ಸುಬ್ರಮಣ್ಯಂ s/o ಸುಬ್ರಮಣ್ಯಚಾರಿ | ಕದಿರೇನಹಳ್ಳಿ | 24/2 | 66 | ಎಡಭಾಗ |
| 26 | ಪಿ.ಲಕ್ಷ್ಮಿನಾರಾಯಣ ಎಂ.ಪಿ.ಪ್ರಹ್ಲಾದ್ | ಕದಿರೇನಹಳ್ಳಿ | 24 | 8 | ಎಡಭಾಗ |
| 27 | ವಾಸು | ಕದಿರೇನಹಳ್ಳಿ | 24 | | ಎಡಭಾಗ |
| 28 | ಮಹಮದ್ ಫಯಾಜ್ | ಕದಿರೇನಹಳ್ಳಿ | 6/2ಸಿ, 7, 10 | 7/1 | ಎಡಭಾಗ |
| 29 | ಚೆನ್ನವೀರಸ್ವಾಮಿ ಮತ್ತು ಕೌಶಲ್ಯ | ಕದಿರೇನಹಳ್ಳಿ | 24/2 | | ಎಡಭಾಗ |
| 30 | ನಾಗಲಕ್ಷ್ಮಿ ಹೆಚ್,ಎಸ್.ಎಂ.ಪ್ರಕಾಶ್, 1ನೇ ಕ್ರಾಸ್, 1ನೇ ಸ್ಟೇಜ್, ಉಪಾಧ್ಯಾಯ ಕಾಲೋನಿ, ದಯಾನಂದ ಕಾಲೇಜು ರಸ್ತೆ | ಜರಗನಹಳ್ಳಿ | | | ಎಡಭಾಗ |

1. ಖಾಸಗಿ ದೇವಸ್ಥಾನ 1
2. ಮಾಲೀಕರುಗಳ ಸ್ವತ್ತು 29

**ಜುಮ್ಲಾ 30**

............................4

## ಕದಿರೇನಹಳ್ಳಿ ಕೆಳಸೇತುವೆ ಮತ್ತು ಸರ್ವೀಸ್ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಕ್ಕೊಳಪಡುವ ಖಾಸತಿ ಸ್ವತ್ತುಗಳ ವಿವರ.

### ಕನಕಪುರ ರಸ್ತೆಯಿಂದ-ಕದಿರೇನಹಳ್ಳಿ ವೃತ್ತದ ಕಡೆ ರಿಂಗ್ ರಸ್ತೆಯ ಬಲಭಾಗದ ಸ್ವತ್ತುಗಳು

| ಕ್ರಮ ಸಂಖ್ಯೆ | ಸ್ವತ್ತಿನ ಮಾಲೀಕರ ಹೆಸರು | ಗ್ರಾಮ | ಸರ್ವೆ ನಂ. | ಸ್ವತ್ತಿನ ನಂ. | ಷರಾ |
|---|---|---|---|---|---|
| 01 | ತುಳಸಮ್ಮ w/o ರಾಮಚಂದ್ರ | ಕರೀಸಂದ್ರ | 24/1 | 13 | ಬಲಭಾಗ |
| 02 | ಮುನಿರತ್ನಮ್ಮ w/o ಚೆನ್ನಪ್ಪ | ಕರೀಸಂದ್ರ | 24 | 12 | ಬಲಭಾಗ |
| 03 | ಶಾಂತಮ್ಮ w/o ಮುನಿಯಪ್ಪ | ಕರೀಸಂದ್ರ | 24 | 09 | ಬಲಭಾಗ |
| 04 | ಚಿಕ್ಕಹೊನ್ನಯ್ಯ s/o ಹೊನ್ನೇಗೌಡ | ಕರೀಸಂದ್ರ | 24 | 389 (4) | ಬಲಭಾಗ |
| 05 | ತುಳಸಮ್ಮ w/o ರಾಜುನಾಯ್ಕ್ | ಕರೀಸಂದ್ರ | 24 | 1 | ಬಲಭಾಗ |
| 06 | ಸಿವಿಲ್.ನರಸಿಂಹಮೂರ್ತಿ. ಎನ್.ಕೃಷ್ಣಮೂರ್ತಿ | ಕರೀಸಂದ್ರ | 24 | 373 | ಬಲಭಾಗ |
| 07 | ಚೆನ್ನಮ್ಮ w/o ವೆಂಕಟಸ್ವಾಮಿ | ಕರೀಸಂದ್ರ | 24/2 | 371 | ಬಲಭಾಗ |
| 08 | ಶಮಾದೇವಿ w/o ಭಿಕ್ಕಾರಾಂ | ಕರೀಸಂದ್ರ | 24/2 | 374 | ಬಲಭಾಗ |
| 09 | ಗೌರಮ್ಮ ನಾಗರಾಜು | ಕರೀಸಂದ್ರ | 24/2 | 472 | ಬಲಭಾಗ |
| 10 | ಗಂಗಾಧರ, ನಾರಾಯಣಸ್ವಾಮಿ (ಜಿ.ಪಿ.ಎ) | ಕರೀಸಂದ್ರ | 24 | 471 | ಬಲಭಾಗ |
| 11 | ಭಾಗ್ಯ | ಕರೀಸಂದ್ರ | 24 | | ಬಲಭಾಗ |
| 12 | ವೆಂಕಟಾದ್ರಿ s/o ಮುನಿವೆಂಕಟಪ್ಪ | ಕರೀಸಂದ್ರ | 24/2 | 447 | ಬಲಭಾಗ |
| 13 | ಚೆನ್ನಮ್ಮ w/o ವೆಂಕಟಸ್ವಾಮಿ (ಕ್ರಯದಾರ) | ಕರೀಸಂದ್ರ | 24/2 | 372 | ಬಲಭಾಗ |
| 14 | ಪಾರ್ವತಿ w/o ಮಾಣಿಕ್ಯಂ | ಕರೀಸಂದ್ರ | 24/2 | 375 | ಬಲಭಾಗ |
| 15 | ವಸಂತ w/o ಚಲ್ಲರ್ | ಕರೀಸಂದ್ರ | 24/2 | 421 | ಬಲಭಾಗ |
| 16 | ಬ್ಯಾಟರಾಯಪ್ಪ s/o ವೆಂಕಟಪ್ಪ (ಕ್ರಯದಾರ) | ಕರೀಸಂದ್ರ | 24/2 | 423 | ಬಲಭಾಗ |
| 17 | ಅಂಗನವಾಡಿ ಕೇಂದ್ರ | ಕರೀಸಂದ್ರ | 24/2 | | ಬಲಭಾಗ |
| 18 | ವೆಂಕಟಸ್ವಾಮಿ s/o ಚಿಕ್ಕವೆಂಕಟಪ್ಪ | ಕರೀಸಂದ್ರ | 24/2 | 390 | ಬಲಭಾಗ |
| 19 | ನಾಗರಾಜು s/o ವೆಂಕಟಸ್ವಾಮಿ | ಕರೀಸಂದ್ರ | 24 | 472 | ಬಲಭಾಗ |
| 20 | ಬಿ.ಎನ್ ಶಿವಣ್ಣ s/o ನಂಜಪ್ಪ | ಕರೀಸಂದ್ರ 1/2<br>ಕದಿರೇನಹಳ್ಳಿ 1/2 | 24 | 14 | ಬಲಭಾಗ |
| 21 | ಶಾಂತಮ್ಮ w/o ಮುನಿಯಪ್ಪ | ಕರೀಸಂದ್ರ | 24 | 9 | ಬಲಭಾಗ |
| 22 | ಗಂಗಾಧರ (ಕ್ರಯದಾರ) | ಕರೀಸಂದ್ರ | 24 | 471 | ಬಲಭಾಗ |
| 23 | ಸಿ.ವೆಂಕಟೇಶ್ s/o ವೆಂಕಟಸ್ವಾಮಿ | ಕರೀಸಂದ್ರ | 24 | 473 | ಬಲಭಾಗ |
| 24 | ಗಂಗಮ್ಮ w/o ಮುನಿಸ್ವಾಮಿ | ಕರೀಸಂದ್ರ | 24/2 | 388 | ಬಲಭಾಗ |
| 25 | ನಾಗಲಿಂಗೇಶ್ವರಸ್ವಾಮಿ | ಕರೀಸಂದ್ರ | 24 | | ಬಲಭಾಗ |
| 26 | ಶ್ರೀ.ಮೋಕ್ಷ ಶನೇಶ್ವರಸ್ವಾಮಿ ದೇವಸ್ಥಾನ | ಕದಿರೇನಹಳ್ಳಿ | 24 | | ಬಲಭಾಗ |
| 27 | ಶ್ರೀ. ಆಂಜನೇಯಸ್ವಾಮಿ ದೇವಸ್ಥಾನ | ಕದಿರೇನಹಳ್ಳಿ | 24 | | ಬಲಭಾಗ |
| 28 | ಸುಜಾತ w/o ಮಲ್ಲಪ್ಪ | ಕರೀಸಂದ್ರ | 24 | 11 | ಬಲಭಾಗ |

| | | |
|---|---|---|
| 1. | ಅಂಗನವಾಡಿ ಕೇಂದ್ರ | 01 |
| 2. | ಖಾಸಗಿ ದೇವಸ್ಥಾನ | 03 |
| 3. | ಖಾಸಗಿ ಮಾಲೀಕರ ಸ್ವತ್ತುಗಳು | 24 |
| | **ಒಟ್ಟು** | **28** |

ಬನಶಂಕರಿ 2ನೇ ಹಂತದ ಕದಿರೇನಹಳ್ಳಿ ಜಂಕ್ಷನ್ ಬಳಿ ಕೆಳ ಸೇತುವೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕಾಗಿ ಒಳಪಡುವ ಕರೀಸಂದ್ರ (ಭವಾನಿನಗರ ಸ್ಲಂ), ಕದಿರೇನಹಳ್ಳಿ ಮತ್ತು ಜರಗನಹಳ್ಳಿ (ಪದ್ಮನಾಭನಗರ ಮತ್ತು ಬನಶಂಕರಿ ವಾರ್ಡ್‌ಗಳ) ಗ್ರಾಮಗಳಲ್ಲಿನ ಸ್ವತ್ತುಗಳನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಟಿ.ಡಿ.ಆರ್ ಯೋಜನೆಯಡಿ ಹಕ್ಕು ಬಿಡುಗಡೆ ಪತ್ರವನ್ನು ಪಾಲಿಕೆಗೆ ನೊಂದಾವಣೆ ಮಾಡುವ ಸ್ವತ್ತುಗಳ ಆಸ್ತಿ ತೆರಿಗೆಯ ಹಿಂದಿನ ವರ್ಷಗಳ ಬಾಕಿ ಪಾವತಿಸಲು ವಿನಾಯಿತಿ ನೀಡುವ ಬಗ್ಗೆ ಹಾಗೂ ವಶಪಡಿಸಿಕೊಳ್ಳಲಾಗುವ ಸ್ವತ್ತುಗಳ ಭಾಗಶ:/ಪೂರಾ ವಿಸ್ತೀರ್ಣದ ಮೇಲಿನ ಆಸ್ತಿ ತೆರಿಗೆಯನ್ನು ಪಾಲಿಕೆಗೆ ಹಕ್ಕು ಬಿಡುಗಡೆ ಪತ್ರದ ನೊಂದಣಿಯಾದ ದಿನಾಂಕದಿಂದ ಮನ್ನಾ (Abate) ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:15-11-2010 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 05 (231)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರಿ ಅಧಿಸೂಚನೆ ಸಂಖ್ಯೆ:ಇಇ.ಎಂ.ಆರ್.ಇ.ಪಿ.ಆರ್/51/09-10 ದಿನಾಂಕ:29-07-2009 ರ ಅನ್ವಯ ಕೊತ್ತನೂರು ರಸ್ತೆಯನ್ನು ಕೊತ್ತನೂರುನಿಂದ ಅವಲಹಳ್ಳಿರವರೆಗೆ ವಯಾ ಬೈರತಿ, ಬಿಳಿಶಿವಾಲಯ, ಆದೂರು ರಾಂಪುರ, ಬೀದರಹಳ್ಳಿ, ಹೀರಂಡಹಳ್ಳಿ ರವರೆಗೆ ಹೋಗುವ ರಸ್ತೆಯ ಅಗಲೀಕರಣ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಮೇಲ್ಕಂಡ ಗ್ರಾಮಗಳ ಪೈಕಿ ಕೊತ್ತನೂರು, ಬೈರತಿ, ಕ್ಯಾಲಸನಹಳ್ಳಿ, ಬಿಳಿಶಿವಾಲಯ ಗ್ರಾಮಗಳು ಪಾಲಿಕೆಯ ವ್ಯಾಪ್ತಿಯಲ್ಲಿ ಬರುತ್ತವೆ. ಉಳಿದ ಗ್ರಾಮಗಳಾದ ರಾಂಪುರ, ಆದೂರು, ಬೀದರಹಳ್ಳಿ, ಹೀರಂಡಹಳ್ಳಿ, ಅವಲಹಳ್ಳಿ ಇವು ಪಾಲಿಕೆಯ ವ್ಯಾಪ್ತಿಯಿಂದ ಹೊರಗೆ ಬರುತ್ತವೆ. ಸದರಿ ರಸ್ತೆಯು ಮೇಲ್ಕಂಡ ಗ್ರಾಮಗಳ ಮೂಲಕ ಹಾದು ಹೋಗಿ ಅವಲಹಳ್ಳಿಯ ಬಳಿಯ ರಾಷ್ಟ್ರೀಯ ಹೆದ್ದಾರಿ-4 ನ್ನು ಸೇರುತ್ತದೆ.

ಅಧಿಸೂಚನೆ ಸಂಖ್ಯೆ:ಇಇ (ಎರ್.ಪೂರ್ವ) ಪಿ.ಆರ್.81/09-10, ದಿನಾಂಕ:05-10-2009 ರ ಅನ್ವಯ ಬೆಳತ್ತೂರು ರಸ್ತೆಯನ್ನು (ಅ) ಮೇಡಹಳ್ಳಿ ರಾಷ್ಟ್ರೀಯ ಹೆದ್ದಾರಿ-4 ಇಂದ ಕುರುಡು ಸೊಣ್ಣೇನಹಳ್ಳಿ, ಸಾಯಿಸೇರನಿಟಿ, ಲೇಔಟ್, (ಆ) ಕುರುಡು ಸೊಣ್ಣೇನಹಳ್ಳಿ, ಬೆಳತ್ತೂರು ರವರೆಗೂ ಹೋಗುವ ರಸ್ತೆಗೆ ಅಧಿಸೂಚನೆಯನ್ನು ಕೂಡ ಹೊರಡಿಸಲಾಗಿದೆ. ಮೇಲ್ಕಂಡ ಗ್ರಾಮಗಳ ಪೈಕಿ ಮೇಡಹಳ್ಳಿ ರಾಷ್ಟ್ರೀಯ ಹೆದ್ದಾರಿ-4, ಶೀಗೆಹಳ್ಳಿ ಗ್ರಾಮಗಳು ಪಾಲಿಕೆಯ ವ್ಯಾಪ್ತಿಯಲ್ಲಿ ಬರುತ್ತವೆ. ಉಳಿದ ಗ್ರಾಮಗಳಾದ ಕುರುಡು ಸೊಣ್ಣೇನಹಳ್ಳಿ, ದೊಮ್ಮಸಂದ್ರ ಹಾಗೂ ಕುಂಬೇನಾಗ್ರಹಾರ ಗ್ರಾಮದ ಸರ್ವೇ ನಂಬರುಗಳು ಸೇರುತ್ತಿದ್ದು, ಇವು ಪಾಲಿಕೆಯ ವ್ಯಾಪ್ತಿಯಿಂದ ಹೊರಗೆ ಬರುತ್ತವೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಜಮೀನು/ನಿವೇಶನಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ರಸ್ತೆ, ಚರಂಡಿ, ಸೇತುವೆ ನಿರ್ಮಾಣ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಪಾಲಿಕೆಯ ವತಿಯಿಂದಲೇ ಭೂಸ್ವಾಧೀನಪಡಿಸಿಕೊಳ್ಳಲು 1976 ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ಕಲಂ 175 ಹಾಗೂ 1961 ರ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆ, ಸೆಕ್ಷನ್-14 (ಬಿ), ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, 1976 ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ 177 ರ ಪ್ರಕಾರ ಹೀಗೆ ಸಾರ್ವಜನಿಕ ಉದ್ದೇಶಕ್ಕಾಗಿ ಜಮೀನು/ನಿವೇಶನಗಳನ್ನು ಭೂಸ್ವಾಧೀನಪಡಿಸಿಕೊಳ್ಳುವಾಗ 1894 ರ ಭೂಸ್ವಾಧೀನ ಕಾಯ್ದೆ ಅನ್ವಯ ಭೂಮಾಲೀಕರಿಗೆ ಪರಿಹಾರ ಪಾವತಿಸಿ, ಸದರಿ ಜಮೀನುಗಳನ್ನು ಪಾಲಿಕೆಯು ಭೂಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ ಹಾಗೂ 1961 ರ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆಯ, ಸೆಕ್ಷನ್ 14 (ಬಿ) ಪ್ರಕಾರ ನಗರ ವ್ಯಾಪ್ತಿಯ ಯಾವುದೇ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಾಗ ಇಂತಹ ಜಮೀನುಗಳಿಗೆ /ನಿವೇಶನಗಳಿಗೆ ಟಿ.ಡಿ.ಆರ್ ಹಕ್ಕುಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಸ್ತೆ ಅಗಲೀಕರಣಕ್ಕೆ ಒಳಪಡುವ ಜಮೀನುಗಳ ಮಾಲೀಕರು/ಗುತ್ತಿಗೆದಾರರು ಮಾನ್ಯ ಆಯುಕ್ತರವರಿಗೆ ಟಿ.ಡಿ.ಆರ್ ಮನವಿಗಳನ್ನು ಸಲ್ಲಿಸಿ, ಡಿ.ಆರ್.ಸಿ.ಗಳನ್ನು ಪಡೆಯಬಹುದೆಂದು ಸದರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಅಧಿಸೂಚನೆಯನ್ನು ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರು ಹೊರಡಿಸಿರುವುದರಿಂದ ಬಿ.ಬಿ.ಎಂ.ಪಿ ವ್ಯಾಪ್ತಿಗಿಂತ ಹೊರಗೆ ಬರುವ ಗ್ರಾಮಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಸ್ತೆ ಭಾಗದಲ್ಲಿ ಜಮೀನು ಕಳೆದುಕೊಂಡವರಿಗೆ ಟಿ.ಡಿ.ಆರ್ ಮನವಿಯನ್ನು ಪಡೆದು ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರಗಳನ್ನು ನೀಡಲು (ಯಲಹಂಕ ವಲಯದಲ್ಲಿ ಅನುಮತಿಸಲಾದಂತೆ ಮಹದೇವಪುರ

..............................2

ವಲಯಕ್ಕೂ ಅನುಮತಿ ನೀಡಲು) ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24–02–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 07 (233) /2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ.154, ಎನ್.ಆರ್.ಕಾಲೋನಿಯಲ್ಲಿರುವ ಔಷಧಾಲಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಿ.ಟಿ.ಬೆಡ್ ಪ್ರದೇಶದಲ್ಲಿರುವ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸುವ ಕುರಿತು ಮಾನ್ಯ ಆಡಳಿತ ಪಕ್ಷದ ನಾಯಕರಾದ ಶ್ರೀ.ಬಿ.ಎಸ್.ಸತ್ಯನಾರಾಯಣ (ಕಟ್ಟೆ ಸತ್ಯ) ರವರು ಲಿಖಿತ ಪತ್ರದಲ್ಲಿ ತಿಳಿಸಿರುವಂತೆ, ಈ ಸ್ಥಳದಲ್ಲಿ ಬೆಂಗಳೂರು–ಒನ್ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು ಹಾಗೂ ಸ್ಥಳಾಂತರಿಸುವ ಬಗ್ಗೆ ಪತ್ರವನ್ನು ಸಲ್ಲಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ. ಸದರಿ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಮೇಲ್ಕಂಡ ಸ್ಥಳವನ್ನು ಸ್ಥಳಾಂತರಿಸುವ ಬಗ್ಗೆ ಮಾನ್ಯ ಅಧ್ಯಕ್ಷರು, ಸಾರ್ವಜನಿಕ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಡಿಸಿರುವ ಆಯುಕ್ತರವರ ದಿನಾಂಕ:10–01–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08–02–2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08–02–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08–02–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 08 (234)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.158, ಸ್ವತ್ತಿನ ಸಂಖ್ಯೆ.1/2, 1ನೇ ಮುಖ್ಯ ರಸ್ತೆ, ದೀಪಾಂಜಲಿನಗರದಲ್ಲಿನ ಪಾಲಿಕೆಯ ಕಟ್ಟಡವನ್ನು ಗ್ರಂಥಾಲಯಕ್ಕಾಗಿ 1982 ರಿಂದ ಗುತ್ತಿಗೆಗೆ ನೀಡಿರುವುದಾಗಿ ತಿಳಿದು ಬಂದಿದ್ದು, ಅವಧಿ ಮುಕ್ತಾಯವಾಗಿರುತ್ತದೆ. ಉಪ ನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ (ಪಶ್ಚಿಮ) ರವರು ಈ ಪಾಲಿಕೆ ಕಟ್ಟಡದಲ್ಲಿ 1982 ರಿಂದ ಸಾರ್ವಜನಿಕ ಗ್ರಂಥಾಲಯ ನಡೆಸುತ್ತಿದ್ದು, ಈ ಸುತ್ತಮುತ್ತ ಪ್ರದೇಶದ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸುತ್ತಿದ್ದು, ಗುತ್ತಿಗೆ ಅವಧಿ ಮುಗಿದಿರುವುದರಿಂದ, ಸದರಿ ಬಡಾವಣೆಯಲ್ಲಿ ಯಾವುದೇ ಸರ್ಕಾರಿ ಕಟ್ಟಡ ಹಾಗೂ ಖಾಸಗಿ ಕಟ್ಟಡವಾಗಲೀ ಬಾಡಿಗೆಗೆ ದೊರಕದ ಕಾರಣ, ಮುಂದಿನ 20 ವರ್ಷಗಳ ಅವಧಿಗೆ ನವೀಕರಿಸಬೇಕೆಂದು ಕೋರಿರುತ್ತಾರೆ.

ಸಂಬಂಧಿಸಿದ ವಲಯಾಧಿಕಾರಿಗಳು ವರದಿಯಲ್ಲಿ ಈ ಪಾಲಿಕೆ ಕಟ್ಟಡದ ಅಳತೆ 658 ಚ.ಅಡಿ ಇದ್ದು, ಈ ಹಿಂದೆ ಗುತ್ತಿಗೆ ಹಣ ರೂ.30/- ರಂತೆ ನಿಗಧಿಯಾಗಿದ್ದು, ಇದು ಕರ್ನಾಟಕ ಸರ್ಕಾರದ ಸಂಸ್ಥೆಯಾಗಿರುವುದರಿಂದ, ಈ ಗ್ರಂಥಾಲಯವು ಸಾರ್ವಜನಿಕರಿಗೆ ಬಹಳ ಉಪಯೋಗವಾಗುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ 20 ವರ್ಷಗಳ ಅವಧಿಗೆ ನವೀಕರಿಸಬಹುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಇದರಂತೆ, ಈ ಸಾರ್ವಜನಿಕ ಗ್ರಂಥಾಲಯವು ಸಾರ್ವಜನಿಕರ ಜ್ಞಾನಾರ್ಜನೆಗೆ ಉಪಯೋಗವಾಗುವುದರಿಂದ, ಬಾಕಿ ಗುತ್ತಿಗೆ ಹಣ ಪಾವತಿಸಿಕೊಂಡು ಕಾಮಗಾರಿ ಇಲಾಖೆಯವರು ನಿಗಧಿಪಡಿಸುವ ಗುತ್ತಿಗೆ ಮೊತ್ತದಂತೆ, ಮುಂದಿನ 20 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆಯೆಂದು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ-1976 ರ ಕಲಂ 176 ರ (6) ಹಾಗೂ (ಬಿ) II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇಕಡ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ ಎಂದು ಸೂಚಿಸಲಾಗಿರುತ್ತದೆ ಹಾಗೂ ಸದರಿ ಗ್ರಂಥಾಲಯವು ಕಟ್ಟಡವಾಗಿರುವುದರಿಂದ, ಕಾಮಗಾರಿ ಇಲಾಖೆಯವರು ಮಾರ್ಗಸೂಚಿಯನ್ವಯ ಗುತ್ತಿಗೆ ಹಣವನ್ನು ನಿಗಧಿಪಡಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಗ್ರಂಥಾಲಯಕ್ಕಾಗಿ ನೀಡಿರುವ ಪಾಲಿಕೆಯ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-12-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:11-12-2010 ರ ಟಿಪ್ಪಣಿಯನ್ನು ಮಾರ್ಪಡಿಸಿ ಪಾಲಿಕೆಯಲ್ಲಿ ನಿರ್ಣಯವಾಗುವ ದಿನಾಂಕದಿಂದ 5 ವರ್ಷಗಳಿಗೆ ಗುತ್ತಿಗೆ ಮುಂದುವರೆಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:11-12-2010 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

..............................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್. ಕೆ. ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 10 (236)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:177 ಕೆ.ಎಸ್.ಆರ್.ಟಿ.ಸಿ. ಲೇಔಟ್, 5ನೇ ಅಡ್ಡ ರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು ಇಲ್ಲಿ ಇರುವ ಖಾಲಿ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಲೇಔಟ್ ನಕ್ಷೆಯಲ್ಲಿ ರಸ್ತೆ ಎಂಬುದಾಗಿ ನಮೂದಿಸಿರುತ್ತಾರೆ. ಆದರೆ, ಈ ರಸ್ತೆಯ ಒಂದು ಬದಿಯಲ್ಲಿ ಉದ್ಯಾನವನವಿರುತ್ತದೆ. ಪ್ರಸ್ತಾಪಿತ ಜಾಗವು ಕೆ.ಎಸ್.ಆರ್.ಟಿ.ಸಿ ನೌಕರರ ಸಂಘದವರು ಮಾರೇನಹಳ್ಳಿ ಹಾಗೂ ನಯ್ಯಪ್ಪಳ ಪಾಳ್ಯ ಸರ್ವೆ ನಂ.ಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಂದ ವಸತಿ ಬಡಾವಣೆ ನಿರ್ಮಾಣ ಮಾಡಲು ಅನುಮೋದನೆ ಪಡೆದು ಬಡಾವಣೆಯನ್ನು ನಿರ್ಮಿಸಿರುತ್ತಾರೆ. ಆದರೆ, ನಿವೇಶನ ಸಂಖ್ಯೆ:29 ರಿಂದ 49/ಎ ವರೆಗಿನ ದಕ್ಷಿಣ ಭಾಗದಲ್ಲಿ ಹೆಚ್.ಟಿ.ಲೈನ್ ಹಾದು ಹೋಗುತ್ತಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈ ಜಾಗವನ್ನು ಸಿ.ಎ. ನಿವೇಶನವೆಂದು ಗುರುತಿಸಿ ತಂತಿ ಬೇಲಿ ಅಳವಡಿಸಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನೀಡಿರುವ ನಕ್ಷೆಯಂತೆ 6ನೇ 'ಎ' ಮುಖ್ಯ ರಸ್ತೆಯನ್ನು ನಿರ್ಮಿಸಿದಲ್ಲಿ ನಿವೇಶನದ ಸಂಖ್ಯೆ:29 ರ ಮಾಲೀಕರಿಗೆ ಮಾತ್ರ ಉಪಯೋಗಕ್ಕೆ ಬರಲಿದ್ದು ಸದರಿ ಮಾಲೀಕರು ಈಗಾಗಲೇ 5ನೇ ಅಡ್ಡ ರಸ್ತೆಯನ್ನು ಉಪಯೋಗಿಸುತ್ತಿರುತ್ತಾರೆ. ಈ ಖಾಲಿ ಜಾಗದಲ್ಲಿರುವ ರಸ್ತೆಯು ಇತರರಿಗೆ ಉಪಯೋಗಕ್ಕೆ ಬರುವುದಿಲ್ಲ. ಈ ರಸ್ತೆಯನ್ನು ಲೇಔಟ್ ನಕ್ಷೆಯಲ್ಲಿ ತೆಗೆದುಹಾಕಿ ಖಾಲಿಯಿರುವ ಜಾಗ ಅಂದರೆ, 9.00 x 28.00 ಮೀ ಸ್ಥಳವಾದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಪಾಲಿಕೆ ಕಛೇರಿಗಳನ್ನು ಕಟ್ಟುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಹಾಲಿ ಮಂಜೂರಾಗಿರುವ ನಕ್ಷೆಯನ್ನು ಬದಲಾಯಿಸಿ ಪಾಲಿಕೆ ಕಟ್ಟಡ ಕಟ್ಟಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್. ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 11 (237)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಾಲ ಮನೋವಿಕಾಸ ಕೇಂದ್ರ ಗಾಂಧಿ ಸಾಹಿತಿ ಕೇಂದ್ರರವರಿಗೆ ಮಲ್ಲೇಶ್ವರಂ ಪಶ್ಚಿಮ ಉದ್ಯಾನವನದ ರಸ್ತೆ ಮಾರುಕಟ್ಟೆ ಹಿಂಭಾಗದಲ್ಲಿರುವ ನಗರ ಪಾಲಿಕೆಯ 72x75 ಅಡಿಗಳ ಜಾಗವನ್ನು ಮನೋವಿಕಲತೆಯುಳ್ಳ ಮಕ್ಕಳಿಗಾಗಿ ಶಾಲೆ ನಡೆಸುವ ಸಲುವಾಗಿ ದಿನಾಂಕ:13-02-1999 ರಿಂದ 10 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಹಣ ರೂ.2500/- ಗಳಂತೆ ನಿಗಧಿಪಡಿಸಿ, ವರ್ಷಕ್ಕೊಮ್ಮೆ ಶೇಕಡ 10 ರಷ್ಟು ಗುತ್ತಿಗೆ ಹಣವನ್ನು ಹೆಚ್ಚಿಸುವ ಷರತ್ತಿಗೊಳಪಡಿಸಿ, ಸರ್ಕಾರದ ಆದೇಶದ ಮೇರೆಗೆ ಗುತ್ತಿಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ:12-02-2009 ರಂದು ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯು ದಿನಾಂಕ:21-07-2010 ರಂದು ಮನವಿ ಸಲ್ಲಿಸಿ ಸದರಿ ಜಾಗದ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ. ಈ ಬಗ್ಗೆ ಸ್ಥಳ ತನಿಖೆ ಮಾಡಲಾಗಿದ್ದು, ಸದರಿ ಸಂಸ್ಥೆಯವರು ಬುದ್ಧಿಮಾಂದ್ಯ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ. ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ಬೆಲೆಯು ದಿನಾಂಕ:17-07-2007 ರ ಸರ್ಕಾರದ ಮಾರ್ಗಸೂಚಿಯಂತೆ ಚದರ ಅಡಿ ಒಂದಕ್ಕೆ ರೂ.4200/- ಗಳಾಗಿದ್ದು, ಅರ್ಜಿದಾರರಿಗೆ ನೀಡಿರುವ ವಿಸ್ತೀರ್ಣವು 72 x 75=5400 ಚದರ ಅಡಿಗಳಾಗಿರುತ್ತದೆ. ಇದರಂತೆ, ಲೆಕ್ಕಾಚಾರ ಮಾಡಲಾಗಿದ್ದು, ಒಟ್ಟು ರೂ.1,62,00,000/- ಗಳಾಗಿರುತ್ತದೆ. ಶೇಕಡ 10 ರಷ್ಟು ಗುತ್ತಿಗೆ ಎಂಬುದಾಗಿ ಪರಿಗಣಿಸಲಾಗಿ ಇದರಂತೆ, ವಾರ್ಷಿಕ ರೂ.16,20,000/- ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.1,35,000/- ಗಳಾಗಿರುತ್ತದೆ. ಆದರೆ, ಈ ಮೊತ್ತವನ್ನು ಸದರಿ ಸಂಸ್ಥೆಯು ಭರಿಸಲು ಅಶಕ್ತವಾಗಿರುತ್ತದೆ. ಬುದ್ಧಿಮಾಂದ್ಯ ಮಕ್ಕಳಿಗಾಗಿ ಈ ಸಂಸ್ಥೆಯು ಸೇವೆ ಸಲ್ಲಿಸುತ್ತಿರುವುದರಿಂದ ಮತ್ತು ಸದರಿ ಸಂಸ್ಥೆಗೆ ತಮ್ಮದೇ ಆದ ಯಾವುದೇ ವರಮಾನ ಇರುವುದಿಲ್ಲ. ಕಂದಾಯ ಅಧಿಕಾರಿ (ಮಲ್ಲೇಶ್ವರಂ) ರವರು ತಿಳಿಸಿರುವಂತೆ ಈಗಾಗಲೇ ಸದರಿ ಸಂಸ್ಥೆಯು 2009-10ನೇ ಸಾಲಿನ ವರ್ಷಾಂತ್ಯ ಗುತ್ತಿಗೆ ಮೊತ್ತ ರೂ.3025/- ಗಳನ್ನು ಪಾವತಿಸಿರುತ್ತದೆ. ಈ ಸಂಸ್ಥೆಯ ಉದ್ದೇಶ ಮತ್ತು ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ ಮಾನವೀಯತೆ ದೃಷ್ಟಿಯಿಂದ ವಾರ್ಷಿಕ ಗುತ್ತಿಗೆ ರೂ.3500/- ಗಳಿಗೆ ನಿಗಧಿಗೊಳಿಸಿ ದಿನಾಂಕ:13-02-2009 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ಕಲಂ 176 ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ.ಉ.ಆ(ಕಂ)/ಪಿಆರ್/115/01-02, ದಿನಾಂಕ:01-03-2002 ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯ ಕನಿಷ್ಠ ಶೇಕಡ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ.

..............................2

ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇಕಡ 100 ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ದರ್ಮಾದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗಳಿಗೆ ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ವಿಷಯದ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-11-2010 ರ ಟಿಪ್ಪಣಿ ಹಾಗೂ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-01-2011 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:12-11-2010 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಒಪ್ಪುತ್ತಾ ಹಾಗೂ 5 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಹಣ ರೂ.3,500/- ಗಳಂತೆ ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

**"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುವುದು".**

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ, ಗುತ್ತಿಗೆ ಅವಧಿಯನ್ನು 30 ವರ್ಷಗಳಿಗೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವುದು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಒಪ್ಪುತ್ತಾ, 30 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 14 (240)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ - 176 ರ 16ನೇ ಮುಖ್ಯರಸ್ತೆ, ಬಿ.ಟಿ.ಎಂ. 2ನೇ ಹಂತದಲ್ಲಿನ ಬಿ.ಬಿ.ಎಂ.ಪಿ ನಿರ್ಮಿತ ಕಟ್ಟಡದ ನೆಲ ಅಂತಸ್ತಿನ 902 ಚ.ಅಡಿಗಳ ಕಟ್ಟಡವನ್ನು ಅಂಚೆ ಕಛೇರಿಗೆ ಗುತ್ತಿಗೆ ನೀಡುವಂತೆ ಕೋರಿ, ವರಿಷ್ಠ ಅಧೀಕ್ಷಕರು, ಬೆಂಗಳೂರು ದಕ್ಷಿಣ ಅಂಚೆ ವಿಭಾಗ, ರವರು ಕೋರಿರುತ್ತಾರೆ.

ವಲಯಾಧಿಕಾರಿಗಳು ಸದರಿ ಸ್ಥಳದಲ್ಲಿ ಪಾಲಿಕೆಯಿಂದ ನಿರ್ಮಿಸಲಾದ ಕಟ್ಟಡದಲ್ಲಿ ನೆಲ ಅಂತಸ್ತು ಖಾಲಿ ಇದ್ದು, ಈ ಕಟ್ಟಡದ ಅಳತೆ 902 ಚ.ಅಡಿಗಳಿದ್ದು, ಪ್ರಸ್ತುತ ಮೈಕೋ ಬಡಾವಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಛೇರಿಗಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಗುತ್ತಿಗೆ ಆಧಾರದ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ಸಂಸ್ಥೆಯು ಸರ್ಕಾರಿ ಸಂಸ್ಥೆಯಾಗಿರುವುದರಿಂದ, ಅಂಚೆ ಕಛೇರಿಗೆ ಪಾಲಿಕೆ ಕಟ್ಟಡವನ್ನು ಗುತ್ತಿಗೆ ಆಧಾರ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಗುತ್ತಿಗೆ ಹಣವನ್ನು ಕಾಮಗಾರಿ ಇಲಾಖೆಯವರು ಸರ್ಕಾರಿ ಆದೇಶದಂತೆ, ನಿವೇಶನದ ಅಳತೆ, ಕಟ್ಟಡದ ಅಳತೆ, ನಿರ್ಮಾಣದ ವೆಚ್ಚಗಳನ್ನೊಳಗೊಂಡಂತೆ ಲೆಕ್ಕಚಾರ ಮಾಡಿ, ಮಾಸಿಕ ಗುತ್ತಿಗೆ ಹಣ ರೂ.11,215/- ಗಳನ್ನು ನಿಗಧಿಪಡಿಸಿರುತ್ತಾರೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆ ದರ ಪರಿಷ್ಕರಣೆಗೊಂಡಲ್ಲಿ, ಆ ಆಧಾರ ಗುತ್ತಿಗೆ ಹಣ ವಸೂಲು ಮಾಡುವ ಷರತ್ತಿಗೊಳಪಡಿಸಿದೆ.

ಈ ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಸ್ಥಾಯಿ ಸಮಿತಿಗಳ ಅನುಮೋದನೆ ಮುಂದಿರಿಸಲು ಸೂಚಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ದಿನಾಂಕ:03-09-2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕರ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬಿ.ಟಿ.ಎಂ. 2ನೇ ಹಂತದಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಗವನ್ನು ಅಂಚೆ ಕಛೇರಿಗಾಗಿ ಮುಂದಿನ 5 ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.11,215/- ರಂತೆ ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-01-2011 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ: 01-01-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-01-2011 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:01-01-2011 ರ ಟಿಪ್ಪಣಿಯನ್ನು ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಸಿತಿಯ ದಿನಾಂಕ:24-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

............................2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24–01–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 15 (241)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 178 ರ ಸಿ-2, 9ನೇ ಅಡ್ಡರಸ್ತೆ, ಜೆ.ಪಿ.ನಗರ, 2ನೇ ಹಂತದಲ್ಲಿನ ಪಾಲಿಕೆ ಸ್ವತ್ತನ್ನು ಶ್ರೀ. ತಿರುಮಲಗಿರಿ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರವರಿಗೆ 1996 ರಿಂದ 2001 ರವರೆಗೆ ವಾರ್ಷಿಕ ರೂ.24,000/- ಗಳನ್ನು ನಿಗಧಿಪಡಿಸಿ ದೇವಸ್ಥಾನ ನಿರ್ಮಿಸಲು 2900 ಚ.ಮಿ. ಅಳತೆ ನಿವೇಶನವನ್ನು ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ದೇವಸ್ಥಾನದ ಧರ್ಮದರ್ಶಿಗಳು, ಪ್ರಸ್ತಾಪಿತ ಸ್ಥಳದಲ್ಲಿ ದೇವಸ್ಥಾನ ನಿರ್ಮಾಣಗೊಂಡಿದ್ದು, ದೇವಸ್ಥಾನದ ಉಪಯೋಗವು ಸಾರ್ವಜನಿಕರಿಗೆ ಅತ್ಯಾವಶ್ಯಕವಾಗಿರುವುದರಿಂದ, ಮುಂದಿನ 30 ವರ್ಷಗಳಿಗೆ ಗುತ್ತಿಗೆ ಅವಧಿ ನವೀಕರಿಸುವಂತೆ ಕೋರಿರುತ್ತಾರೆ.

ವಲಯಾಧಿಕಾರಿಗಳು ವರದಿ ಸಲ್ಲಿಸಿ, ವಿದ್ಯುತ್ ಹೈಟೆನ್ಸನ್ ಲೈನಿನ ಕೆಳಗೆ ಇರುವ ಪ್ರದೇಶದ ಈ ಜಾಗವನ್ನು ಗುತ್ತಿಗೆ ನೀಡಿದ್ದು, ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆಯಾಗಿರುವುದಿಲ್ಲ ಹಾಗೂ ಈ ಸ್ಥಳದಲ್ಲಿ ದೇವಾಲಯವಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ದೇವಸ್ಥಾನದ ಉಪಯೋಗಕ್ಕಾಗಿ ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಹಿನ್ನಲೆಯಲ್ಲಿ 2900 ಚ.ಮೀ. ಪ್ರದೇಶವನ್ನು ದೇವಸ್ಥಾನದ ಉಪಯೋಗಕ್ಕಾಗಿ ವಾರ್ಷಿಕ ರೂ.24,000/- ಗಳಂತೆ ನಿಗಧಿಪಡಿಸಿ, ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಲು ಕೋರಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ಕಲಂ-176 ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅಧಿಕಾರವಿದ್ದು, ಹೆಚ್ಚಿನ ಅವಧಿಗೆ ಸರ್ಕಾರದ ಅನುಮೋದನೆಗೆ ಮಂಡಿಸಬೇಕಾಗಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ.(ಕಂ)/ಪಿ.ಆರ್/115/01-02, ದಿನಾಂಕ:01-03-2002 ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆಗೆ ನೀಡಬೇಕಾದಲ್ಲಿ, ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯ ಕನಿಷ್ಠ ಶೇಕಡ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007 ರ ಸರ್ಕಾರದ ಮಾರ್ಗಸೂಚಿಯಂತೆ ಮಾರುಕಟ್ಟೆ ಬೆಲೆ ಚ.ಅಡಿಗೆ ರೂ.2,700/- ಗಳಿದ್ದು, 31.215 x 2700=8,42,80,500/- ಗಳಾಗಲಿದ್ದು, ಶೇಕಡ 10 ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ. 84,28,050/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆ ಅವಧಿಯನ್ನು ನವೀಕರಿಸಲು ಹಾಗೂ ಸರ್ಕಾರದಿಂದ ಅನುಮೋದನೆ ಪಡೆಯಲು ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಕೋರಿ ಮಂಡಿಸಿರುವ ಆಯುಕ್ತರವರ ದಿನಾಂಕ:09-12-2010 ರ ಟಿಪ್ಪಣಿ ಹಾಗೂ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವುದೆಂದು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:09-12-2011 ರ ಟಿಪ್ಪಣಿಯನ್ನು ಮಾರ್ಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-01-2011 ರ ನಿರ್ಣಯವನ್ನು ಒಪ್ಪುತ್ತಾ, ವಾರ್ಷಿಕ ರೂ.24,000/- ಗಳ ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯ.

............................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ವಾರ್ಷಿಕ ಗುತ್ತಿಗೆ ಹಣ ರೂ.24,000/- ಗಳ ಬದಲಾಗಿ ರೂ.10,000/- (ರೂ. ಹತ್ತು ಸಾವಿರಗಳು) ಗಳನ್ನು ವಿಧಿಸುವುದೆಂಬ ಮಾರ್ಪಾಡಿನೊಂದಿಗೆ ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ, ಪ್ರಸ್ತಾಪಿತ ಸ್ವತ್ತಿನ ವಾರ್ಷಿಕ ಗುತ್ತಿಗೆ ಹಣವನ್ನು ರೂ.24,000/- ಗಳ ಬದಲಾಗಿ ರೂ.2,500/- (ರೂ. ಎರಡು ಸಾವಿರದ ಐದು ನೂರು) ಗಳನ್ನು ವಿಧಿಸುವುದು ಹಾಗೂ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳ ಅವಧಿಗೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಮಾರ್ಪಾಡಿನೊಂದಿಗೆ ಒಪ್ಪುವುದು".

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-01-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ವಾರ್ಷಿಕ ಗುತ್ತಿಗೆ ಹಣ ರೂ.24,000/- ಗಳ ಬದಲಾಗಿ ರೂ.2,500/- (ರೂ. ಎರಡು ಸಾವಿರದ ಐದು ನೂರು) ಗಳನ್ನು ವಿಧಿಸುವುದು ಹಾಗೂ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳ ಅವಧಿಗೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಮಾರ್ಪಾಡಿನೊಂದಿಗೆ ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 16 (242)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವ್ಯವಸ್ಥಾಪಕ ನಿರ್ದೇಶಕರು VITC ಬೆಂಗಳೂರು ಇವರು, ಬೆಂಗಳೂರು ವೈಟ್ ಫೀಲ್ಡ್‌ನ ವಿಶೇಷ ಆರ್ಥಿಕ ವಲಯದ EPIP Zone 2ನೇ ಹಂತದಲ್ಲಿ ವಿವಿಧ ರಸ್ತೆಗಳ ಅಭಿವೃದ್ಧಿ ಹಾಗೂ ಅಂಡರ್ ಪಾಸ್ ನಿರ್ಮಾಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಮತ್ತು ASIDE ಆರ್ಥಿಕ ನೆರವಿನೊಂದಿಗೆ ಕೈಗೊಳ್ಳಲು ರೂ.46.00 ಕೋಟಿ ಯೋಜನಾ ವೆಚ್ಚದ ಕಾಮಗಾರಿಗೆ ಅನುಮತಿ ದೊರೆತಿರುತ್ತದೆ ಎಂದು ಅದರಲ್ಲಿ ರೂ.20.00 ಕೋಟಿಗಳನ್ನು ASIDE ಯೋಜನೆಯಡಿಯಲ್ಲಿ ವಿಶೇಷ ಅನುದಾನವನ್ನಾಗಿ ಮಂಜೂರಾತಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ ಹಾಗೂ Funding Pattern ಅನ್ನು ಈ ಕೆಳಕಂಡಂತೆ ಮಾಡಲಾಗಿರುತ್ತದೆಯೆಂದು ತಿಳಿಸಿರುತ್ತಾರೆ.

| | | |
|---|---|---|
| ASIDE Scheme | : | Rs.20.00 Crores |
| BBMP Share | : | Rs.26.00 Crores |
| Total | | **Rs.46.00 Cross** |

ಈ ಯೋಜನೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.26.00 ಕೋಟಿಗಳ ಅನುದಾನವನ್ನು ಕಲ್ಪಿಸಬೇಕಾಗಿರುತ್ತದೆ. ಸರ್ಕಾರದ ಆದೇಶ ದಿನಾಂಕ:28-02-2010 ರಲ್ಲಿ Term of Reference ಅನ್ವಯ SLEPC ಯನ್ನು ASIDE ಯೋಜನೆಯಡಿಯಲ್ಲಿ ಹೊಸ ಯೋಜನೆಯ ಪ್ರಸ್ತಾವನೆಗೆ ಅನುಮೋದಿಸಿ ಹಾಗೂ ಹಣಕಾಸು ಮಂಜೂರಾತಿಯನ್ನು ನೀಡಬಹುದಾಗಿರುವುದರಿಂದ SLEPC ಯು ಸದರಿ ಪ್ರಸ್ತಾವನೆಯ ಕಾಮಗಾರಿಗಳಿಗೆ ಅನುಮೋದನೆ ಹಾಗೂ ರೂ.46.00 ಕೋಟಿಗಳ ಹಣಕಾಸು ಮಂಜೂರಾತಿಯನ್ನು ನೀಡಿರುತ್ತಾರೆ. ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷ ವಿತ್ತ ವಲಯದ Export Promotion Industrial Park (EPIP) ವಲಯದಲ್ಲಿ 2ನೇ ಹಂತದಲ್ಲಿ ಬರುವ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಹಾಗೂ ಅಂಡರ್ ಪಾಸ್ ನಿರ್ಮಾಣದ ವಿವರವಾದ ಯೋಜನಾ ವರದಿಯನ್ನು (DPR) 2009-10 ನೇ ಸಾಲಿನ ದರಗಳನ್ವಯ ಹಾಗೂ ಅನುಮೋದಿತ ಡಾಟಾ ದರಗಳನ್ವಯ ತಯಾರಿಸಲಾಗಿದ್ದು, ಸದರಿ ಯೋಜನೆಯ ಒಟ್ಟು ಅಂದಾಜು ಮೊತ್ತವು ರೂ.46.00 ಕೋಟಿಗಳಾಗಿರುತ್ತದೆ.

ಈ ಕಾಮಗಾರಿಗಳಿಗೆ ಘನ ಸರ್ಕಾರದಿಂದ ಅನುಮೋದನೆ ನೀಡಬೇಕಾಗಿರುತ್ತದೆ. ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರ ಟೆಂಡರ್ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕಾಲ ವಿಳಂಬವಾಗುವ ಪ್ರಯುಕ್ತ, ಸದರಿ ಯೋಜನೆಗೆ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದ ನಂತರ, ಸದರಿ ಯೋಜನೆಗೆ ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ, ಟೆಂಡರ್ ಕರೆದು ತದನಂತರ ಟೆಂಡರ್ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ಘನ ಸರ್ಕಾರದಿಂದ ಒಟ್ಟಾರೆ ಪಡೆಯುವ ಪ್ರಸ್ತಾವನೆಗೆ ಸಾರ್ವಜನಿಕ ಬೃಹತ್ ಕಾಮಗಾರಿಗಳ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:01-02-2011 ರ ಟಿಪ್ಪಣಿ ಹಾಗೂ ಕಡತವನ್ನು ಪರಿಶೀಲಿಸಲಾಯಿತು, ಸದರಿ ಯೋಜನೆಯ ಬೃಹತ್ ಯೋಜನೆಯಾಗಿದ್ದು, ಕಾಮಗಾರಿಯಲ್ಲಿ ಉತ್ತಮ

............................2

ಗುಣಮಟ್ಟವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ರೂ.46.00 ಕೋಟಿಗಳ ಒಟ್ಟು ಮೊತ್ತಕ್ಕೆ ಒಂದೇ ಪ್ಯಾಕೇಜ್ ಅಡಿಯಲ್ಲಿ ಟೆಂಡರ್ ಕರೆಯುವುದು ಸೂಕ್ತವಾಗಿದ್ದು, ಇದರಿಂದಾಗಿ ಪ್ರತಿಷ್ಠಿತ ಮತ್ತು ಹೆಸರಾಂತ ಹಾಗೂ ಅತ್ಯಾಧುನಿಕ ಯಂತ್ರಗಳು/ಉಪಕರಗಳನ್ನು ಹೊಂದಿರುವಂತಹ ನುರಿತ ಕಂಪನಿಗಳು (well equipped) ಭಾಗವಹಿಸಲು ಅವಕಾಶ ಕಲ್ಪಿಸಿ ಉತ್ತಮ ಗುಣಮಟ್ಟದ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಲು ಅನುವು ಮಾಡಿದಂತಾಗುತ್ತದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಉತ್ತಮ ಗುಣಮಟ್ಟದ ಮತ್ತು ತ್ವರಿತ ಕಾರ್ಯನಿರ್ವಹಣೆ ಸಲುವಾಗಿ ಒಟ್ಟು ರೂ.46.00 ಕೋಟಿಗಳ ಯೋಜನೆಗೆ ಒಂದೇ ಪ್ಯಾಕೇಜ್ ಅಡಿಯಲ್ಲಿ ಟೆಂಡರ್ ಕರೆಯುವುದೆಂದು ಸಮಿತಿಯು ನಿರ್ಣಯಿಸಿ ಕೌನ್ಸಿಲ್ ಸಭೆಯ ಅನುಮೋದನೆಗೆ ಮಂಡಿಸುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ
(ಎಸ್.ಕೆ.ನಟರಾಜ)
ಮಹಾಪೌರರು

# <u>ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ</u>

## <u>ವಿಷಯದ ಸಂಖ್ಯೆ: 1 (243)/2010-11</u>

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 741 ಮತ್ತು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ 301 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮೋದನೆ ನೀಡಿದ್ದು, ಸದರಿ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ:

### <u>Health Department</u>

| Sl. No. | Name of the post | No. of Direct Recruitment Vacancy | Remarks |
|---|---|---|---|
| 1 | Medical Officer of Health | 03 | ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಈ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಅವಕಾಶವಿರುವುದಿಲ್ಲ. ಕೇವಲ ಮುಂಬಡ್ತಿ ಅಥವಾ ನಿಯೋಜನೆ ಮೂಲಕ ತುಂಬಿಕೊಳ್ಳಬಹುದಾಗಿರುತ್ತದೆ. |
| 2 | Assistant Surgeon | 15 | ಈ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕೆ.ಪಿ.ಎಸ್.ಸಿ ಯಿಂದ ಪ್ರಕಟಿಸಲಾಗಿದ್ದು, ದಾಖಲಾತಿ ಪರಿಶೀಲನೆ ಕಾರ್ಯವು ಮುಗಿದಿರುತ್ತದೆ. ಪೊಲೀಸ್ ವರದಿ ಮತ್ತು ಮೆಡಿಕಲ್ ವರದಿ ಪಡೆಯಲು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯಲಾಗಿದ್ದು, ವರದಿಗಳನ್ನು ಸ್ವೀಕರಿಸಿದ ನಂತರ ನೇಮಕಾತಿ ಆದೇಶ ನೀಡಲಾಗುವುದು. |
| 3 | Staff Nurse | 30 | ಈ ಹುದ್ದೆಗಳಿಗೆ ಸಂಬಂಧಿಸಿದ ವಿದ್ಯಾರ್ಹತೆಯ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿಯು C & R ನಲ್ಲಿ ಲಭ್ಯವಿಲ್ಲದಿರುವುದರಿಂದ, C & R Rules ಗೆ ತಿದ್ದುಪಡಿ ತರಲು ಸಭೆ ಕರೆದಿದ್ದು, ತಿದ್ದುಪಡಿಗೆ ಸರ್ಕಾರದ ಅನುಮೋದನೆ ಪಡೆಯುವಂತೆ ಕೋರಿ ಈ ಕಛೇರಿಯಿಂದ ಪ್ರಸ್ತಾವನೆಯನ್ನು ಆಡಳಿತ ಶಾಖೆಗೆ ಕಳುಹಿಸಿದ್ದು, ಸರ್ಕಾರದ ಅನುಮೋದನೆ ದೊರೆತ ನಂತರ ಅಧಿಸೂಚನೆ ಹೊರಡಿಸಿ ತುಂಬಬಹುದಾಗಿರುತ್ತದೆ. |
| 5 | Pharmacist | 01 | |
| 7 | Special Gangman | 58 | |
| 8 | M.C.Gangman | 258 | |
| 9 | ALO Gangman | 268 | |
| 10 | Synopsis Gangman | 06 | |
| 11 | Disinfectant Gangman | 13 | |
| **4** | **ANM** | **63** | ಆರೋಗ್ಯ ಇಲಾಖೆಗೆ ಈ ಹುದ್ದೆಗಳು ತುಂಬಾ ಅವಶ್ಯಕವಾಗಿರುವ ಮೇರೆಗೆ ಈ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ. ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಈ ಹುದ್ದೆಗಳಿಗೆ ಸಂಬಂಧಿಸಿದಂತೆ ಯಾವುದೇ ಗೊಂದಲವಿರುವುದಿಲ್ಲ |
| **6** | **Sub Registrars** | **26** | |
| **Total** | | **741** | |

...........................2

## Education Department

| Sl. No. | Name of the post | No. of Direct Recruitment Vacancy | Remarks |
|---|---|---|---|
| 1 | High School Teachers | 122 | ಈ ಹುದ್ದೆಗಳನ್ನು online ಮುಖಾಂತರ ತುಂಬಿಕೊಳ್ಳಲು ಸೂಚಿಸಿರುವ ಮೇರೆಗೆ, ಟೆಂಡರ್ ಕರೆಯುವ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯವು ಮತ್ತೊಂದು ಕಡತದಲ್ಲಿ ಹಾಲಿ ಚಾಲ್ತಿಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಅರ್ಹ ಸಂಸ್ಥೆಯ ಮುಖಾಂತರ ಅರ್ಜಿ ಆಹ್ವಾನಿಸಿ ತುಂಬಿಕೊಳ್ಳಾಗುವುದು. |
| 2 | Primary Teachers | 90 | |
| 3 | Nursery Teachers | 89 | |
| **Total** | | **301** | |

ಮುಂದುವರೆದಂತೆ, ಆರೋಗ್ಯ ಇಲಾಖೆಯಲ್ಲಿ ಹಾಗೂ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲು ಷರಾದಲ್ಲಿ ಹೇಳಿರುವಂತೆ ತುಂಬಲು ಗೊಂದಲವಿರುವುದರಿಂದ ಅಧಿಸೂಚನೆ ಹೊರಡಿಸುವುದು ಸಾಧ್ಯವಾಗುತ್ತಿಲ್ಲ. ಆದರೆ, ಆರೋಗ್ಯ ಇಲಾಖೆಯಲ್ಲಿ ಕ್ರ.ಸಂ.-04 ಮತ್ತು 06 ರಲ್ಲಿನ ANM and Sub-Registrars ಹುದ್ದೆಗಳ ಬಗ್ಗೆ ಯಾವುದೇ ಗೊಂದಲವಿಲ್ಲದಿರುವುದರಿಂದ ಹಾಗೂ ಆರೋಗ್ಯ ಇಲಾಖೆಗೆ ಅತ್ಯಂತ ಜರೂರಾಗಿ ಸದರಿ ಹುದ್ದೆಗಳ ಅವಶ್ಯಕತೆಯಿರುವುದರಿಂದ ಅಧಿಸೂಚನೆ ಹೊರಡಿಸಿ ತುಂಬಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ANM and Sub-Registrars ಹುದ್ದೆಗಳನ್ನು ಆಯುಕ್ತರ ಕಛೇರಿಯಿಂದ ಅಧಿಸೂಚನೆ ಹೊರಡಿಸಿ ತುಂಬಲು ಅನುಮೋದನೆ ನೀಡುವಂತೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31-01-2011 ರ ಟಿಪ್ಪಣಿ ಹಾಗೂ ಆಯುಕ್ತರ ಟಿಪ್ಪಣಿ ದಿನಾಂಕ: 31-01-2011 ರಲ್ಲಿನ ಕ್ರ.ಸಂ.-04 ಮತ್ತು 06 ಅನ್ನು ಒಪ್ಪುತ್ತಾ, ಶಿಕ್ಷಣ ಇಲಾಖೆಯಲ್ಲಿನ ವಿಷಯಕ್ಕೆ ಸದರಿ ಸ್ಥಾಯಿ ಸಮಿತಿಯ ಆಯ್ಕೆ ಸ್ಥಾಯಿ ಸಮಿತಿಯು ಅಸ್ತಿತ್ವಕ್ಕೆ ಬಂದ ನಂತರ ಅಂತಿಮ ನಿರ್ಣಯದ ತೆಗೆದುಕೊಳ್ಳಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:14-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ:14-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ:14-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 2 (244)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

| Sl. No. | Name of the post | No. of Direct Recruitment Vacancy |
|---|---|---|
| 1 | High School Teachers | 122 |
| 2 | Primary Teachers | 90 |
| 3 | Nursery Teachers | 89 |
| **Total** | | **301** |

ಪಾಲಿಕೆಯಲ್ಲಿ ಇದುವರೆಗೂ ಯಾವುದೇ ಗ್ರೂಪ್-ಸಿ ಮತ್ತು ಡಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಿಕೊಳ್ಳುವ ಸಂದರ್ಭದಲ್ಲಿ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಆ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಗಳಿಸಿರುವ ಒಟ್ಟು ಅಂಕಗಳ ಸರಾಸರಿಯನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳ ಸುಮಾರು 5 ವರ್ಷಗಳ ಫಲಿತಾಂಶವನ್ನು ಗಮನಿಸಿದಾಗ ಸಾಮಾನ್ಯವಾಗಿ ಫಲಿತಾಂಶವು ಇಳಿಮುಖವಾಗಿರುವುದು ಕಂಡುಬಂದಿರುತ್ತದೆ. ಬೇರೆ ಖಾಸಗಿ ಶಾಲೆ/ಸರ್ಕಾರಿ ಶಾಲೆಗಳಿಗೆ ಹೋಲಿಸಿದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳ ಫಲಿತಾಂಶವು ತೀರಾ ನಿಕೃಷ್ಟವಾಗಿದೆ. ಸಾಮಾನ್ಯವಾಗಿ ಪಾಲಿಕೆಯ ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ತೀರಾ ಬಡವರಾಗಿದ್ದು, ಪರಿಣಿತಿ ಹೊಂದಿದ ಶಿಕ್ಷಕರ ಕೊರತೆಯಿಂದ ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಇವರ ಭವಿಷ್ಯ ರೂಪಿಸುವಲ್ಲಿ ಪಾಲಿಕೆಯು ವಿಫಲವಾಗುತ್ತಿದೆ ಹಾಗೂ ಭವಿಷ್ಯದ ಪ್ರಜೆಗಳನ್ನು ರೂಪಿಸುವಲ್ಲಿ ಅನ್ಯಾಯ ಮಾಡಿದಂತಾಗುತ್ತದೆ. ಈ ಕಾರಣಗಳಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಪೋಷಕರು ಹಿಂಜರಿಯುತ್ತಿದ್ದಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳ ಫಲಿತಾಂಶವನ್ನು ಅವಲೋಕಿಸಿದಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ನೀಡುವ ಶಿಕ್ಷಣದ ಗುಣಮಟ್ಟವು ಕೆಳಮಟ್ಟದಲ್ಲಿದ್ದು, ಉತ್ತಮ ಶಿಕ್ಷಕರ ಕೊರತೆಯಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದುದರಿಂದ, ಇದುವರೆಗೂ ಪಾಲಿಕೆಯಲ್ಲಿ ನಡೆಸಿಕೊಂಡು ಬಂದಿರುವ ನೇಮಕಾತಿ ಅನ್ವಯ ಶಿಕ್ಷಕರ ನೇಮಕಾತಿ ಮಾಡಿಕೊಂಡಲ್ಲಿ ಒಳ್ಳೆಯ/ಉತ್ತಮ ಗುಣಮಟ್ಟದ ಶಿಕ್ಷಕರನ್ನು ಪಡೆಯುವಲ್ಲಿ ವಿಫಲವಾಗಬೇಕಾಗುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅವರು ಗಳಿಸಿರುವ ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಲ್ಲಿ, ಉತ್ತಮ ಗುಣಮಟ್ಟದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ, ಸರ್ಕಾರವು ಅನುಮೋದನೆ ನೀಡಿರುವ 301 ಶಿಕ್ಷಕರ ಹುದ್ದೆಗಳನ್ನು ಸಾರ್ವಜನಿಕ ಶಿಕ್ಷಣ

...............................2

ಇಲಾಖೆಯು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಶಿಕ್ಷಕರನ್ನು ಆಯ್ಕೆಮಾಡಿಕೊಳ್ಳುವ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಿಕೊಂಡಲ್ಲಿ ಉತ್ತಮ ಗುಣಮಟ್ಟದ ಶಿಕ್ಷಕರ ಆಯ್ಕೆ ಸಾಧ್ಯವಾಗುವುದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳ ಫಲಿತಾಂಶ ಸುಧಾರಿಸಬಹುದಾಗಿರುತ್ತದೆ ಹಾಗೂ ಭವಿಷ್ಯದ ಉತ್ತಮ ಗುಣಮಟ್ಟದ ಪ್ರಜೆಗಳನ್ನು ರೂಪಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಶಿಕ್ಷಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯಿಂದ IIM/ NCERT/ DPI ಮುಖಾಂತರ ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕಿಂತ ಮುಂಚೆ ತುಂಬಿಕೊಳ್ಳಬೇಕಾಗಿರುವುದರಿಂದ ಅತ್ಯಂತ ಜರೂರಾಗಿ ಈ ರೀತಿ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲು ಅನುಮೋದನೆ ನೀಡಬೇಕೆಂದು ಸರ್ಕಾರವನ್ನು ಕೋರುವ ಪ್ರಸ್ತಾವನೆಗೆ ಅನುಮೋದನೆ ಕೋರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-02-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:14-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:14-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 14-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 4 (246)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ಸಂಖ್ಯೆ: 175, ಬೇಗೂರು ಮುಖ್ಯರಸ್ತೆಯಿಂದ ಬೋವಿಕಾಲೋನಿ ಪಕ್ಕದ ಸರ್ಕಾರಿ ಜಾಗ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ರಸ್ತೆಯ ಮೂಲಕ ರಾಷ್ಟ್ರೀಯ ಹೆದ್ದಾರಿ-7, ಹೊಸೂರು ರಸ್ತೆಗೆ ಸಂಪರ್ಕ ಕಲ್ಪಿಸಲು ಸರ್ವೆ ನಂ. 71 ರಲ್ಲಿ ಬರುವ ಈ ಕೆಳಕಂಡ 4 ಸ್ವತ್ತುಗಳಲ್ಲಿ ಭಾಗಶಃ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರು ಸಲ್ಲಿಸಿರುತ್ತಾರೆ. ಈ ರಸ್ತೆಯ ನಿರ್ಮಾಣದ ಅವಶ್ಯಕತೆ ಬಗ್ಗೆ ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರ ವರದಿಯನ್ನು ಆಧರಿಸಿ, ಜಂಟಿ ಆಯುಕ್ತರು, ಬೊಮ್ಮನಹಳ್ಳಿ ರವರು ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

ದಿನಾಂಕ: 12-01-2011 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ವಲಯದ ಸಹಾಯಕ ಅಭಿಯಂತರರೊಂದಿಗೆ ಸ್ಥಳ ತನಿಖೆ ಮಾಡಿರುತ್ತಾರೆ. ಈ ಸ್ವತ್ತುಗಳನ್ನು ಸಂಪರ್ಕ ರಸ್ತೆ ಕಲ್ಪಿಸಲು ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕತೆ ಇದೆ ಎಂದು ಕಂಡುಬಂದಿರುತ್ತದೆ.

ಹಕ್ಕು ದಾಖಲೆಗಳಂತೆ ಬೊಮ್ಮನಹಳ್ಳಿ ಸರ್ವೆ ನಂ. 71 ರಲ್ಲಿ 3 ಎಕರೆ 10 ಗುಂಟೆ ವಿಸ್ತೀರ್ಣವಿದ್ದು, ಸರ್ಕಾರಿ ಖರಾಬ್ ಎಂದು ವರ್ಗೀಕೃತವಾಗಿದ್ದು, ಈ ಪೈಕಿ 0.01 ಗುಂಟೆ ಪ್ರದೇಶ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಮತ್ತು ಶ್ರೀ ರಾಮ ಗರ್ಭಗುಡಿಗೆ ಹಾಗೂ 20,020 ಚ.ಅಡಿಗಳು (0.18 1/2 ಗುಂಟೆ) ನಗರಸಭೆ ಬೊಮ್ಮನಹಳ್ಳಿ ರವರಿಗೆ ಮಂಜೂರಾಗಿದ್ದು, ಉಳಿದ ಸುಮಾರು 2 ಎಕರೆ 30 1/2 ಗುಂಟೆ ಸರ್ಕಾರಿ ಖರಾಬ್ ಜಮೀನಾಗಿರುತ್ತದೆ.

ಸರ್ವೆ ನಂ. 71 ರ ಸರ್ಕಾರಿ ಖರಾಬ್ ಜಮೀನಿನಲ್ಲಿ 2 ಶೀಟಿನ ಕಟ್ಟಡ ಹಾಗೂ 2 ಅಂಗಡಿ ಮಳಿಗೆ ಕಟ್ಟಡವಿದ್ದು, ಇವುಗಳ ಅವಧಿ ಮುಗಿರುವುದರಿಂದ ಕಟ್ಟಡಗಳಿಗೆ ಸವಕಳಿ ಕಳೆದ ನಂತರ ಯಾವುದೇ ಮೌಲ್ಯವನ್ನು ನಿಗಧಿಪಡಿಸಲು ಅವಕಾಶವಿರುವುದಿಲ್ಲ. ಈ ಕೆಳಗಿನ ಸ್ವತ್ತುಗಳು ಭೂಸ್ವಾಧೀನಕ್ಕೆ ಒಳಪಟ್ಟಿದ್ದು, ಇವುಗಳ ಮಾಲೀಕತ್ವದ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲಿಸಿ ಮಾಲೀಕತ್ವದ ಬಗ್ಗೆ ಅವಾರ್ಡ್ ಹಂತದಲ್ಲಿ ತೀರ್ಮಾನ ಕೈಗೊಳ್ಳುವ ಷರತ್ತಿಗೆ ಒಳಪಡಿಸಿ ವಿವರಗಳನ್ನು ಈ ಕೆಳಕಂಡಂತೆ ದಾಖಲಿಸಿದೆ.

ಭೂಸ್ವಾಧೀನಕ್ಕೊಳಪಡುವ ಸ್ವತ್ತುಗಳ ವಿವರಗಳು ಖಾತಾ ದಾಖಲೆಯಂತೆ ಈ ಕೆಳಕಂಡಂತೆ ಇರುತ್ತವೆ.

| ಕ್ರ. ಸಂ. | ಖಾತೆದಾರರ ಹೆಸರು (ಆರ್.ಟಿ.ಸಿ. ಯಂತೆ) | ಅನುಭವ/ಖಾತೆದಾರ ರ ಹೆಸರು (ಅಸೆಸ್‌ಮೆಂಟ್ ವಹಿ ದಾಖಲೆಯತೆ) | ಖಾತಾ ನಂ. (ಅಸೆಸ್‌ಮೆಂಟ್ ವಹಿ ದಾಖಲೆಯಂತೆ) | ನಿವೇಶನದ ಒಟ್ಟು ವಿಸ್ತೀರ್ಣ (ಚ.ಅ.) | ಭೂಸ್ವಾಧೀನಪಡಿಸಿ ಕೊಳ್ಳುವ ವಿಸ್ತೀರ್ಣ | | ಸ್ವತ್ತಿನ ಮೌಲ್ಯ (ರೂ.ಗಳಲ್ಲಿ) |
|---|---|---|---|---|---|---|---|
| | | | | | ಚ.ಮೀ. | ಚ.ಅ. | |
| 1 | ಸರ್ಕಾರಿ ಖರಾಬ್ | ಲೀಲಾವತಿ ಕೋಂ ಟಿ.ಕೃಷ್ಣ | 153/146/125 | 1250 | 52.25 | 562.44 | 6,74,928.00 |
| 2 | ಸರ್ಕಾರಿ ಖರಾಬ್ | ನಾಗಮ್ಮ ಕೋಂ ಮುನಿಕೃಷ್ಣಪ್ಪ | 152/145/124 | 1161 | 103.5 | 1114.28 | 13,37,136.00 |

..........................2

| | | | | | | | |
|---|---|---|---|---|---|---|---|
| 3 | ಸರ್ಕಾರಿ ಖರಾಬ್ | ಬಿ.ಕೆ.ರಾಮರೆಡ್ಡಿ ಬಿನ್ ಕೃಷ್ಣಪ್ಪ | 762/346/35/72/1 (ಬಿ ವಹಿ) | 6000 | 131 | 1410 | 16,92,000.00 |
| 4 | ಸರ್ಕಾರಿ ಖರಾಬ್ | ವೆಂಕಟೇಶ್‌ರೆಡ್ಡಿ ಬಿನ್ ನಾರಾಯಣರೆಡ್ಡಿ | 706/72/68/4 (ಬಿ ವಹಿ) | 630 | 36.23 | 390 | 4,68,000.00 |
| 5 | ಸರ್ಕಾರಿ ಖರಾಬ್ | ಎನ್.ರಮೇಶ್‌ರೆಡ್ಡಿ ಬಿನ್ ನಾರಾಯಣರೆಡ್ಡಿ | 707/72/68/4 (ಬಿ ವಹಿ) | 630 | 36.23 | 390 | 4,68,000.00 |
| | ಒಟ್ಟು | | | **9671** | **359.21** | **3866.72** | **46,40,064.00** |

**ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ವೆಚ್ಚವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.**

**'ಅ'**

| | | |
|---|---|---|
| 1 | ಚ.ಅ.1ಕ್ಕೆ ಮಾರ್ಗಸೂಚಿ ಬೆಲೆ ರೂ. 1200 ರಂತೆ 3866.72 ಚ.ಅಡಿ.ಗಳಿಗೆ | ರೂ. **46,40,064.00** |
| 2 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇ. 12ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) | ರೂ. 5,56,808.00 |
| 3 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶೇ.30 ರಷ್ಟು ಶಾಸನ ಬದ್ದ ಭತ್ಯೆ | ರೂ. 13,92,019.00 |
| | ಒಟ್ಟು | ರೂ. **65,88,891.00** |
| 4 | **ಕಟ್ಟಡದ ಮೌಲ್ಯ(ಸವಕಳಿ ಕಳೆಯಲಾಗಿ)** | ರೂ. **Nil** |

**'ಆ'**

**ಇತರೆ ವೆಚ್ಚಗಳು**

| | | |
|---|---|---|
| 5 | ಶೇ. 10 ರಷ್ಟು ಸಿಬ್ಬಂದಿ ವೆಚ್ಚ (ಹೊರತುಪಡಿಸಿದೆ) | ರೂ. - |
| 6 | ಶೇ. 1 ರಷ್ಟು ಆಡಿಟ್ ವೆಚ್ಚ | ರೂ. 65,889.00 |
| 7 | ಪ್ರಕಟಣಾ ವೆಚ್ಚ | ರೂ. 1,50,000.00 |
| | **ಒಟ್ಟು** | ರೂ. **2,15,889.00** |
| **ಅ+ಆ ಒಟ್ಟು ಮೊತ್ತ** | | ರೂ. **68,04,780.00** |
| **(ರೂ. ಅರವತ್ತೆಂಟು ಲಕ್ಷದ ನಾಲ್ಕು ಸಾವಿರದ ಏಳುನೂರಾ ಎಂಭತ್ತು ಮಾತ್ರ)** | | |

ಸದರಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ **ರೂ.68,04,780.00 (ಅರವತ್ತೆಂಟು ಲಕ್ಷದ ನಾಲ್ಕು ಸಾವಿರದ ಏಳುನೂರ ಎಂಭತ್ತು ಮಾತ್ರ)** ಗಳಾಗಲಿದ್ದು, ಈ ಮೊತ್ತವನ್ನು ಪಾಲಿಕೆಯ 2010-2011 ನೇ ಸಾಲಿನ ಆಯವ್ಯಯದ **"ರಸ್ತೆ ವಿಸ್ತರಣೆ, ಕಸ ಸಂಗ್ರಹಣೆ ಮತ್ತು ಇತರೆ ಕಾರ್ಯಗಳಿಗೆ ಭೂಸ್ವಾಧೀನ"** ಈ ಶೀರ್ಷಿಕೆಯಿಂದ ಭರಿಸುವ ಬಗ್ಗೆ ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು

..............................3

ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-01-2011 ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-02-2011 ರ ನಿರ್ಣಯ ಮತ್ತು ಮಾನ್ಯ ಆಯುಕ್ತರ ದಿನಾಂಕ:25-01-2011 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-02-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

**"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".**

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 5 (247)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಲಯದ ವಾರ್ಡ್ ಸಂಖ್ಯೆ: 129 (ಬೆಂಗಳೂರು ವಿಶ್ವವಿದ್ಯಾಲಯ) ರ ವ್ಯಾಪ್ತಿಯಲ್ಲಿ ಬರುವ ಯಶವಂತಪುರ ಹೋಬಳಿ, ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ನಂ.42 ರ ಜ್ಞಾನಭಾರತಿ ಬಡಾವಣೆಯ ಜ್ಞಾನಜ್ಯೋತಿನಗರದ ಸ್ವತ್ತಿನ ಸಂಖ್ಯೆ: 47 ರಲ್ಲಿ 288.25 ಚ.ಅ. ಜಾಗವನ್ನು ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ಲಗ್ಗೆರೆ ಉಪವಿಭಾಗ ಹಾಗೂ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಸ್ತಾವನೆ ಪರಿಶೀಲಿಸಲಾಗಿ ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ನಂ.42 ರ ಪೈಕಿ 2.2 ಗುಂಟೆ ಜಮೀನನ್ನು ಶ್ರೀ ಶಿವಾನಂದ ಬಿನ್ ಮರಿಲಿಂಗಪ್ಪನವರು ಶ್ರೀ.ಡಿ.ಕೆ.ನಾಗರಾಜ ಬಿನ್ ಕಪನೀಪತಿಶಾಸ್ತ್ರಿ ಇವರಿಂದ ಎಸ್.ಆರ್.ನಂ.6949/80-81, ದಿನಾಂಕ:25-08-1980 ರಂದು ಕ್ರಯಕ್ಕೆ ಪಡೆದಿರುತ್ತಾರೆ. ನಂತರ, ಶ್ರೀ. ಶಿವಾನಂದ ಬಿನ್ ಮರಿಲಿಂಗಪ್ಪನವರು ಶ್ರೀ. ಎಸ್.ನಟರಾಜ್ ಬಿನ್ ಎಸ್.ಸಿದ್ದಪ್ಪ ಇವರಿಗೆ ಎಸ್.ಆರ್.ನಂ.31765/2004-05, ದಿನಾಂಕ:23-10-2004 ರಂದು ಮಲ್ಲತ್ತಹಳ್ಳಿ ಗ್ರಾಮದ ಗ್ರಾಮಠಾಣಾಕ್ಕೆ ಸೇರಿದ ಖಾತೆ ನಂ.42, ಅಸೆಸ್‌ಮೆಂಟ್ ನಂ.42 ರಲ್ಲಿರುವ ಸ್ವತ್ತಿನ ಪೈಕಿ 47 ನೇ ನಂಬರಿನ 57x(27+18)/2 = 1282.5 ಚ.ಅ. ಜಾಗವನ್ನು ಕ್ರಯಕ್ಕೆ ನೀಡಿರುತ್ತಾರೆ. ಈ ಆಸ್ತಿಯನ್ನು ಕಂದಾಯಾಧಿಕಾರಿಗಳು, ರಾಜರಾಜೇಶ್ವರಿನಗರ ನಗರ ಸಭೆ, ಬೆಂಗಳೂರು ಇವರು ದಿನಾಂಕ:08-12-2006 ರಂದು ನಮೂನೆ- III ರಲ್ಲಿ ನೀಡಿರುವ ದಾಖಲಾತಿಯಲ್ಲಿ ಕ್ರಮ ಸಂಖ್ಯೆ:117 ರಲ್ಲಿ ನಟರಾಜ ಬಿನ್ ಸಿದ್ದಪ್ಪ ಇವರ ಹೆಸರಿಗೆ ದಾಖಲು ಮಾಡಿರುತ್ತಾರೆ. ಆದರೆ, ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ನಂ.42 ರ 2009-10 ನೇ ಸಾಲಿನ ಆರ್.ಟಿ.ಸಿ. ಪರಿಶೀಲಿಸಲಾಗಿ, ಈ ಸರ್ವೆ ನಂಬರ್‌ನ ವಿಸ್ತೀರ್ಣ 2 ಎಕರೆ ಇದ್ದು, ರೂ.6 ಮತ್ತು 72 ಪೈಸೆ ಇರುತ್ತದೆ. ಇದು ಶ್ರೀ ವೆಂಕಟೇಶ್ ಇವರ ಖಾತೆಯಲ್ಲಿ ದಾಖಲಾಗಿರುತ್ತದೆ. ಆದರೆ, ಮೇಲ್ಕಂಡ ಶ್ರೀ ಶಿವಾನಂದ ಬಿನ್ ಮರಿಲಿಂಗಪ್ಪನವರು ಮತ್ತು ಶ್ರೀ ಎಸ್.ನಟರಾಜ್ ಬಿನ್ ಎಸ್.ಸಿದ್ದಪ್ಪನವರು ನಿವೇಶನಗಳನ್ನು ಕ್ರಯಕ್ಕೆ ಪಡೆದಿದ್ದರೂ, ಅವರುಗಳ ಹೆಸರುಗಳು ಪಹಣಿಯಲ್ಲಿ ನಮೂದಾಗಿರುವುದಿಲ್ಲ. ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಈ ಸ್ವತ್ತಿನ ಸ್ಥಳ ತನಿಖೆಯನ್ನು ದಿನಾಂಕ:13-09-2010 ರಂದು ನಡೆಸಲಾಗಿದೆ.

ಸ್ವತ್ತಿನ ಮಾಲೀಕರು ಸಲ್ಲಿಸಿರುವ ಕ್ರಯ ಪತ್ರದಂತೆ ಸದರಿ ನಿವೇಶನದ ಅಳತೆ ಒಟ್ಟು 1282.50 ಚ.ಅ. ಇದ್ದು, ಸ್ಥಳದಲ್ಲಿ ಅಳತೆ ಮಾಡಿದಾಗ, ಹಾಲಿ ನಿವೇಶನದಲ್ಲಿರುವ ಮನೆ ಮತ್ತು ತಾತ್ಕಾಲಿಕ ಶೆಡ್ ಇರುವ ಒಟ್ಟು ವಿಸ್ತೀರ್ಣ ಕ್ರಯ ಪತ್ರದ ಅಳತೆಗೆ ತಾಳೆಯಾಗುತ್ತದೆ ಹಾಗೂ ತಾತ್ಕಾಲಿಕ ಶೆಡ್ ರಸ್ತೆಯ ಮಧ್ಯವರೆಗೂ ಬಂದಿರುತ್ತದೆ. ಇದು ಅನುಮೋದಿತವಲ್ಲದ ಖಾಸಗಿ ಲೇಔಟ್‌ನಲ್ಲಿರುವ (unapproved revnue layout) ನಿವೇಶನವಾಗಿದ್ದು, ಕ್ರಯ ಪತ್ರದ ಚಕ್ಕುಬಂದಿಯಲ್ಲಿ ಉತ್ತರಕ್ಕೆ ಮಾತ್ರ ರಸ್ತೆ ಇದ್ದು, ಉಳಿದ ಮೂರು ಕಡೆ ಬೇರೆಯವರ ಸ್ವತ್ತುಗಳು ಇರುತ್ತವೆ. ಈ ಖಾಸಗಿ ಲೇಔಟ್‌ನ ಹಿಂಭಾಗ (ದಕ್ಷಿಣ) ಹಾಗೂ ಪಶ್ಚಿಮಕ್ಕೆ ಬೇರೆ ಎರಡು ಅನುಮೋದಿತವಲ್ಲದ ಖಾಸಗಿ ಲೇಔಟ್‌ಗಳು ನಿರ್ಮಾಣವಾಗಿದ್ದು, ಆ ಲೇಔಟ್‌ಗಳ ರಸ್ತೆಗಾಗಿ ನನ್ನ ಜಾಗದಲ್ಲಿದ್ದ ಕಾಂಪೌಂಡ್ ಹೊಡೆದು ಹಾಕಿ ರಸ್ತೆ ನಿರ್ಮಾಣ ಮಾಡಿರುತ್ತಾರೆಂದು ಸ್ವತ್ತಿನ ಮಾಲೀಕರು ತಿಳಿಸಿರುತ್ತಾರೆ. ಆದರೆ, ಸದರಿ ನಿವೇಶನವನ್ನು ತಾವು ಕ್ರಯಕ್ಕೆ ಕೊಂಡಿದ್ದು, ಕಾನೂನಿನಂತೆ ಪರಿಹಾರ ನೀಡದೆ ಬಿಟ್ಟುಕೊಡಲು ಸಾಧ್ಯವಿಲ್ಲವೆಂದೂ, 2006 ರವರೆಗೂ ಕಂದಾಯ ಕಟ್ಟಿದ್ದು, ಹಿಂದಿನ ರಾಜರಾಜೇಶ್ವರಿನಗರ ನಗರ ಸಭೆಯ ಕಂದಾಯ ರಶೀತಿಯ ದಾಖಲೆ ಪ್ರತಿಯನ್ನು ಸಲ್ಲಿಸಿರುತ್ತಾರೆ. ಹಿಂದಿನ ನಗರ ಸಭೆಯಲ್ಲಿ ಕಟ್ಟಡ ಕಟ್ಟಲು ಪರವಾನಗಿ ಸಹ ಪಡೆದಿದ್ದು, ಆ ಬಗ್ಗೆ ಸಹ ದಾಖಲೆ ಹಾಜರುಪಡಿಸಿರುತ್ತಾರೆ.

............................2

ಸ್ಥಳ ತನಿಖೆಯಲ್ಲಿ ಕಂಡು ಬಂದಂತೆ, ಖಾಸಗಿ ಲೇಔಟ್‌ನಲ್ಲಿ ನಿರ್ಮಾಣ ಮಾಡಲಾಗಿರುವ 30 ಅಡಿಗಳ ರಸ್ತೆಗೆ ಅಡ್ಡಲಾಗಿರುವ ಶ್ರೀ ನಟರಾಜ್ ಅವರ ನಿವೇಶನವನ್ನು ತೆರವುಗೊಳಿಸುವುದು ಸೂಕ್ತವಾಗಿರುತ್ತದೆ. ಸದರಿ ನಿವೇಶನ ಶ್ರೀ ನಟರಾಜ್ ರವರಿಗೆ ಕ್ರಯ ಪತ್ರದ ಮೂಲಕ ನೊಂದಣಿಯಾಗಿರುವುದರಿಂದಲೂ, ಪ್ರಸ್ತುತ ಈ ಪ್ರದೇಶ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದಿರುವುದರಿಂದಲೂ, ಈ ಸ್ವತ್ತಿನಲ್ಲಿ ರಸ್ತೆಗೆ ಅವಶ್ಯವಿರುವ ಭಾಗಶ: 288.25 ಚ.ಅಡಿಗಳ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿಕೊಂಡು ಭೂಪರಿಹಾರ ಪಾವತಿಸಬೇಕಾಗುತ್ತದೆ.

ಇದು ಪರಿವರ್ತನೆಯಾಗದ/ಅನುಮೋದನೆಯಾಗದ ಖಾಸಗಿ ಬಡಾವಣೆಯ ನಿವೇಶನವಾಗಿದ್ದರೂ ಸಹ, ಹಿಂದಿನ ನಗರ ಸಭೆಯಲ್ಲಿ ಖಾತೆಯಾಗಿರುವುದರಿಂದ ಈ ನಿವೇಶನಕ್ಕೆ ವಾಸೋಪಯೋಗಿ ನಿವೇಶನಗಳಿಗೆ ನಿಗಧಿಪಡಿಸಲಾಗಿರುವ ದರವನ್ನು ನೀಡುವುದು ಸೂಕ್ತವಾಗಿರುತ್ತದೆ. ಆದುದರಿಂದ, ಈ ನಿವೇಶನಕ್ಕೆ ಸರ್ಕಾರದ ದಿನಾಂಕ:19–04–2007 ರ ಮಾರ್ಗಸೂಚಿ ಬೆಲೆಯನ್ವಯ ಚ.ಅ. 1 ಕ್ಕೆ ರೂ.600 ಗಳನ್ನು ಪರಿಗಣಿಸಲಾಗಿದೆ. ಅದರಂತೆ, ಈ ಸ್ವತ್ತಿನ ಭೂ–ಪರಿಹಾರ ಮತ್ತು ಇತರೇ ವೆಚ್ಚಗಳ ವಿವರಗಳು ಕೆಳಕಂಡಂತಿರುತ್ತವೆ;

‘ಅ’

| | | |
|---|---|---|
| 1 | ಚ.ಅ. 1 ಕ್ಕೆ ರೂ.600 ರಂತೆ 288.25 ಚ.ಅ ಗಳಿಗೆ | ರೂ. 1,72,950.00 |
| 2 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರನ್ವಯ ಶೇ.30 ರಂತೆ ಶಾಸನಬದ್ಧ ಭತ್ಯೆ | ರೂ. 51,885.00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ. 23(1)(ಎ) ರನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) | ರೂ. 20,754.00 |
| | **ಒಟ್ಟು** | **ರೂ. 2,45,589.00** |

‘ಆ’

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇ.10 ರಷ್ಟು | ರೂ. 24,558.00 |
| 5 | ಆಡಿಟ್ ವೆಚ್ಚ ಶೇ. 1 ರಷು | ರೂ. 2,455.00 |
| 6 | ಪ್ರಕಟಣಾ ವೆಚ್ಚ | ರೂ. 1,00,000.00 |
| | **ಒಟ್ಟು** | **ರೂ. 1,27,013.00** |
| | **(ಅ + ಆ) ಒಟ್ಟು** | **ರೂ. 3,72,602.00** |

**(ಮೂರು ಲಕ್ಷದ ಎಪ್ಪತ್ತೆರಡು ಸಾವಿರದ ಆರು ನೂರ ಎರಡು ರೂ.ಗಳು ಮಾತ್ರ)**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೇಲೆ ನಮೂದಿಸಿರುವ ಆಸ್ತಿಯನ್ನು ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಂಡು, ಸ್ವತ್ತಿನ ಖಾತೆದಾರರಿಗೆ ಭೂ ಪರಿಹಾರವನ್ನು ಪಾವತಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06–01–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25–01–2011 ರಂದು ನಿರ್ಣಯ ಹಾಗೂ ಆಯುಕ್ತರ ದಿನಾಂಕ:06–01–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25–01–2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–02–2011 ರ ನಿರ್ಣಯ.

..........................3

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

**"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".**

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** **"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".**

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 6 (248)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:91, ಪ್ರೇಜರ್‌ಟೌನ್, ಮುರುಗೇಶ್ ಮೊದಲಿಯಾರ್ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ:8 ರಲ್ಲಿ ಸ್ವತ್ತಿನ ಅಳತೆ 3083.4 ಚದರ ಅಡಿಗಳ ಜಾಗವನ್ನು ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ದಿ:27-06-2005 ರ ವಿಷಯದ ಸಂಖ್ಯೆ:15(235) ರ ನಿರ್ಣಯದಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ/235/ಎಂಎನ್‌ಜಿ/2005, ದಿ:28/10/2005 ರ ಆದೇಶದಂತೆ ಅಂದಿನ ಮಾರುಕಟ್ಟೆ ದರದಂತೆ ಸ್ವತ್ತಿನ ಮೌಲ್ಯ ರೂ.30,71,843/- ಗಳಿಗೆ ಕ್ರಯಕ್ಕೆ ನೀಡಲು ಆದೇಶಿಸಲಾಗಿದ್ದು, ಕ್ರಯದ ಮೊತ್ತವನ್ನು ಪೂರ್ಣವಾಗಿ ರಸೀದಿ ಸಂಖ್ಯೆ:0607345, ದಿನಾಂಕ: 03/12/2005 ರಲ್ಲಿ ರೂ.30,71,843/-ಗಳನ್ನು ಪಾವತಿಸಿರುವುದು ಕಂಡು ಬರುತ್ತದೆ.

ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಆರ್.ಸಂಪತ್‌ರಾಜ್‌ರವರು ಮನವಿ ಸಲ್ಲಿಸಿ, ಸ್ವತ್ತನ್ನು ಕ್ರಯಕ್ಕೆ ನೀಡುವ ಸಂದರ್ಭದಲ್ಲಿ ಆದೇಶ ಸಂಖ್ಯೆ:ನಅಇ/124/ಟಿಎಂಡಿ/2002, ದಿ:02/06/2003 ಅನ್ನು ಪರಿಗಣಿಸದೇ ಆದೇಶ ಹೊರಡಿಸಲಾಗಿತ್ತು ಎಂದು ಮನವಿಯಲ್ಲಿ ತಿಳಿಸುತ್ತಾ, ಸದರಿ ಆದೇಶದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ನಡೆಸುತ್ತಿರುವ ಶಾಲೆಗಳಿಗೆ ನೀಡುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಶೇ.25% ರಂತೆ ಪರಿಗಣಿಸಿ, ಪಾವತಿಸಿರುವ ಶೇ.100% ರ ಹಣದಲ್ಲಿ ಶೇ.75% ರಷ್ಟು ಹಣವನ್ನು ಹಿಂದಿರುಗಿಸುವಂತೆ ಕೋರಿ ಮನವಿ ಪತ್ರದೊಂದಿಗೆ ಆದೇಶ ಸಂಖ್ಯೆ:ನಅಇ/124/ಟಿಎಂಡಿ/2002, ದಿನಾಂಕ: 02/06/2003 ರ ಸರ್ಕಾರದ ಆದೇಶದ ಪ್ರತಿ, ನೊಂದಾಯಿತ ಕ್ರಯ ಪತ್ರದ ಪ್ರತಿ ಹಾಗೂ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಶ್ರೀಮತಿ ಮೆಹರಾಸ್ ಸಂಸ್ಥೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದಡಿ ಅಂಗೀಕೃತ ಮಾಡಿರುವ ಧೃಡೀಕರಣ ಪತ್ರದ ಪ್ರತಿಗಳನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಮಾರುಕಟ್ಟೆಯ ಒಟ್ಟು ಮೌಲ್ಯ ರೂ.30,71,843/- (ಶೇ.100% ರಷ್ಟು) ಗಳನ್ನು ಪಾವತಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/124/ಟಿಎಂಡಿ/2002, ದಿ:02/06/2003 ರ ಸುತ್ತೋಲೆಯನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಶಾಲೆ ನಡೆಸುತ್ತಿರುವುದರಿಂದ, ದಿನಾಂಕ: 02/06/2003 ರ ಸುತ್ತೋಲೆಯಂತೆ ಶೇ.25% ರಂತೆ ಪರಿಗಣಿಸಿ, ಉಳಿದ ಶೇ.75% ರಷ್ಟು ಹಣವನ್ನು ಮರುಪಾವತಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011ರ ನಿರ್ಣಯ ಹಾಗೂ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ :10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..............................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** **"**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–02–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು**"**.

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 7 (249)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಚಾಮರಾಜಪೇಟೆ ವಲಯದ ವಾರ್ಡ್ ನಂ:141, ಆಜಾದ್‌ನಗರ 7ನೇ ಕ್ರಾಸ್, ಸ್ವತ್ತಿನ ಸಂಖ್ಯೆ:33, ಶ್ರೀ ರಾಮ್‌ಸಿಂಗ್‌ರವರಿಗೆ 10x60 ಅಡಿಗಳ ಜಾಗವನ್ನು ದಿನಾಂಕ:16-10-1976 ರಿಂದ ದಿ:15-10-1981 ರವರೆಗೆ 5 ವರ್ಷಗಳ ಅವಧಿಗೆ ವಾರ್ಷಿಕ ರೂ.134 ರಂತೆ ಗುತ್ತಿಗೆಗೆ ನೀಡಿದ್ದು, ದಿ:15-10-1981 ರಲ್ಲಿ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುತ್ತದೆ. ಪ್ರಸ್ತುತ ಶ್ರೀ ರಾಮ್‌ಸಿಂಗ್ ರವರು ಗುತ್ತಿಗೆ ನೀಡಲಾಗಿದ್ದ ಜಾಗದಲ್ಲಿ ವಾಸಿಸುತ್ತಿಲ್ಲವಾದ್ದರಿಂದ, ಸದರಿ ಜಾಗವನ್ನು ಅರ್ಜಿದಾರರಾದ ಶ್ರೀಮತಿ ರಾಧಮ್ಮರವರೇ ಅನುಭವಿಸುತ್ತಿದ್ದು, ಅದನ್ನು ತಮಗೆ ಕ್ರಯಕ್ಕೆ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರದೇಶದಲ್ಲಿ ಈ ಹಿಂದೆ ಶ್ರೀ.ಸಿ. ಚೆನ್ನಯ್ಯ ಎಂಬುವವರಿಗೆ 30x60 ಅಡಿಗಳ ಜಾಗವನ್ನು ನಗರಪಾಲಿಕೆಯು ಕ್ರಯಕ್ಕೆ ನೀಡಿದ್ದು, ಇದಾದ ನಂತರದಲ್ಲಿ ಮೇಲೆ ತಿಳಿಸಿರುವ ಗುತ್ತಿಗೆದಾರರಾದ ಶ್ರೀ ರಾಮ್‌ಸಿಂಗ್‌ರವರಿಗೆ ಕ್ರಯವಾಗಿದ್ದು, ಶ್ರೀ ರಾಮ್‌ಸಿಂಗ್‌ರವರು ಇದನ್ನು 15x60 ಅಡಿಗಳಂತೆ ಎರಡು ಭಾಗವನ್ನಾಗಿ ಮಾಡಿ, ಒಂದು ಭಾಗವನ್ನು ಅರ್ಜಿದಾರರಾದ ಶ್ರೀಮತಿ ರಾಧಮ್ಮರವರಿಗೆ ಮಾರಾಟ ಮಾಡಿದ್ದು, ಮತ್ತೊಂದು ಭಾಗವನ್ನು ಮತ್ತೊಬ್ಬರಿಗೆ (ಶ್ರೀ ಆರ್.ಟಿ.ಮೂರ್ತಿ) ಮಾರಾಟ ಮಾಡಿರುವುದು ಕಂಡು ಬರುತ್ತದೆ. ಇದರಲ್ಲಿ 1976 ರಲ್ಲಿ ಶ್ರೀ.ರಾಮ್‌ಸಿಂಗ್ ರವರಿಗೆ ಗುತ್ತಿಗೆ ನೀಡಿರುವ 10x60 ಅಡಿಗಳ ಜಾಗವು ಸೇರಿರುವುದಿಲ್ಲವೆಂದು ವಲಯಾಧಿಕಾರಿಗಳು ತಿಳಿಸಿರುತ್ತಾರೆ. ಈ 10x60 ಅಡಿ ಜಾಗವನ್ನು ಇದರ ಪಕ್ಕದಲ್ಲಿರುವ ಅರ್ಜಿದಾರರಾದ ಶ್ರೀಮತಿ ರಾಧಮ್ಮರವರೇ ಉಪಯೋಗಿಸುತ್ತಿದ್ದು, ಇದನ್ನು ಅವರಿಗೆ ಈಗಿನ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಬಹುದೆಂದು ವಲಯ ಜಂಟಿ ಆಯುಕ್ತರು ಮತ್ತು ಉಪ ಆಯುಕ್ತರು ತಮ್ಮ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:07-12-2010 ರಂದು ಚಾಮರಾಜಪೇಟೆ, ಆಜಾದ್‌ನಗರದಲ್ಲಿರುವ ಸ್ವತ್ತಿನ ಸ್ಥಳವನ್ನು ಸಹಾಯಕ ಆಯುಕ್ತರು (ಆಸ್ತಿಗಳು) ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಉಪ ಆಯಕ್ತರು (ಆಸ್ತಿಗಳು) ಸ್ಥಳ ಪರಿಶೀಲನೆ ಮಾಡಲಾಗಿದ್ದು, ಸದರಿ ಪ್ರದೇಶದ 10x60 ಅಡಿ ಜಾಗದಲ್ಲಿ ಕಾಂಪೌಂಡ್ ಗೋಡೆ ನಿರ್ಮಿಸಿದ್ದು, ಆ ಕಾಂಪೌಂಡ್ ಗೋಡೆ ಒಳಭಾಗದಲ್ಲಿ ಅಂದಾಜು 30 ವರ್ಷಗಳ ಕಾಲದ ತೆಂಗಿನಮರ ಮತ್ತು ಮಾವಿನಮರ ಇರುತ್ತದೆ. ಈ ಮಧ್ಯೆ ಕಬ್ಬಿಣದ ಶೀಟ್‌ವುಳ್ಳ ಚಿಕ್ಕದಾದ ಶೆಡ್ ನಿರ್ಮಿಸಿದ್ದು, ಮೇಲ್ಭಾಗದಲ್ಲಿ ಸಿಮೆಂಟ್ ಶೀಟ್ ಹಾಕಲಾಗಿರುತ್ತದೆ, ಅದರ ಪಕ್ಕದಲ್ಲಿ ಚಿಕ್ಕ ಶೌಚಾಲಯವು ಇರುತ್ತದೆ. ಸದರಿ ಶೆಡ್ಡಿನ ಪೂರ್ವದ ಕಡೆ ಖಾಲಿ ಜಾಗವಿದ್ದು, ಬಟ್ಟೆ ತೊಳೆಯಲು ಉಪಯೋಗಿಸುತ್ತಿರುವುದು ಕಂಡು ಬರುತ್ತದೆ. ಈ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ಶ್ರೀಮತಿ ಲಿಂಗಮ್ಮರವರಿಗೆ ನಗರ ಪಾಲಿಕೆಯಿಂದ ಗುತ್ತಿಗೆಗೆ ನೀಡಿರುವ ಖಾಲಿ ನಿವೇಶನ ಪಶ್ಚಿಮಕ್ಕೆ ಶ್ರೀಮತಿ ರಾಧಮ್ಮರವರ ಮನೆ, ಉತ್ತರಕ್ಕೆ ಖಾಸಗಿ ಸ್ವತ್ತು, ದಕ್ಷಿಣಕ್ಕೆ ರಸ್ತೆ, ಈ ಮಧ್ಯೆ 10x60 ಅಡಿಗಳ ಸ್ವತ್ತಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಪೂರ್ಣ ವಾಸದ ಮನೆಗಳು ನಿರ್ಮಾಣವಾಗಿದ್ದು, ಈ ಜಾಗವು ಶ್ರೀಮತಿ ರಾಧಮ್ಮರವರ ಮನೆಗೆ ಲಗತ್ತಾಗಿದ್ದು, ಹಾಗೂ ಅವರ ಅನುಭವದಲ್ಲಿರುತ್ತದೆ. ಪ್ರಸ್ತುತ ಜಾಗವು ಸಾರ್ವಜನಿಕ ಉಪಯೋಗಕ್ಕಾಗಲೀ ಅಥವಾ ಪಾಲಿಕೆ ಉಪಯೋಗಕ್ಕಾಗಲೀ ಬರುವುದಿಲ್ಲವೆಂದು ಕಂಡು ಬಂದಿರುತ್ತದೆ. ಆದ್ದರಿಂದ ಈ ಸ್ವತ್ತನ್ನು ಸಾರ್ವಜನಿಕ ಹರಾಜು ಮೂಲಕ ಅಥವಾ ಸರ್ಕಾರದ ಮಾರ್ಗಸೂಚಿ ಪ್ರಕಾರ ಈಗಿನ ಮಾರುಕಟ್ಟೆ ದರದಂತೆ ನಿಗಧಿಪಡಿಸಿ ವಿಲೇ ಮಾಡಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

............................2

ಸರ್ಕಾರದ 2007ರ ಮಾರ್ಗಸೂಚಿ ದರದಂತೆ ವಸತಿಗೆ ಚದರ ಅಡಿ ಒಂದಕ್ಕೆ ರೂ.700/- ಗಳಾಗಿದ್ದು, ಸರ್ಕಾರದ ದಿನಾಂಕ:09-07-2001 ರ ಸುತ್ತೋಲೆಯಲ್ಲಿನ ಸೂಚನೆಯಂತೆ ಇದಕ್ಕೆ ಶೇ.20% ರಷ್ಟು ಹೆಚ್ಚಿಸಿದಾಗ ರೂ.840/- ಗಳಾಗುತ್ತದೆ. ಇದರಂತೆ 10x60=600 ಚದರ ಅಡಿ ಸ್ವತ್ತಿನ ವಿಸ್ತೀರ್ಣವು ಅದರಂತೆ 840x600=ರೂ.5,04,000 ಗಳಾಗುತ್ತದೆ. ಈ ಹಣವನ್ನು ಕಟ್ಟಿಸಿಕೊಂಡು ಕ್ರಯಕ್ಕೆ ನೀಡಲು ಅಥವಾ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿರುವ ಸಲಹಾ ಸಮಿತಿ ಹಾಗೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-01-2011 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ: 06-01-2011 ರ ಟಿಪ್ಪಣಿಯನ್ನು ಒಪ್ಪುತ್ತಾ, ನೊಂದಣಿ ಮಾರ್ಗಸೂಚಿ ಬೆಲೆ ಅಥವಾ ಹರಾಜಿನ ಮೂಲಕ ವಿಲೇ ಮಾಡಿ, ಯಾವುದು ಹೆಚ್ಚು ಬೆಲೆಗಳಿಸುವುದೋ ಆ ಬೆಲೆಗೆ ವಿಲೇ ಮಾಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:06-01-2011 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ: 25-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 8 (250)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:27, ಗಾಂಧಿನಗರ, ಬಾಲಕಿಯರ ಪ್ರೌಢಶಾಲೆಯ ಪಕ್ಕದ 15 x 50 ಅಡಿಗಳ ಎ.ಸಿ.ಸೀಟಿನ ಪಾಲಿಕೆ ಕಟ್ಟಡವನ್ನು ಕರ್ನಾಟಕ ಚಲನಚಿತ್ರ ಕಾರ್ಮಿಕರ, ಕಲಾವಿದರ, ತಂತ್ರಜ್ಞರ ಒಕ್ಕೂಟ (ರಿ) ರವರಿಗೆ ದಿನಾಂಕ:19-11-1997 ರಿಂದ ಒಂದು ವರ್ಷದ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.2000/- ಗಳ ಅಧಾರದ ಮೇಲೆ ಗುತ್ತಿಗೆಗೆ ನೀಡಲಾಗಿರುತ್ತದೆ. ತದ ನಂತರದಲ್ಲಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-11-1999 ರ ವಿಷಯದ ಸಂಖ್ಯೆ: ತೆ.ಆ:07:99-2000 ರ ತೀರ್ಮಾನದಂತೆ ಗುತ್ತಿಗೆ ಅವಧಿಯನ್ನು ಪುನ: ಮುಂದಿನ 3 ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.3500/- ಗಳ ಆಧಾರದ ಮೇಲೆ ನವೀಕರಿಸಲು ಹಾಗೂ ಹಾಲಿ ಗುತ್ತಿಗೆ ಅವಧಿ ಅಂತ್ಯವಾದ ನಂತರ ಮತ್ತೆ ಮುಂದುವರೆಸದೇ ಕಟ್ಟಡವನ್ನು ನಗರಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಗುತ್ತಿಗೆದಾರರು ದೀರ್ಘಾವಧಿಗೆ ನವೀಕರಿಸಲು ಕೋರಿದ ಮೇರೆಗೆ ಮಾಸಿಕ ಗುತ್ತಿಗೆ ರೂ.25,188 ಗಳಿಗೆ ನೀಡುವುದೆಂಬ ಮಾರ್ಪಾಡುಗಳೊಂದಿಗೆ ಪಾಲಿಕೆ ಸಭೆಯಲ್ಲಿ ನಿರ್ಣಯವಾಗಿರುತ್ತದೆ. ದಿನಾಂಕ:19-05-2010 ರಲ್ಲಿ ಗುತ್ತಿಗೆಯನ್ನು ಮುಂದುವರಿಸುವ ಬಗ್ಗೆ ಚಲನಚಿತ್ರ ಕಾರ್ಮಿಕರ ಹಿತದೃಷ್ಟಿಯಿಂದ ಗುತ್ತಿಗೆಯನ್ನು ಮುಂದುವರಿಸಲು ಕೋರುತ್ತಾ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಪತ್ರದ ದಿನಾಂಕ:30-08-2010 ರಲ್ಲಿ ಸ್ವತ್ತಿನ ಪರಿಷ್ಕೃತ ಮಾರುಕಟ್ಟೆ ದರದಲ್ಲಿ ಲೆಕ್ಕಚಾರ ಮಾಡಿ ಕಡಿಮೆ ಅವಧಿ ಇರುವಂತೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸಲು, ದಿನಾಂಕ:26-10-2010 ರಂದು ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಸಭೆಯಲ್ಲಿ ಸಹ ಗುತ್ತಿಗೆ ಮುಂದುವರೆಸಲು ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯ ಸುತ್ತೋಲೆ ಸಂಖ್ಯೆ:ಪಿ.ಆರ್/115/01-02, ದಿನಾಂಕ:01-03-2002 ರಂತೆ ಸ್ವತ್ತಿನ ಪ್ರಸಕ್ತ ಮಾರುಕಟ್ಟೆ ಬೆಲೆಯಲ್ಲಿ ಕನಿಷ್ಠ ಶೇಕಡಾ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಲು ಹಾಗೂ ಶೇಕಡ 100 ರಷ್ಟು ಸಮಾಜಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಈ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗಳು, ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಯುಕ್ತರು ನಿರ್ಧರಿಸಬಹುದಾಗಿರುತ್ತದೆ ಎಂದಿರುತ್ತದೆ.

2007 ನೇ ಸಾಲಿನ ಸರ್ಕಾರ ಆದೇಶದಂತೆ ದರವು ಚದರ ಅಡಿ ಒಂದಕ್ಕೆ ವಸತಿಗೆ ರೂ.4000/- ಗಳಿದ್ದು, ವಸತಿಯೇತರ ಚದರ ಅಡಿ ಒಂದಕ್ಕೆ ರೂ.5600/- ಗಳಾಗಿರುತ್ತದೆ. ಸ್ವತ್ತಿನ ಅಳತೆ 15 x 15=750 ಚದರ ಅಡಿಗಳಾಗಿದ್ದು, ಒಟ್ಟು ನಿವೇಶನದ ಬೆಲೆ 750 x 5600=ರೂ.42,00,000/- ಗಳಾಗಿದೆ. ಕಟ್ಟಡದ ಬೆಲೆ ಚದರ ಅಡಿ ಒಂದಕ್ಕೆ ರೂ.250/- ಗಳಾಗಿದ್ದು, ಅದರಂತೆ ಲೆಕ್ಕಾಚಾರ ಮಾಡಲಾಗಿ ಕಟ್ಟಡದ ಬೆಲೆ ರೂ.1,87,500/- ಗಳಾಗುತ್ತದೆ. ಈ ರೀತಿ ನಿವೇಶನ ಮತ್ತು ಕಟ್ಟಡದ ಒಟ್ಟು ಬೆಲೆ ರೂ.43,87,500/- ಗಳಾಗಿದ್ದು, ಶೇಕಡ 10 ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಹಣವು ರೂ.4,38,750/- ಗಳಾಗಿದ್ದು, ಮಾಸಿಕ ಗುತ್ತಿಗೆ ಹಣವು ರೂ.36,565/- ಗಳಾಗುತ್ತದೆ.

ಈ ಸಂಸ್ಥೆಯು ಪ್ರಸ್ತಾಪಿತ ಜಾಗವನ್ನು ಸಂಘದ ಕಾರ್ಯಾಲಯಕ್ಕೆ ಮಾತ್ರ ಉಪಯೋಗಿಸುತ್ತಿರುವುದರಿಂದ ಹಾಗೂ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ತೊಡಗದೆ ಇರುವುದರಿಂದ ದಿನಾಂಕ:19-11-2001 ರಿಂದ

..............................2

ಗುತ್ತಿಗೆ ನವೀಕರಿಸುವ ಇಂದಿನ ದಿನಾಂಕದವರೆಗೆ ಮಾಸಿಕ ಗುತ್ತಿಗೆ ದರ ರೂ.3,500/- ರಂತೆ ವಸೂಲಿ ಮಾಡಿ ಮುಂದಿನ 5 ವರ್ಷದ ಅವಧಿಗೆ ಮಾಹೆಯಾನ ರೂ.7500/- ರಂತೆ ಪರಿಗಣಿಸಿ ದರ ನಿಗಧಿಪಡಿಸಿ, 5 ವರ್ಷದ ಅವಧಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ನವೀಕರಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:31-12-2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 9 (251)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವಾರ್ಡ್ ಸಂಖ್ಯೆ: 64 (ಹಳೆಯದು-99), ರಾಜಮಹಲ್ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ ಆವರಣದಲ್ಲಿ 593 ಚದರ ಅಡಿ ಜಾಗವನ್ನು ಅಂಚೆ ಇಲಾಖೆಗೆ ಮಾಸಿಕ ರೂ.1000/- ರಂತೆ 1997 ರಲ್ಲಿ 5 ವರ್ಷಗಳಿಗೆ ಗುತ್ತಿಗೆಗೆ ನೀಡಿದ್ದು, ಇದರ ಅವಧಿಯು 2002 ರಲ್ಲಿ ಮುಕ್ತಾಯವಾಗಿದ್ದು, ಗುತ್ತಿಗೆ ಅವಧಿಯು ಮುಗಿದ ನಂತರ ಅಂಚೆ ಇಲಾಖೆಯು ಪ್ರಸ್ತುತ ಸ್ಥಳದಲ್ಲಿ ಮುಂದುವರೆಸಿಕೊಂಡು ಬಂದಿರುತ್ತದೆ. ಈಗಲೂ ಸಹ ತಿಂಗಳಿಗೆ ರೂ.1000/- ರಂತೆ ದಿನಾಂಕ:31-8-2008 ರವರೆಗೆ ಹಣವನ್ನು ಅಂಚೆ ಇಲಾಖೆಯು ಪಾವತಿಸಿದ್ದು, ಇಲ್ಲಿಂದ ಮುಂದಿನ ಅವಧಿಯ ಗುತ್ತಿಗೆ ಹಣವನ್ನು ಪಾವತಿಸಬೇಕಾಗಿರುತ್ತದೆ. ಈಗ ಅಂಚೆ ಇಲಾಖೆಯು ಗುತ್ತಿಗೆ ಅವಧಿಯನ್ನು ಮುಂದುವರೆಸುವಂತೆ ಕೋರಿರುತ್ತಾರೆ. ಆದುದರಿಂದ, ಗುತ್ತಿಗೆ ದರವನ್ನು ದಿನಾಂಕ:01-09-2008 ರಿಂದ ದಿ:30-09-2010 ರವರೆಗೆ ಮಾಹೆಯಾನ ರೂ.2000/- ರಂತೆ, ನಂತರದ ದಿನಾಂಕ:01-10-2010 ರಿಂದ ಮಾಹೆಯಾನ ರೂ.2500/- ಗಳಂತೆ ಗುತ್ತಿಗೆ ದರವನ್ನು ಹೆಚ್ಚಿಸಿ ನವೀಕರಿಸಬಹುದೆಂದು ಉಪ ಆಯುಕ್ತರು (ಪಶ್ಚಿಮ) ರವರು ತಿಳಿಸಿರುತ್ತಾರೆ. ಅಂಚೆ ಕಾರ್ಯಾಲಯವು ಸಾರ್ವಜನಿಕರಿಗೆ ಅನುಕೂಲವಾಗುವ ಕಛೇರಿಯಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಮೇಲಿನಂತೆ ಗುತ್ತಿಗೆ ದರವನ್ನು ಪರಿಷ್ಕರಿಸಿ ಗುತ್ತಿಗೆ ಅವಧಿಯನ್ನು ಮುಂದುವರೆಸಬಹುದೆಂದು ಉಪ ಆಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ಕಲಂ 176 ರ (6) ಹಾಗೂ (ಬಿ)II ಪ್ರಕಾರ ಒಂದು ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಮಾನ್ಯ ಆಯುಕ್ತರಿಗೆ ಇದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿ ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆಯುವುದು ಅವಶ್ಯಕವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ/129/ಟಿ.ಎಂ.ಡಿ/2002, ದಿನಾಂಕ:02-06-2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದಲ್ಲಿ ನೀಡಿದ್ದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆ ಸಂಖ್ಯೆ:ಉ.ಆ/ಕಂ/ಪಿಆರ್/115/01-02,ದಿನಾಂಕ:01-03-2002 ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸ್ತುತ ಮಾರುಕಟ್ಟೆ ಬೆಲೆಗೆ ಕನಿಷ್ಠ ಶೇ.10% ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು ಎಂಬುದಾಗಿ ತಿಳಿಸಲಾಗಿರುತ್ತದೆ.

ಸರ್ಕಾರದ 2007 ರ ಮಾರ್ಗಸೂಚಿ ದರದಂತೆ ಆರ್.ಎಂ.ವಿ. ಗುಟ್ಟಹಳ್ಳಿ ಪ್ರದೇಶದಲ್ಲಿ ಖಾಲಿ ನಿವೇಶನಕ್ಕೆ ಚ.ಅ. ಒಂದಕ್ಕೆ ರೂ.3000/- ಬೆಲೆ ಇರುತ್ತದೆ. ರೂ.3000/- ಕ್ಕೆ ಶೇ.10% ಅಂದರೆ ರೂ.300/- ಗಳಾಗಲಿದ್ದು, ಒಟ್ಟು ಮೊತ್ತ ರೂ.3300/- ಗಳಾಗಿರುತ್ತದೆ. ನಿಗಧಿಪಡಿಸಿದ ಗುತ್ತಿಗೆ ಕರಾರಿನ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾಹೆಯಾನ ರೂ.3000/- ಗಳಂತೆ ನವೀಕರಿಸಲು ಸೂಕ್ತ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕರವರ ದಿನಾಂಕ:23-11-2010 ರ ಟಿಪ್ಪಣಿ ಹಾಗೂ

............................2

ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ ಹಾಗೂ ಆಯುಕರವರ ದಿನಾಂಕ:23-11-2010 ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ :10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ</u>:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 10 (252)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ವಾರ್ಡ್ ಸಂಖ್ಯೆ:155, ಗವಿಪುರ ಗುಟ್ಟಹಳ್ಳಿ ನಗರಪಾಲಿಕೆ ಸಮುದಾಯ ಭವನದಲ್ಲಿನ ತಳಮಹಡಿ ಕಟ್ಟಡದ ವಿಸ್ತೀರ್ಣ 6500 ಚದರ ಅಡಿ ಹಾಗೂ ಪೂರ್ವ ಭಾಗದ ಖಾಲಿ ನಿವೇಶನ 13,885 ಚದರ ಅಡಿಗಳನ್ನು, ಅದಮ್ಯ ಚೇತನ ಫೌಂಡೇಷನ್‌ರವರಿಗೆ, ಮಕ್ಕಳಿಗೆ ಬಿಸಿಯೂಟ ತಯಾರಿಸಿ ಉಚಿತವಾಗಿ ಶಾಲೆಗಳಿಗೆ ಸರಬರಾಜು ಮಾಡುವ ಉದ್ದೇಶಕ್ಕೆ 2004 ರಿಂದ 5 ವರ್ಷದ ಅವಧಿಗೆ ಉಚಿತವಾಗಿ ಗುತ್ತಿಗೆ ಆಧಾರದ ಮೇಲೆ ನೀಡಿದ್ದು, ದಿನಾಂಕ:25-05-2009 ರಿಂದ ಮತ್ತೆ 5 ವರ್ಷದ ಅವಧಿಗೆ ಮಾಸಿಕ ಗುತ್ತಿಗೆ ರೂ.1000/- ಕ್ಕೆ ನೀಡಲಾಗಿರುತ್ತದೆ. ಈ ಗುತ್ತಿಗೆ ಅವಧಿಯು ದಿನಾಂಕ:24-05-2014 ಕ್ಕೆ ಮುಕ್ತಾಯಗೊಳ್ಳಲಿದೆ.

ಅದಮ್ಯ ಚೇತನ ಫೌಂಡೇಷನ್‌ರವರು ನಿಗಧಿಪಡಿಸಲಾಗಿರುವ ಗುತ್ತಿಗೆ ಹಣಕ್ಕೆ ವಿನಾಯಿತಿ ನೀಡಿ ಗುತ್ತಿಗೆ ಅವಧಿಯನ್ನು 30 ವರ್ಷಗಳಿಗೆ ಮುಂದುವರೆಸಲು ಕೋರಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾಪಿಸಿರುತ್ತಾರೆ. ಈಗಾಗಲೇ ಮಾಸಿಕ ಗುತ್ತಿಗೆ ರೂ.1000/- ಕ್ಕೆ ನಿಗಧಿಪಡಿಸಿರುವಂತೆ ಮೇ 2014 ರ ನಂತರದ 5 ವರ್ಷಗಳಿಗೆ ನವೀಕರಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:27-12-2010 ರ ಟಿಪ್ಪಣಿಯನ್ನು ಒಪ್ಪುತ್ತಾ, ಗುತ್ತಿಗೆ ಅವಧಿಯನ್ನು 30 ವರ್ಷಗಳ ಅವಧಿಗೆ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ ಹಾಗೂ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿಯನ್ನು ಒಪ್ಪುತ್ತಾ, ಗುತ್ತಿಗೆ ಅವಧಿಯನ್ನು ಮೂವತ್ತು (30) ವರ್ಷಗಳ ಅವಧಿಗೆ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 11 (253)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:154 ರಲ್ಲಿರುವ 3ನೇ ಮುಖ್ಯರಸ್ತೆ, ಟಾಟಾ ಸಿಲ್ಕ್ ಫಾರಂ, ಕೆ.ಆರ್.ರಸ್ತೆಯಲ್ಲಿರುವ ಪಾಲಿಕೆಯ ಶಿಶುವಿಹಾರದಲ್ಲಿನ 400 ಚ.ಅಡಿ ಕಟ್ಟಡವನ್ನು ಮನೋನಂದನ ಟ್ರಸ್ಟ್ (ರಿ) ರವರಿಗೆ ಬುದ್ಧಿಮಾಂದ್ಯ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಸಲುವಾಗಿ ದಿನಾಂಕ:01-01-2007 ರಿಂದ 3 ವರ್ಷಗಳ ಅವಧಿಗೆ ಉಚಿತವಾಗಿ ಗುತ್ತಿಗೆಗೆ ನೀಡಿದ್ದು, ದಿನಾಂಕ:31-12-2009 ಕ್ಕೆ ಅವಧಿ ಮುಕ್ತಾಯಗೊಂಡಿರುತ್ತದೆ.

ಸದರಿ ಮನೋನಂದನ ಟ್ರಸ್ಟ್ (ರಿ) ರವರು ತಮ್ಮ ಮನವಿಯಲ್ಲಿ, ತಮ್ಮ ಸಂಸ್ಥೆಗೆ ನೀಡಿದ್ದ ಗುತ್ತಿಗೆ ಅವಧಿಯು ಮುಗಿದಿದ್ದು, ಈ ಸಂಸ್ಥೆಯು ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣವನ್ನು ಉಚಿತವಾಗಿ ನೀಡುತ್ತಿರುವುದರಿಂದ ಮತ್ತೆ ಮೂರು ವರ್ಷಗಳ ಅವಧಿಗೆ ಉಚಿತವಾಗಿ ಗುತ್ತಿಗೆಯನ್ನು ನವೀಕರಿಸುವಂತೆ ಕೋರಿರುತ್ತಾರೆ.

ವಲಯಾಧಿಕಾರಿಗಳು ಟ್ರಸ್ಟ್‌ವತಿಯಿಂದ ಬುದ್ಧಿಮಾಂದ್ಯ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ತರಬೇತಿ ಕಾರ್ಯಕ್ರಮ ನಡೆಸುತ್ತಿದ್ದು, ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆಯಾಗಿರುವುದಿಲ್ಲವೆಂದು, ಆದುದರಿಂದ, ಗುತ್ತಿಗೆ ಅವಧಿಯನ್ನು ಮುಂದಿನ ವರ್ಷಗಳ ಅವಧಿಗೆ ಉಚಿತವಾಗಿ ನವೀಕರಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸದರಿ ಸಂಸ್ಥೆಯು ಸಾಮಾಜಿಕ ಕಳಕಳಿಯಂತಹ ಕಾರ್ಯಕ್ರಮ ನಡೆಸುತ್ತಿದ್ದು, ಗುತ್ತಿಗೆ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಜಾರಿಗೆ ಬರುವಂತೆ ನಾಮಮಾತ್ರ ಮಾಸಿಕ ಗುತ್ತಿಗೆ ಹಣ ರೂ.100/- ಗಳನ್ನು ನಿಗಧಿಪಡಿಸಿ, 5 ವರ್ಷಗಳ ಅವಧಿಗೆ ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸಂಸ್ಥೆಯವರಿಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ ಹಾಗೂ ಆಯುಕ್ತರವರ ದಿನಾಂಕ:09-12-2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

............................2

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆಯನ್ನು ಸದರಿ ಸಂಸ್ಥೆಗೆ 30 ವರ್ಷಗಳ ಅವಧಿಗೆ ನೀಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವುದು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:10–02–2011 ರ ನಿರ್ಣಯವನ್ನು ಒಪ್ಪುತ್ತಾ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆಯನ್ನು ಸದರಿ ಸಂಸ್ಥೆಗೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 12 (255)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಹಲವಾರು ಜನಪರ ಕಾರ್ಯಕ್ರಮಗಳ ಪೈಕಿ ಕಡುಬಡ ಜನರಿಗೆ ಆರೋಗ್ಯ ವಿಮಾ ಸೌಲಭ್ಯ ಒದಗಿಸುವುದು ಸಹ ಅತ್ಯಂತ ಮುಖ್ಯವಾದ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ವಾಸಿಸುವ ಎಲ್ಲಾ ಬಡವರು ಮತ್ತು ಅತ್ಯಂತ ಕಡುಬಡವ ವರ್ಗದವರಾದ ಬಿಪಿಎಲ್ ಕಾರ್ಡು ಹೊಂದಿರುವವರಿಗೆ, ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಿಗೆ, ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಆರೋಗ್ಯ ವಿಮಾ ಸೌಲಭ್ಯವನ್ನು ನೀಡುವ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಈ ಕಾರ್ಯಕ್ರಮದ ಸದುದ್ದೇಶವಾಗಿರುತ್ತದೆ. ಈ ಕಾರ್ಯಕ್ರಮದ ಅನುಷ್ಠಾನದಿಂದ ಈಗಾಗಲೇ ಪ್ರಜ್ವಲಿತವಾಗಿರುವ ಶ್ರೀಮಂತರಿಗೋಸ್ಕರ ಮಾತ್ರ ಸುಸಜ್ಜಿತ ಖಾಸಗಿ ಆಸ್ಪತ್ರೆಯೆನ್ನುವ ಮನೋಭಾವವನ್ನು ತೊಡೆದುಹಾಕಿ, ಬಡವರು ಮತ್ತು ಅತ್ಯಂತ ಕಡುಬಡವರ ಅನಾರೋಗ್ಯದ ಪರಿಸ್ಥಿತಿಯಲ್ಲಿ ಈಗಾಗಲೇ ಸರ್ಕಾರದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಡಿಯಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಎಲ್ಲಾ ಸುಸಜ್ಜಿತ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಉತ್ತಮ ಗುಣಮಟ್ಟದ ಉಚಿತವಾದ ರೋಗ ತಪಾಸಣೆ ಮತ್ತು ಉಚಿತವಾಗಿ ಚಿಕಿತ್ಸೆಯನ್ನು ಪಡೆಯಬಹುದಾಗಿರುತ್ತದೆ.

ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಿಪಿಎಲ್ ಕಾರ್ಡುದಾರರಿಗೆ, ಸಫಾಯಿ ಕರ್ಮಚಾರಿಗಳು, ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರು, ಕೊಳಚೆ ಪ್ರದೇಶಗಳ ನಿವಾಸಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಹಾಗೂ ಇತರರಿಗೆ ಆರೋಗ್ಯ ವಿಮೆ ಸೌಲಭ್ಯವಾದ "ಸುವರ್ಣ ಆರೋಗ್ಯ ಸುರಕ್ಷಾ ವಿಮೆ" ವಿಮಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:407/2009-10, ದಿನಾಂಕ:16-11-2009 ರಲ್ಲಿ ಅನುಮೋದನೆಯನ್ನು ನೀಡಲಾದ ಮೇರೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಪೌರ ಕಾರ್ಮಿಕರಿಗೆ, ಸಫಾಯಿ ಕರ್ಮಚಾರಿ, ಬಿ.ಪಿ.ಎಲ್ ಕಾರ್ಡ್‌ದಾರರಿಗೆ, ಕೊಳಚೆ ಪ್ರದೇಶಗಳ ನಿವಾಸಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಯೋಜನೆಯನ್ನು ಹಮ್ಮಿಕೊಳ್ಳಲು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/600/ಎಂಎನ್‌ವೈ/2009(ಭಾ-1) ದಿನಾಂಕ:12-10-2010 ರಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ ಆ.ಕು.ಕ 216 ಸಿಜಿಇ 2008, ದಿನಾಂಕ:20-02-2009 ರ ಆದೇಶದ ಮಾದರಿಯಲ್ಲಿ ಹಾಗೂ ಅದರಲ್ಲಿ ನಿರ್ದಿಷ್ಟ ಪಡಿಸಿರುವ ಮಾರಣಾಂತಿಕ ಖಾಯಿಲೆಗಳಿಗೆ ಸಂಬಂಧಿಸಿದಂತೆ ಸುವರ್ಣ ಆರೋಗ್ಯ ಸುರಕ್ಷಾ ಎಂಬ ಆರೋಗ್ಯ ವಿಮೆ ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬ ವರ್ಗದವರಿಗೆ, ಸಫಾಯಿ ಕರ್ಮಚಾರಿಗಳಿಗೆ, ಪೌರ ಕಾರ್ಮಿಕರು, ಆಟೋ ಚಾಲಕರು ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆಂದು ಸೂಚಿಸಿ ಕೆಳಕಂಡ ಷರತ್ತುಗಳನ್ನು ವಿಧಿಸಿರುತ್ತಾರೆ

1. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವ ಮೇಲ್ಕಂಡ ವರ್ಗದವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸತಕ್ಕದ್ದು.
2. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಅನುಷ್ಠಾನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸುವುದು.

...........................2

3. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಗೆ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು.

4. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಂಖ್ಯೆ: ಆ.ಕು.ಕ 216 ಸಿಜಿಇ 2008, ದಿನಾಂಕ:20-02-2009 ರ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಮಾದರಿಯಲ್ಲಿಯೆ, ಯೋಜನೆ ಸಿದ್ದಪಡಿಸಿ ರೂಪರೇಷು ರೂಪಿಸಿಕೊಂಡು ಜಾರಿಗೊಳಿಸಲು ಕ್ರಮ ವಹಿಸುವುದು.

ಮೇಲ್ಕಂಡ ಸರ್ಕಾರದ ಆದೇಶದಲ್ಲಿನ ಷರತ್ತುಗಳಂತೆ ಕಾರ್ಯಕ್ರಮವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಿ, ವಲಯ ಹಂತದಲ್ಲಿ ಅನುಷ್ಠಾನ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಬಹುದಾಗಿದೆ.

ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಚಿಸಿರುವ ಟ್ರಸ್ಟ್‌ನಡಿ ಕಾರ್ಯನಿರ್ವಹಿಸಲು "ಕಾರ್ಯಕಾರಿ ಸಮಿತಿ" ಯನ್ನು ರಚಿಸಲಾಗಿದೆ. ಈ ಸಮಿತಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಮುಖ್ಯಸ್ಥರಾಗಿದ್ದು, ಇತರೆ ಇಲಾಖೆಗಳ ಕಾರ್ಯದರ್ಶಿಗಳು ಸದಸ್ಯರಾಗಿರುತ್ತಾರೆ. ಸದರಿ ಸಮಿತಿಗೆ ನಿಗಧಿಪಡಿಸಿರುವ ಎಲ್ಲಾ ಜವಾಬ್ದಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡುವ ಸುವರ್ಣ ಆರೋಗ್ಯ ಸುರಕ್ಷ" ಯೋಜನೆಯ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ಸರ್ಕಾರದ ಮಟ್ಟದಲ್ಲಿ ಕಾರ್ಯಕಾರಿ ಸಮಿತಿ ಇರುವುದರಿಂದ ಈ ಯೋಜನೆಗೆ ತಗಲುವ ಪೂರ್ಣ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೇ ಭರಿಸುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನುಷ್ಠಾನದ ನೇರ ಹೊಣೆ ಹೊಂದಿರುವುದರಿಂದ ಪಾಲಿಕೆಯಲ್ಲೂ ಈ ಕೆಳಕಂಡಂತೆ Governing Council ರಚಿಸಬಹುದಾಗಿರುತ್ತದೆ.

| | |
|---|---|
| ಪೂಜ್ಯ ಮಹಾಪೌರರು | ಗೌರವಾಧ್ಯಕ್ಷರು |
| ಮಾನ್ಯ ಆಯುಕ್ತರು | ಕಾರ್ಯಾಧ್ಯಕ್ಷರು |
| ವಿಶೇಷ/ಅಪರ ಆಯುಕ್ತರು (ಆಡಳಿತ) | ಸದಸ್ಯರು |
| ಜಂಟಿ/ಉಪ ಆಯುಕ್ತರು (ಆರೋಗ್ಯ) | ಸದಸ್ಯರು |
| ಪ್ರಧಾನ ಅಭಿಯಂತರರು | ಸದಸ್ಯರು |
| ಮುಖ್ಯ ಲೆಕ್ಕಾಧಿಕಾರಿಗಳು | ಸದಸ್ಯರು |
| ಜಂಟಿ /ಉಪ ಆಯುಕ್ತರು (ಕಲ್ಯಾಣ) | ಸದಸ್ಯರು |
| ಮುಖ್ಯ ಆರೋಗ್ಯಾಧಿಕಾರಿಗಳು | ಕಾರ್ಯದರ್ಶಿಗಳು |
| ಯೋಜನಾ ಸಮನ್ವಯಾಧಿಕಾರಿಗಳು | ಸಹ ಕಾರ್ಯದರ್ಶಿಗಳು |

ಮೇಲ್ಕಂಡ ಸಮಿತಿಯು ಈ ಕೆಳಕಂಡಂತೆ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿದೆ.

1 ಸದರಿ ಯೋಜನೆಗೆ ತಗಲುವ ವೆಚ್ಚವನ್ನು ಪಾಲಿಕೆಯ ಆಯವ್ಯಯದಲ್ಲಿ ನಿಗಧಿಪಡಿಸಿರುವಂತೆ ಸುವರ್ಣ ಆರೋಗ್ಯ ಟಸ್ಟ್‌ಗೆ ಬಿಡುಗಡೆ ಮಾಡಲು ಅಗತ್ಯ ಕ್ರಮಕೈಗೊಳ್ಳುವುದು.

2 ಈ ಯೋಜನೆಯ ಅನುಷ್ಠಾನದ ಎಲ್ಲಾ ಮೇಲ್ವಿಚಾರಣೆ ಕೈಗೊಳ್ಳುವುದು.

............................3

3 ಈ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಪರಿಶೀಲಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನವನ್ನು Monitoring ಮಾಡುವುದು.

4 ಈ ಯೋಜನೆಯ ಅನುಷ್ಠಾನ ಮಾಡುವ ಎಲ್ಲಾ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

5. ಈ ಯೋಜನೆಯ ಉತ್ತಮ ಅನುಷ್ಠಾನಕ್ಕಾಗಿ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡುವುದು ಅಲ್ಲದೆ ಯಾವುದೇ ಮಾರ್ಪಾಡುಗಳನ್ನು ಮಾಡಬೇಕಾಗಿ ಸರ್ಕಾರ ಆದೇಶದಲ್ಲಿ ಬಂದಲ್ಲಿ ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದ ದಿನಾಂಕ:12–01–2010 ರಲ್ಲಿ ತಿಳಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅರ್ಹ ಕುಟುಂಬಗಳಿಗೆ ಪ್ರತಿ ವರ್ಷ ಅಂದಾಜು ಸಂಖ್ಯೆ ಹಾಗೂ ಬೇಕಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ. ಸದರಿ ಮೊತ್ತವನ್ನು ಸುವರ್ಣ ಆರೋಗ್ಯ ಟ್ರಸ್ಟ್‌ಗೆ ಬಿಡುಗಡೆ ಮಾಡಬೇಕಾಗುತ್ತದೆ. 2010–11ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ವೆಚ್ಚ ಭರಿಸಬೇಕಾಗುತ್ತದೆ.

| | | |
|---|---|---|
| 1. | ಕೊಳಚೆ ಪ್ರದೇಶದ ನಿವಾಸಿಗಳು | 136486 |
| 2. | ಸಫಾಯಿ ಕರ್ಮಚಾರಿಗಳು | 16069 |
| 3. | ಆಟೋ ಚಾಲಕರು | 99956 |
| 4. | ಪೌರ ಕಾರ್ಮಿಕರು | 7935 |
| 5. | ಗುತ್ತಿಗೆ ಪೌರ ಕಾರ್ಮಿಕರು | 12000 |
| 6. | ಬಿಪಿಎಲ್ ಕಾರ್ಡ್‌ದಾರರು | 423600 |
| | **ಒಟ್ಟು ಮೊತ್ತ** | **6,96,046x300= 20,88,13,800–00** |

ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ನೋಡಿಕೊಳ್ಳಲು ಸರ್ಕಾರದ ಆರೋಗ್ಯ ಇಲಾಖೆಯ ಆದೇಶದಲ್ಲಿ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸಲ್ಲಿದ್ದು, ಅದೇ ರೀತಿ ಪಾಲಿಕೆಯಲ್ಲಿ ವಲಯ ಮಟ್ಟದಲ್ಲಿ ಅಪರ / ಜಂಟಿ ಆಯುಕ್ತರು ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬಹುದಾಗಿದೆ. ಪಾಲಿಕೆಯಲ್ಲಿ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಸಮಿತಿಯನ್ನು ಈ ಕೆಳಕಂಡಂತೆ ರಚಿಸಬಹುದಾಗಿದೆ.

| | |
|---|---|
| ಅಪರ/ಜಂಟಿ ಆಯುಕ್ತರು | ಅಧ್ಯಕ್ಷರು |
| ಉಪ ಆಯುಕ್ತರು | ಸದಸ್ಯರು |
| ಮುಖ್ಯ ಅಭಿಯಂತರರು | ಸದಸ್ಯರು |
| ಕಲ್ಯಾಣಾಧಿಕಾರಿಗಳು | ಸದಸ್ಯರು |
| ಆರೋಗ್ಯಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಮೇಲ್ಕಂಡ ಉಸ್ತುವಾರಿ ಸಮಿತಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿದೆ.

1. ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ವಲಯ ವ್ಯಾಪ್ತಿಗೆ ಬರುವ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

............................4

2. ಆಯ್ಕೆಯಾದ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಧೃಡೀಕರಣದೊಂದಿಗೆ ಸಲ್ಲಿಸತಕ್ಕದ್ದು.
3. ಈ ಯೋಜನೆಯಡಿಯಲ್ಲಿ ಪಾಲಿಕೆಯ ವ್ಯಾಪ್ತಿಗೆ ಬರುವ ಆಸ್ಪತ್ರೆ ಹಾಗೂ ವಿಮಾ ಸಂಸ್ಥೆಗಳ ಆಯ್ಕೆಯಾದ ಫಲಾನುಭವಿಗಳಿಗೆ ಉತ್ತಮ ಸೇವೆ ನೀಡುತ್ತಿರುವ ಬಗ್ಗೆ ಪರಿಶೀಲಿಸುವುದು.
4. ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಸಮಸ್ಯೆಗಳು ಬಂದಲ್ಲಿ ಸರ್ಕಾರದ ಕಾರ್ಯಕಾರಿ ಸಮಿತಿಗೆ ವರದಿ ಸಲ್ಲಿಸುವುದು.
5. ಆಯ್ಕೆಯಾದ ಫಲಾನುಭವಿಗಳಿಗೆ ಬಯೋ ಮೆಟ್ರಿಕ್ ಗುರುತಿನ ಚೀಟಿ ನೀಡಲು ಕ್ರಮ ಕೈಗೊಳ್ಳತಕ್ಕದ್ದು.

ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಲಯ ಅಪರ ಅಥವಾ ಜಂಟಿ ಆಯುಕ್ತರುಗಳಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಬಹುದಾಗಿದೆ. ಆಯ್ಕೆ ಮಾಡಿ / ಆಯ್ಕೆ ಮಾಡುವಾಗ ಒಂದು ಕುಟುಂಬಕ್ಕೆ ವಿಮಾ ವಂತಿಕೆ ವರ್ಷಕ್ಕೆ ರೂ.300/- ಗಳನ್ನು ಮಾತ್ರ ಪಾವತಿಸುವುದರಿಂದ ಕುಟುಂಬದ 5 ಸದಸ್ಯರನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸದರಿ ವಿಮಾ ಮೊತ್ತವನ್ನು ಎರಡು ಕಂತುಗಳಲ್ಲಿ ರೂ.150/- ರಂತೆ ಸುವರ್ಣ ಆರೋಗ್ಯ ಟ್ರಸ್ಟಿಗೆ ಪಾವತಿ ಮಾಡಬೇಕಾಗತಕ್ಕದ್ದು.

1. <u>ಖಾಯಂ ಪೌರ ಕಾರ್ಮಿಕರು</u>:- ಪಟ್ಟಿಯು ವಲಯ ಕಛೇರಿಗಳಲ್ಲಿ ಲಭ್ಯವಿದ್ದು, ಈ ಬಗ್ಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ಧೃಡೀಕರಣ ಪಡೆದು ಆಯ್ಕೆ ಮಾಡಬಹುದಾಗಿದೆ. ಆಯ್ಕೆ ಮಾಡುವಾಗ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ನೌಕರರು ಇದ್ದಲ್ಲಿ ಸದರಿ ಕುಟುಂಬದಲ್ಲಿ ಒಬ್ಬರನ್ನು ಮಾತ್ರ ಕುಟುಂಬದವರೆಂದು ಪರಿಗಣಿಸತಕ್ಕದ್ದು. ಖಾಯಂ ಪೌರ ಕಾರ್ಮಿಕರಿಗೆ ಈಗಾಗಲೇ ಮ್ಯಾನೇಜ್ಡ್ ಹೆಲ್ತ್ ಕೇರ್ ಕಾರ್ಯಕ್ರಮವಿರುವುದರಿಂದ, ಈ ಬಗ್ಗೆ ಪೌರ ಕಾರ್ಮಿಕರಿಂದ ಸಮ್ಮತಿ ಪಡೆದು ಯಾವ ಯೋಜನೆಗೆ ಸದರಿಯವರು ಸಮ್ಮತಿಸಿದರೆ ಸದರಿ ಯೋಜನೆಯಡಿಯಲ್ಲಿ ಮಾತ್ರ ಪರಿಗಣಿಸತಕ್ಕದ್ದು.

2. <u>ಗುತ್ತಿಗೆ ಪೌರ ಕಾರ್ಮಿಕರು</u>: ಸಂಬಂಧಪಟ್ಟಂತೆ ವಲಯ ಕಛೇರಿಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಬಟವಾಡೆ ಅಧಿಕಾರಿಗಳು ಗುತ್ತಿಗೆ ಪೌರ ಕಾರ್ಮಿಕರ ವಿವರಗಳನ್ನು ಹೊಂದಿದ್ದು, ಸದರಿ ಗುತ್ತಿಗೆ ಪೌರ ಕಾರ್ಮಿಕರಿಗೆ ಪಿಎಫ್ / ಇ.ಎಸ್.ಐ ಖಾತೆ ಹೊಂದಿರುವವರು ಮಾತ್ರ ಯೋಜನೆಗೆ ಅರ್ಹರಾಗಿರುತ್ತಾರೆ. ಸದರಿಯವರು ಕರ್ತವ್ಯದಿಂದ ಬಿಡುಗಡೆಗೊಂಡ ನಂತರ ಅವರ ಅರ್ಹತೆಯನ್ನು ರದ್ದುಪಡಿಸತಕ್ಕದ್ದು. ಈ ಮಾಹಿತಿ ದೃಡೀಕರಿಸಿದ ಕುಟುಂಬದವರನ್ನು ಆಯ್ಕೆ ಮಾಡತಕ್ಕದ್ದು
3. <u>ಸಫಾಯಿ ಕರ್ಮಚಾರಿಗಳು</u>: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಫಾಯಿ ಕರ್ಮಚಾರಿಗಳ ಸಮೀಕ್ಷೆ ಕೈಗೊಂಡಿದ್ದು, ಅನುಮೋದನೆ ಪಟ್ಟಿ ಆಯಾಯಾ ವಲಯ ಕಛೇರಿಗಳಲ್ಲಿ ಲಭ್ಯವಿದ್ದು, ಸದರಿ ಕುಟುಂಬದವರಿಗೆ ಮಾತ್ರ ಆಯ್ಕೆ ಮಾಡತಕ್ಕದ್ದು. ಸದರಿ ಸಮೀಕ್ಷೆಯ ಕುಟಂಬದ ವರದಿಯ ವಿವರಗಳನ್ನು ಕೇಂದ್ರ ಕಛೇರಿಯ ಕಲ್ಯಾಣ ವಿಭಾಗದಲ್ಲಿ ಸಹ ಪರಿಶೀಲಿಸಿ ಖಾತ್ರಿ ಮಾಡಕೊಳ್ಳತಕ್ಕದ್ದು
4. <u>ಬಿಪಿಎಲ್ ಕುಟುಂಬದವರು</u>: ಸರ್ಕಾರದ ಆಹಾರ ಮತ್ತು ನಾಗರೀಕ ಇಲಾಖೆಯು ಈಗಾಗಲೇ ಬಿಪಿಎಲ್ ಕುಟುಂಬದ ಸಮೀಕ್ಷೆ ಕೈಗೊಂಡು ಬಿಪಿಎಲ್ ಕಾರ್ಡ್ ವಿತರಿಸಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಾಗರೀಕರ ಬಿಪಿಎಲ್ ಕಾರ್ಡ್ ಅನ್ನು ಕೂಲಂಕುಷವಾಗಿ ಪರಿಶೀಲಿಸಿ ಕಾರ್ಡ್ ನ ಮೇಲೆ ಬಿಪಿಎಲ್ ಎಂದು ನಮೂದಿಸಿದ ಕುಟುಂಬದವರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ಧೃಡೀಕರಣ ಪಡೆಯತಕ್ಕದ್ದು
5. <u>ಆಟೋ ಚಾಲಕರು</u>:-ಆಯಾ ವಲಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಾಸದ ದೃಢೀಕರಣದೊಂದಿಗೆ ಆರ್.ಟಿ.ಓ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಪೋಲೀಸ್ ಕಮೀಷನರ್ ಇವರಿಂದ ಪರವಾನಗಿ ಹೊಂದಿರುವ ಕುಟುಂಬದವರಾಗಿರಬೇಕು. ಸದರಿಯವರು ಪರವಾನಗಿಯ ಧೃಡೀಕೃತ ಫೋಟೊ ಪರವಾನಗಿಯನ್ನು ಸಲ್ಲಿಸಿದ ಆಟೋ ಚಾಲಕರನ್ನು ಆಯ್ಕೆ ಮಾಡಬಹುದಾಗಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಧೃಢೀಕರಣ ಪಡೆಯತಕ್ಕದ್ದು

.............................5

6. <u>ಕೊಳಚೆ ಪ್ರದೇಶದ ನಿವಾಸಿಗಳು</u>: ಬಿಪಿಎಲ್ ಕಾರ್ಡ್ ಹೊಂದಿದವರಾಗಿದ್ದರೆ ಈಗಾಗಲೇ ಕ್ರಮ ಸಂಖ್ಯೆ ತಿಳಿಸಿರುವಂತೆ ಆಯ್ಕೆ ಮಾಡಬಹುದಾಗಿದೆ. ಅಲ್ಲದೆ ಪಾಲಿಕೆಯಿಂದ ಕೊಳಚೆ ಪ್ರದೇಶಗಳ ಸಮೀಕ್ಷೆ ಕಾರ್ಯ ಕೈಗೊಂಡಿದ್ದು, ಸಮೀಕ್ಷೆಯಲ್ಲಿ ಪರಿಗಣಿಸುವ ಕುಟುಂಬದವರನ್ನು ಆಯ್ಕೆ ಮಾಡತಕ್ಕದ್ದು. ಕೊಳಚೆ ಪ್ರದೇಶ ನಿವಾಸಿಗಳಿಗೆ ಆದಾಯದ ಮಿತಿಯನ್ನು ಪಾಲಿಕೆಯು ಆಗಿಂದಾಗ್ಗೆ ನಿಗಧಿಗೊಳಿಸಬಹುದಾಗಿದೆ.
7. ಮೇಲೆ ತಿಳಿಸಿದ ಫಲಾನುಭವಿಗಳು ಈಗಾಗಲೇ ಸರ್ಕಾರದ / ಸರ್ಕಾರೇತರ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆಯುತ್ತಿದ್ದಲ್ಲಿ, ಅಂತಹವರನ್ನು ಈ ಯೋಜನೆಯಡಿ ಪರಿಗಣಿಸತಕ್ಕದ್ದಲ್ಲ
8. ಆಯ್ಕೆಯಾದ ಕುಟುಂಬದ ಸದಸ್ಯರುಗಳುಗೆ ಬಯೋ ಮೆಟ್ರಿಕ್ ಹೆಲ್ತ್ ಕಾರ್ಡ್ ಗುರುತಿನ ಚೀಟಿಯನ್ನು ನೀಡಲು ಅಗತ್ಯ ಕ್ರಮಕೈಗೊಳ್ಳತಕ್ಕದ್ದು.
9. ಕಾರ್ಯಕ್ರಮದ ಅನುಷ್ಠಾನದಲ್ಲಿ ಸರ್ಕಾರದ ಮಾರ್ಗಸೂಚಿಗಳು ಹಾಗೂ ಪಾಲಿಕೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅನುಷ್ಠಾನ ಮಾಡುವ ವಲಯ ಅಪರ / ಜಂಟಿ ಆಯುಕ್ತರುಗಳೇ ನೇರ ಜವಾಬ್ದಾರರು.
10. ಈ ಕಾರ್ಯಕ್ರಮವನ್ನು ಪಾಲಿಕೆಯ ಆದಾಯದ ಅನುಗುಣವಾಗಿ ಅನುಷ್ಠಾನ ಮಾಡಬಹುದಾಗಿದೆ ಹಾಗೂ ಸರ್ಕಾರದ ಆದೇಶದಲ್ಲಿ ಈ ಕಾರ್ಯಕ್ರಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ವಿಸ್ತರಿಸಿದ್ದಲ್ಲಿ ಅದರೊಂದಿಗೆ ಪಾಲಿಕೆಗೆ ಕಾರ್ಯಕ್ರಮವು ಸಹ ವಿಲೀನವಾಗುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಿಪಿಎಲ್ ಕುಟಂಬದವರಿಗೆ ಹಾಗೂ ಇತರರಿಗೆ ಸುವರ್ಣ ಆರೋಗ್ಯ ಸುರಕ್ಷಾ ವಿಮಾ ಯೋಜನೆಯ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಮುಖಾಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಾರ್ಯಕ್ರಮ ಅನುಷ್ಠಾನ ಕೈಗೊಳ್ಳಲು ಅನುಮತಿ ನೀಡುಲಾಗಿರುತ್ತದೆ ಎನ್ನುವ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ಟಿಪ್ಪಣಿ ದಿನಾಂಕ:25-02-2010 ರಂದು ಒಪ್ಪಿರುತ್ತಾರೆ.

ಅದರಂತೆ, ಆಯ್ಕೆಯಾದ ಕುಟುಂಬದ ಸದಸ್ಯರಿಗೆ ವಿವಿಧೊದ್ದೇಶ Biometric health card ಗುರುತಿನ ಚೀಟಿ ನೀಡುವ ಕಾರ್ಯಕ್ರಮವಿದ್ದು, ತತ್ಸಂಬಂಧಕ್ಕೆ ಆಯುಕ್ತರಿಂದ ದಿನಾಂಕ:10/06/2010 ರಂದು ಆಡಳಿತಾತ್ಮಕ ಅನುಮೋದನೆ ಮತ್ತು ಮುಖ್ಯ ಲೆಕ್ಕಾಧಿಕಾರಿಗಳಿಂದ ಕಾಮಗಾರಿ ಸಂಕೇತ ಪಡೆದು E-Procurment, ಟೆಂಡರ್ ಕರೆಯಲಾಗಿರುತ್ತದೆ. ಪ್ರಾಥಮಿಕ ಹಂತದಲ್ಲಿ 2 ಲಕ್ಷದ ಸ್ಮಾರ್ಟ್ ಕಾರ್ಡ್‌ನ್ನು ವಿತರಿಸುವ ಗುರಿ ಹೊಂದಿದ್ದು ಸದರಿ ಕೆಲಸವನ್ನು ನಿರ್ವಹಿಸಲು 4 ಸಂಸ್ಥೆಯವರು ಭಾಗವಹಿಸಿದ್ದು, ಇದರಲ್ಲಿ ಮೇ॥Radiant infosystems ರವರು ಅತಿ ಕಡಿಮೆ ದರ ನಮೂದಿಸಿರುತ್ತಾರೆ. ಆದರೆ, ಸದರಿಯವರು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಗುತ್ತಿಗೆ ಪ್ರಸ್ತಾವನೆಯಂತೆ ದರಪಟ್ಟಿ ನೀಡದಿರುವುದರ ಮೇರೆಗೆ ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಪ್ರಸ್ತಾವನೆಯಲ್ಲಿ ಕೇಳಿರುವ ಎಲ್ಲಾ ಅಂಶಗಳು ಬಹು ಮುಖ್ಯ ಎಂದು ಟೆಂಡರ್ ತಾಂತ್ರಿಕ ಸಮಿತಿ ಮತ್ತು ಪರಿಣಿತಿ ತಾಂತ್ರಿಕ ಸಮಿತಿ ಅಭಿಪ್ರಾಯಪಟ್ಟಿರುವುದರ ಮೇರೆಗೆ, ಸದರಿ ಸಂಸ್ಥೆಯವರ ಆರ್ಥಿಕ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿ, ಅದರಂತೆ 2ನೇ ಅತಿ ಕಡಿಮೆ ದರ ನಮೂದಿಸಿರುವ ಸಂಸ್ಥೆಯಾದ HCL ರವರು ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವ ಅಂಶಗಳನ್ನು ಬೇಕಾದಲ್ಲಿ ನೀಡುವುದಾಗಿ ಹಾಗೂ ಅದರ ದರಗಳನ್ನು ಬೇರೆಯಾಗಿ ನಮೂದಿಸಿರುವುದರ ಮೇರೆಗೆ Conditional tender ನೀಡಿರುವುದರಿಂದ, ಅವರ ದರ ಪಟ್ಟಿಯನ್ನು ತಿರಸ್ಕರಿಸಲಾಗಿ, 3ನೇ ಅತಿಕಡಿಮೆ ದರ ಪಟ್ಟಿ ನೀಡಿರುವ ಸಂಸ್ಥೆಯಾದ ಮೇ॥ Effia Technologies ರವರ ಪ್ರಸ್ತಾವನೆಯನ್ನು ತಾಂತ್ರಿಕ ಸಮಿತಿ ಮತ್ತು ಪರಿಣಿತ ತಾಂತ್ರಿಕ ಸಮಿತಿಯು ಅಂಗೀಕರಿಸಿದ್ದು, ಸದರಿ ಸಂಸ್ಥೆಯವರು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಗಣಿಸಿದ ಮೇರೆಗೆ, ಅವರ ಆರ್ಥಿಕ ಪ್ರಸ್ತಾವನೆಯನ್ನು ಒಪ್ಪಬಹುದು ಎಂದು ತೀರ್ಮಾನಕ್ಕೆ ಬರಲಾಯಿತು ಹಾಗೂ ಅವರು ಸಲ್ಲಿಸಿರುವ ದರಪಟ್ಟಿ ಈ ಕೆಳಕಂಡಂತಿರುತ್ತದೆ.

............................6

## ವಿವರಗಳು

| Sl. No. | Item Description | Make | Unit | Qty. | Price per unit (Rs.) Supply | Price per unit (Rs.) O & M per month | Total Cost (Rs.) Supply | Total Cost (Rs.) Annual O & M | Total price in Rs.(Supply+ Annual O & M) |
|---|---|---|---|---|---|---|---|---|---|
| (a) | (b) | | (c) | (d) | (e) | (f) | (g=e*d) | (h=d*f*12) | (i=h+g) |
| **1** | **Data collection, survey of each Hospital/Health centers and report/work methodology submission** | | **LS** | **1** | **275,750** | **N.A** | **275,750** | **N.A** | **275,750** |
| | | | | | | | | | |
| **2** | **Health Centre** | | **Sets** | **50** | **755,106** | **7,722** | **37,755,300** | **4,633,241** | **42,388,541** |
| | Computer | | Nos. | 50 | 39,000 | 406 | 1,950,000 | 243,750 | 2,193,750 |
| | UPS | | Nos. | 50 | 16,250 | 169 | 812,500 | 101,563 | 914,063 |
| | Back-up Device | | Nos. | 50 | 8,450 | 88 | 422,500 | 52,813 | 475,313 |
| | Biometric Scanner | | Nos. | 50 | 4,163 | 43 | 208,163 | 26,020 | 234,183 |
| | VGA Camera | | Nos. | 50 | 1,638 | 17 | 81,900 | 10,238 | 92,138 |
| | Smart Card Reader | | Nos. | 50 | 887 | 9 | 44,363 | 5,545 | 49,908 |
| | Smart Card Printer | | Nos. | 50 | 87,360 | 910 | 4,368,000 | 546,000 | 4,914,000 |
| | Handheld Smart Card Reader with fingerprint verification | | Nos. | 50 | 79,170 | 825 | 3,958,500 | 494,813 | 4,453,313 |
| | Installation charges | | Nos. | 50 | 13,788 | - | 689,375 | - | 689,375 |
| | Softwares and licences | | Nos. | 50 | 504,400 | 5,254 | 25,220,000 | 3,152,500 | 28,372,500 |
| | **Data Centre** | | **Sets** | **1** | **8,644,350** | **214,915** | **8,644,350** | **2,578,975** | **11,223,325** |
| | Servers (web, application, database, mirrors, back-up, SAN Controller, Switch, cluster, Load Balancer, Automated Tape Library) | 1.04 | Set | 1 | 6,175,000 | 64,323 | 6,175,000 | 771,875 | 6,946,875 |
| | Data cemtre set-up costs (Laserjet Printers, UPS-8 hrs, Furniture, Network Infrastructure, Desktops for staff) | | Set | 1 | 390,000 | 4,063 | 390,000 | 48,750 | 438,750 |

...........................7

| | | | | | | | | | |
|---|---|---|---|---|---|---|---|---|---|
| | Server OS, Back up Software Licence Fees, other softwares and applications | | Set | 1 | 1,391,000 | 89,167 | 1,391,000 | 1,070,000 | 2,461,000 |
| | Help Desk Services | | Set | 1 | 688,350 | 57,363 | 688,350 | 688,350 | 1,376,700 |
| | | | | | | | | | |
| | **Network** | | **Sets** | **1** | **1,657,500** | **344,688** | **1,657,500** | **4,136,250** | **5,793,750** |
| | Network charges as per SLAs | 256kps at health centre ad 68 mbps at data centre | Sets | 1 | 1,657,500 | 344,688 | 1,657,500 | 4,136,250 | 5,793,750 |
| | **Services** | | | | 11,552,306 | 401,042 | 11,552,306 | 4,812,500 | 16,364,806 |
| | Datacentre Management and application development and reporting services | Specify Duration | Man months | | - | 401,042 | - | 4,812,500 | 4,812,500 |
| | Project Management charges | Specify Duration | Man Months | | 6,092,456 | - | 6,092,456 | - | 6,092,456 |
| | Data entry services | Specify Duration | Man Months | | 5,459,850 | - | 5,459,850 | - | 5,459,850 |
| | | | | | | | | | |
| | **Training and promotion charges** | | **LS** | **1** | **1,380,129** | **-** | **1,380,129** | **-** | **1,380,129** |
| | Training and promotion charges | | LS | 1 | 1,380,129 | - | 1,380,129 | - | 1,380,129 |
| **3** | **Smart Cards** | | **Nos.** | **1 lakh** | **37** | **0.38** | **3,658,200** | **457,275** | **4,115,475** |
| **4** | **Information Kiosk** | | **Nos.** | **50** | **195,000** | **2,031** | **9,750,00** | **1,218,750** | **10,968,750** |
| | | | | | | | | | |
| TOTAL COST FOR IMPLEMENTATION OF SMART CARD HEALTH INSURANCE PROGRAM INCLUDING ALL THE TAXES AND DUTIES BUT EXCLUDING SERVICE TAX FOR PRICE SHEET | | | | | | | | | **92,510,526** |

..........................8

ಈ ದರಪಟ್ಟಿಯಲ್ಲಿ ಯೋಜನೆಗೆ ಸಂಬಂಧಿಸಿದ ಎಲ್ಲಾ ಐಟಂಗಳನ್ನು ಗಣನೆಗೆ ತೆಗೆದುಕೊಂಡಿದ್ದು, ಪಾಲಿಕೆಯು ತೆಗೆದುಕೊಳ್ಳುವ ಐಟಂಗಳಿಗೆ ಮಾತ್ರ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಪಾವತಿಸಬಹುದು. ಈ ಯೋಜನೆಯ ಅನುಷ್ಠಾನದ Biometric ಗುರುತಿನ ಚೀಟಿ ವಿತರಿಸುವುದರಿಂದ ಬಡವರಿಗೆ ಮತ್ತು ಅತಿ ಬಡವರಿಗೆ ಸರ್ಕಾರದ ಕಾರ್ಯಕ್ರಮಗಳನ್ನು ಈ ಗುರುತಿನ ಚೀಟಿಯಲ್ಲಿ ಅಳವಡಿಸಿಕೊಂಡು, ಎಲ್ಲಾ ಬಡವರು ಮತ್ತು ಅತ್ಯಂತ ಕಡು ಬಡವರನ್ನು ಗುರುತಿಸಿ, ಎಲ್ಲಾ ಆರೋಗ್ಯ ಕಲ್ಯಾಣ ಕಾರ್ಯಕ್ರಮಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳನ್ನು ಎಲ್ಲಾ ಫಲಾನುಭವಿಗಳಿಗೆ ಸಮಾನಾಂತರವಾಗಿ ನೀಡುವ ಉದ್ದೇಶದಿಂದ ಈ ಯೋಜನೆಯನ್ನು ಸಿದ್ಧಪಡಿಸಲಾಗಿರುತ್ತದೆ. ಸದರಿ ಯೋಜನೆಯಿಂದ ಈಗಾಗಲೇ ತಿಳಿಸಿರುವಂತೆ, ಫಲಾನುಭವಿಗಳಿಗೆ ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುವ ಸರ್ಕಾರಿ/ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿರುತ್ತದೆ. ಈ ಗುರುತಿನ ಚೀಟಿ ನೀಡುವುದರಿಂದ, ಬಡವರಲ್ಲಿ ಮತ್ತು ಅತ್ಯಂತ ಕಡುಬಡವರಲ್ಲಿ ಕಂಡು ಬರುವ ಆರ್ಥಿಕ, ಸಾಮಾಜಿಕ ಉದ್ಯೋಗಿಗಳ ಪರಿಸ್ಥಿತಿಯನ್ನು ಕಲೆ ಹಾಕಿ ಪಾಲಿಕೆಯಲ್ಲಿ ಕಲ್ಯಾಣ ಕಾರ್ಯಾಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ. ಈಗಾಗಲೇ ಕೇಂದ್ರ, ರಾಜ್ಯ ಸರ್ಕಾರದ ಮತ್ತು ಪಾಲಿಕೆಯ ಹಲವು ಆರೋಗ್ಯ ಕಾರ್ಯಕ್ರಮಗಳನ್ನು ಗುರುತಿನ ಚೀಟಿಯಲ್ಲಿ ಅಳವಡಿಸಿಕೊಂಡು ಯೋಜನೆಯನ್ನು ರೂಪಿಸಲು ಸಹಾಯವಾಗುತ್ತದೆ.

ಈ ಹಿನ್ನಲೆಯಲ್ಲಿ, ಸದರಿ ಯೋಜನೆಗೆ Biometric Smart Card ನ್ನು ವಿತರಿಸಲು ಮೇ॥ Effia Technologies ರವರು ಆಯ್ಕೆಯಾಗಿದ್ದು, ಈ ಯೋಜನೆಗೆ ಪ್ರಥಮ ಹಂತದಲ್ಲಿ 1 ಲಕ್ಷ ಕಾರ್ಡ್ ವಿತರಿಸಲು Data collection & survey ಗೆ ರೂ.2,75,750=00, ಆರೋಗ್ಯ ಕೇಂದ್ರಕ್ಕೆ ಅಳವಡಿಸುವ ಗಣಕಯಂತ್ರ ಮತ್ತು ಇನ್ನಿತರೆ ಸಾಮಾಗ್ರಿಗಳಿಗೆ ರೂ.4,23,88,541=00 ಗಳಾಗಲಿದ್ದು, Data Centre set-up ಗೆ ರೂ.1,12,23,325=00, Network charges ಗೆ ರೂ.57,93,750=00, Data centre management & application development Services Rs.1,63,64,806=00, Smart Cards ನೀಡಲು ರೂ.41,15,475=00, Information Kiosk ಗೆ ರೂ.1,09,68,750=00 ಹಾಗೂ ಪ್ರತಿ ವರ್ಷಕ್ಕೆ ಶೇ.7.5% ರಷ್ಟು compound basis ನಂತೆ ಒಟ್ಟು 5 ವರ್ಷಕ್ಕೆ ಕಡಿಮೆ ದರ ನಮೂದಿಸಿರುತ್ತಾರೆ. ಅದರಂತೆ ದ್ವಿತೀಯ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.1,91,74,766=00, ತೃತೀಯ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,06,12,872=00, ನಾಲ್ಕನೇ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,21,58,839=00 ಮತ್ತು ಐದನೇ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,38,20,751=00 ಖರ್ಚಾಗುತ್ತದೆ. ಅಲ್ಲದೇ ಇತರೇ ಖರ್ಚುಗಳ ವಿವರವನ್ನು ಸವಿಸ್ತಾರವಾಗಿ ನಮೂದಿಸಲಾಗಿರುತ್ತದೆ ಹಾಗೂ ಪ್ರಥಮ ಹಂತದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಕುಟುಂಬಕ್ಕೆ ಸರಾಸರಿ ರೂ.300/- ಗಳಂತೆ 2 ಲಕ್ಷ ಕುಟುಂಬಗಳಿಗೆ ಒಟ್ಟು ರೂ.6,00,00,000=00 (ಆರು ಕೋಟಿ) ಗಳನ್ನು ಪಾವತಿಸಬೇಕಾಗಿರುತ್ತದೆ. ಮುಂದುವರಿದಂತೆ ರೂ.300/- ಪ್ರತಿ ಕುಟುಂಬಕ್ಕೆ 5 ಜನರಿಗೆ ಹೆಚ್ಚಿನ ಸ್ಮಾರ್ಟ್ ಕಾರ್ಡ್‌ನ್ನು ವಿತರಿಸಿದ್ದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಖರ್ಚನ್ನು ನಿಗಧಿಪಡಿಸಿರುವ 2010-11 ರ ಆಯವ್ಯಯದಲ್ಲಿ ಭರಿಸಬಹುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02-02-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08-02-2011 ರ ನಿರ್ಣಯ ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 21-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:21-02-2011 ರ ನಿರ್ಣಯವನ್ನು ಒಪ್ಪುವುದು".

..........................9

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರ ಶಿಫಾರಸ್ಸು ಮಾಡುವ ಹಾಗೂ ಫಲಾನುಭವಿಗಳಿಂದ ಅಫಿಡವಿಟ್ ಪಡೆದುಕೊಂಡು ಕಾರ್ಯಕ್ರಮಗಳನ್ನು ಜಾರಿಗೆ ತರುವುದೆಂದು ಸಭೆಯು ತೀರ್ಮಾನಿಸಿತು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:21–02–2011 ರ ನಿರ್ಣಯವನ್ನು ಒಪ್ಪುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರ ಶಿಫಾರಸ್ಸು ಮಾಡುವ ಹಾಗೂ ಫಲಾನುಭವಿಗಳಿಂದ ಅಫಿಡವಿಟ್ ಪಡೆದುಕೊಂಡು ಕಾರ್ಯಕ್ರಮಗಳನ್ನು ಜಾರಿಗೆ ತರುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 13 (254)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಬಹುಮಹಡಿ ವಾಹನ ನಿಲುಗಡೆ (ಎಂ.ಎಲ್.ಸಿ.ಪಿ) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ವಿಸ್ ಚಾಲೆಂಜ್ ಮೋಡ್‌ನಲ್ಲಿ ನಿರ್ಮಿಸುವ ಬಗ್ಗೆ ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ದಿನಾಂಕ:05-01-2008 ರಂದು ಪಾಲಿಕೆಯ ಅಯುಕ್ತರಿಗೆ ಸ್ವಯಂಚಾಲಿತ ಬಹುಮಹಡಿ ವಾಹನ ನಿಲುಗಡೆಗಳನ್ನು 1) ಗಾಂಧೀ ಬಜಾರ್ ಹೂವಿನ ಮಾರುಕಟ್ಟೆ 2) ರಸಲ್ ಮಾರುಕಟ್ಟೆ ಹತ್ತಿರ, ಶಿವಾಜಿನಗರ 3) ಸುಖ್ ಸಾಗರ್ ಹೋಟೆಲ್ ಎದುರು, ಗಾಂಧೀನಗರ 4) ಹಳೇ ಕೇಂದ್ರ ಕಾರಾಗೃಹ, ಗಾಂಧೀನಗರ 5) ಜೆ.ಸಿ.ರಸ್ತೆ 6) ಎಸ್.ಪಿ.ಕ್ರಾಸ್ ರಸ್ತೆ, ಎಲ್.ಐ.ಸಿ. ಬಿಲ್ಡಿಂಗ್ ಹಿಂಭಾಗ ನಿರ್ಮಿಸಲು ಪ್ರಸ್ತಾವನೆಗಳನ್ನು ಸ್ವಿಸ್ ಚಾಲೆಂಜ್ ಮೋಡ್‌ನಲ್ಲಿ ಸಲ್ಲಿಸಿರುತ್ತಾರೆ.

ಪುನ: ದಿನಾಂಕ:07-01-2008 ರಂದು ಸದರಿ ಸಂಸ್ಥೆಯವರು ಕಾಮರಾಜ ರಸ್ತೆಯಲ್ಲಿ ಕಬ್ಬನ್ ರಸ್ತೆಯಿಂದ ಡಿಸ್ಪೆನ್ಸರಿ ರಸ್ತೆ ಭಾಗದಲ್ಲಿ ನಿರ್ಮಿಸಲು ಪ್ರಸ್ತಾಪಿಸಿರುತ್ತಾರೆ. ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ದಿನಾಂಕ:31-01-2008 ರಂದು 6 ಸ್ಥಳಗಳಲ್ಲಿ ತಾಂತ್ರಿಕ ವಾಣಿಜ್ಯ ಪ್ರಸ್ತಾವನೆಗಳನ್ನು ಸಲ್ಲಿಸಲು 60 ದಿನಗಳ ಕಾಲಾವಧಿಯನ್ನು ಕೋರಿರುತ್ತಾರೆ. ವಿಶೇಷ ಆಯುಕ್ತರು (ಯೋಜನೆ) ರವರು ಮೆ॥ ಎಸ್.ಪಿ.ಎಮ್.ಎಲ್ ಸಂಸ್ಥೆಯವರು ದಿನಾಂಕ:05-01-2008 ರಂದು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಗಣಿಸಿ, ದಿನಾಂಕ:19-02-2008 ರಂದು ಮೇಲ್ಕಂಡ ಆರು ಸ್ಥಳಗಳಿಗೆ ಡಿಪಿಆರ್ ಸಲ್ಲಿಸಲು 60 ದಿನಗಳ ಕಾಲಾವಕಾಶವನ್ನು ನೀಡಿರುತ್ತಾರೆ.

ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ದಿನಾಂಕ:31-03-2008 ರಂದು ಮನವಿಯನ್ನು ಸಲ್ಲಿಸಿ, ಜಯನಗರ ಪುಟ್ಟಣ್ಣ ಕಣಗಲ್ ಥಿಯೇಟರ್ ಮತ್ತು ಹಾಸ್ಮ್ಯಾಟ್ ಆಸ್ಪತ್ರೆಯ ಹತ್ತಿರ, ಜೆ.ಸಿ.ರಸ್ತೆ ಬದಲಾಗಿ ಡಿಪಿಆರ್ ತಯಾರಿಸಲು ಅನುಮತಿಯನ್ನು ಕೋರಿರುತ್ತಾರೆ. ಸದರಿ ಸಂಸ್ಥೆಯವರು ದಿನಾಂಕ:04-04-2008 ರಂದು ಜೆ.ಸಿ. ರಸ್ತೆಯನ್ನು ಹೊರತುಪಡಿಸಿ, ಐದು ಸ್ಥಳಗಳಲ್ಲಿ ಟೋಪೋಗ್ರಾಫಿಕಲ್ ಮತ್ತು ಕಾನ್‌ಸೆಪ್ಟ್ ಪ್ಲಾನ್ ತಯಾರಾಗಿದೆ ಎಂದು ತಿಳಿಸಿರುತ್ತಾರೆ. ದಿನಾಂಕ:10-04-2008 ರಂದು ವಾಣಿಜ್ಯ ಉತ್ಪತ್ತಿಯಾಗುವ ಹಾಗೂ ಯೋಜನೆ ವೈಯಬಲ್ ಆಗುವಂತೆ ಬದಲಿ ಸ್ಥಳಗಳನ್ನು ನೀಡಲು ಕೋರಿರುತ್ತಾರೆ.

ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ದಿನಾಂಕ:10-05-2008 ರಂದು ಸ್ವಯಂಚಾಲಿತ ಬಹುಮಹಡಿ ವಾಹನ ನಿಲುಗಡೆಗಳನ್ನು 1) ಸುರಾನ ಕಾಲೇಜ್ ಎದುರು, ಕೆಂಗೇರಿ 2) ಫುಟ್‌ಬಾಲ್ ಸ್ಟೇಡಿಯಂ ಎದುರು, ರಿಚ್‌ಮಂಡ್ ರಸ್ತೆ 3) ಆರ್.ಟಿ.ಓ ಕಛೇರಿ ಎದುರು ಯಲಹಂಕ 4) ಅಂಬೇಡ್ಕರ್ ಕಾಲೇಜ್ ಪಕ್ಕದಲ್ಲಿ, ಹೊರವರ್ತುಲ ರಸ್ತೆ ನಾಗರಭಾವಿಯಲ್ಲಿ ನಿರ್ಮಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ. ಅಂತಿಮವಾಗಿ ದಿನಾಂಕ: 06-06-2008 ರಂದು ಆರ್.ಎಫ್.ಪಿ ಮತ್ತು ಕನ್‌ಸೆಷನ್ ಕರಾರು ಪತ್ರವನ್ನು ಒಳಗೊಂಡಂತೆ ಡಿ.ಪಿ.ಆರ್ ಮತ್ತು ಡಿ.ಟಿ.ಡಿ.ಯನ್ನು ಸಲ್ಲಿಸಿರುತ್ತಾರೆ.

ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ದಿನಾಂಕ:21-08-2008 ರಂದು 1) ಗಾಂಧೀಬಜಾರ್, ಹೂವಿನ ಮಾರುಕಟ್ಟೆ 2) ಸುಖ್ ಸಾಗರ್ ಹೋಟೆಲ್ ಎದುರು, ಗಾಂಧೀನಗರ 3) ರಸಲ್ ಮಾರುಕಟ್ಟೆ ಎದುರು, ಶಿವಾಜಿನಗರ ಗಳನ್ನು ಕೈಬಿಡಲು ಮತ್ತು ಜೆ.ಸಿ.ರಸ್ತೆಯಲ್ಲಿ ಸ್ವಯಂಚಾಲಿತ ಬಹುಮಹಡಿ ನಿಲುಗಡೆಯನ್ನು ಡಿ.ಪಿ.ಆರ್.ನಲ್ಲಿ ಸೇರಿಸಲು ಒಪ್ಪಿರುತ್ತಾರೆ. ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ಆರ್.ಎಫ್.ಪಿ. ಮತ್ತು ಡ್ರಾಫ್ಟ್ ಕನ್ಸೆಕ್ಷನ್ ಕರಾರನ್ನು ಒಳಗೊಂಡಿರುವ ಡಿ.ಪಿ.ಆರ್.ಗಳನ್ನು ದಿನಾಂಕ:20-10-2008 ರಂದು ಈ ಕೆಳಕಂಡ 08 ಸ್ಥಳಗಳಿಗೆ ಸಲ್ಲಿಸಿರುತ್ತಾರೆ.

1. ಗಾಂಧೀನಗರದ ಫ್ರೀಡಮ್ ಪಾರ್ಕ್ (ಹಳೇ ಕೇಂದ್ರ ಕಾರಾಗೃಹ)
2. ಎಸ್.ಪಿ.ಕ್ರಾಸ್ ರಸ್ತೆ
3. ಜೆ.ಸಿ. ರಸ್ತೆ
4. ಸುರಾನ ಕಾಲೇಜ್ ಎದುರು, ಕೆಂಗೇರಿ
5. ಫುಟ್‌ಬಾಲ್ ಕ್ರೀಡಾಂಗಣ ಎದುರು, ರಿಚ್‌ಮಂಡ್ ಟೌನ್.
6. ಅಂಬೇಡ್ಕರ್ ಕಾಲೇಜ್ ಪಕ್ಕದಲ್ಲಿ, ಓ.ಆರ್.ಆರ್. ನಾಗರಭಾವಿ.
7. ಆರ್.ಟಿ.ಓ. ಕಛೇರಿ ಎದುರು, ಯಲಹಂಕ
8. ಸಂತೆ ಮೈದಾನ ಯಲಹಂಕ

ದಿನಾಂಕ:01-12-2008 ರಂದು ಮಹಾನಗರ ಪಾಲಿಕೆಯ ತಾಂತ್ರಿಕ ಸಲಹೆಗಾರ ಸಮಿತಿಯು, ಮೇಲ್ಕಂಡ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಡಿ.ಬಿ.ಓ.ಓ.ಟಿ ಆಧಾರದ ದಲ್ಲಿ ಸ್ವಿಸ್ ಚಾಲೆಂಜ್ ಮೋಡ್‌ನಲ್ಲಿ ತಾತ್ವಿಕವಾಗಿ ಒಪ್ಪಿರುತ್ತಾರೆ. ಮಾನ್ಯ ಆಡಳಿತಗಾರರು ದಿನಾಂಕ:10-12-2008 ರಂದು ವಿಷಯದ ಸಂಖ್ಯೆ:773/08-09 ರ ನಡವಳಿಗಳಲ್ಲಿ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಅನುಮೋದಿಸಿರುತ್ತಾರೆ ಹಾಗೂ ಎಂಟು ಸ್ಥಳಗಳಲ್ಲಿ ಸ್ವಯಂಚಾಲಿತ ಬಹುಮಹಡಿ ವಾಹನ ನಿಲುಗಡೆಗಳನ್ನು ನಿರ್ಮಿಸಲು ಡಿ.ಪಿ.ಆರ್.ಗಳನ್ನು ಸ್ವಿಸ್ ಚಾಲೆಂಜ್ ಮೋಡ್‌ನಲ್ಲಿ ಸಲ್ಲಿಸಲು ದಿನಾಂಕ:29-12-2008 ರಂದು ಸೂಚಿಸಲಾಗಿದೆ. ಅಂತಿಮವಾಗಿ ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ಆರ್.ಎಫ್.ಪಿ. ಮತ್ತು ಡ್ರಾಫ್ಟ್ ಕಾನ್ಸೆಷನ್ ಕರಾರು ಒಳಗೊಂಡಿರುವ ಡಿ.ಪಿ.ಆರ್. ಗಳನ್ನು ದಿನಾಂಕ:12-01-2009 ರಂದು ಸಲ್ಲಿಸಿರುತ್ತಾರೆ.

ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ದಿನಾಂಕ:12-05-2009 ರಂದು ಪತ್ರವನ್ನು ನೀಡಿ ಸಲಹೆಗಾರರು, ಗುತ್ತಿಗೆದಾರರು ಹಾಗೂ ಸಿಬ್ಬಂದಿ ವೆಚ್ಚವನ್ನು ಒಳಗೊಂಡಂತೆ ಪಾಲಿಕೆ ವತಿಯಿಂದ ಕನಿಷ್ಠ ರೂ.150.00 ಲಕ್ಷಗಳನ್ನು ಮರುಪಾವತಿಸಲು ಕೋರಿರುತ್ತಾರೆ. ಪಾಲಿಕೆಯ ಆಯುಕ್ತರು ಸಂಸ್ಥೆಯವರ ಪ್ರಸ್ತಾವನೆಯನ್ನು ಅನುಮೋದಿಸಲು ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆ ವತಿಯಿಂದ ಏಕಗವಾಕ್ಷಿ ಸಮಿತಿ ಮುಂದೆ ಸಲ್ಲಿಸಿರುತ್ತಾರೆ.

ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು 2008ನೇ ಸಾಲಿನಲ್ಲಿ ಸಲ್ಲಿಸಿರುವ ಪ್ರಸ್ತಾವನೆಗಳು ಸ್ಥಳದ ಅಭಾವ, ಪಾಲಿಕೆಯ ಸ್ವತ್ತು ಇಲ್ಲದ ಪ್ರಯುಕ್ತ ಹಾಗೂ ಇತರ ಉದ್ದೇಶಗಳಿಗೆ ಸ್ಥಳಗಳನ್ನು ಉಪಯೋಗಿಸಿಕೊಂಡಿರುವ ಕಾರಣ ತಿರಿಸ್ಕರಸಬಹುದೆಂದು ತೀರ್ಮಾನಿಸಲಾಗಿದೆ. ದಿನಾಂಕ:02-08-2010 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಮೂಲಭೂತ ಅಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಏಕಗವಾಕ್ಷಿ ಸಮಿತಿಯ ಮುಂದೆ ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ತಿರಸ್ಕರಿಸಲು ಅಥವಾ ಸಂಸ್ಥೆಯವರನ್ನು ಪುನ: ಹೊಸ ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಬಹುದೆಂದು ಪಾಲಿಕೆ ವತಿಯಿಂದ ಮಂಡಿಸಲಾಗಿತ್ತು. ದಿನಾಂಕ:02-08-2010 ರಂದು ನಡೆದ ಸಭೆಯಲ್ಲಿ ಯೋಜನೆಯ ಅವಶ್ಯಕತೆ ಬಗ್ಗೆ ಸ್ಪಷ್ಟ ಅಭಿಪ್ರಾಯ ತಿಳಿಸಲು ಪಾಲಿಕೆಗೆ ಸೂಚಿಸಲಾಗಿದೆ.

ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ಸ್ವಿಸ್ ಚಾಲೆಂಜ್ ಮೋಡ್‌ನಲ್ಲಿ ಒಟ್ಟು 08 ಸ್ಥಳಗಳಲ್ಲಿ ಬಹುಮಹಡಿ ವಾಹನ ನಿಲುಗಡೆಯನ್ನು ನಿರ್ಮಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿರುವ ಪೈಕಿ ಫ್ರೀಡಮ್ ಪಾರ್ಕ್ ಮತ್ತು ಎಸ್.ಪಿ.ಕ್ರಾಸ್ ರಸ್ತೆಯಲ್ಲಿ ವಾಣಿಜ್ಯ ಸಂಕೀರ್ಣಗಳಿಲ್ಲದೇ ಬಹು ಮಹಡಿ ವಾಹನ ನಿಲುಗಡೆಯನ್ನು ನಿರ್ಮಿಸಲು ಅವಕಾಶವಿರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಂಸ್ಥೆಯವರು ಜಂಟಿ ಪರಿವೀಕ್ಷಣೆ ಮಾಡಲಾಗಿ ಮೂರು ಸ್ಥಳಗಳಲ್ಲಿ ಪಾಲಿಕೆಯ ಸ್ವತ್ತು ಇಲ್ಲದೇ ಇರುವುದು ಕಂಡುಬಂದಿರುತ್ತದೆ.

ದಿನಾಂಕ:20-08-2010 ರಂದು ಮೇಲ್ಕಂಡ ಸಂಸ್ಥೆಯವರು ಮನವಿಯನ್ನು ಸಲ್ಲಿಸಿ, ಪಾಲಿಕೆಯ ಸ್ವತ್ತು ಇಲ್ಲದೇ ಇರುವ ಸ್ಥಳಗಳನ್ನು ಬಿಟ್ಟು ಉಳಿದ 03 ಸ್ಥಳಗಳಾದ (1) ಜೆ.ಸಿ.ರಸ್ತೆ (2) ಕೆಂಗೇರಿ ಸುರಾನ ಕಾಲೇಜ್

.........................3

ಎದುರು (3) ರಿಚ್‌ಮಂಡ್ ಟೌನ್ ಫುಟ್‌ಬಾಲ್ ಕ್ರೀಡಾಂಗಣ ಎದುರು ಬಹುಮಹಡಿ ವಾಹನ ನಿಲುಗಡೆಯನ್ನು ನಿರ್ಮಿಸಲು ಪ್ರಸ್ತಾವನೆಗಳನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಕೋರಿರುತ್ತಾರೆ. ದಿನಾಂಕ:24-09-2010 ರಂದು ಮುಖ್ಯ ಅಭಿಯಂತರರು (ಮಾರಕಟ್ಟೆ ಕೋಶ) ರವರು ಫ್ರೀಡಮ್ ಪಾರ್ಕ್‌ನಲ್ಲಿ ಬಹುಮಹಡಿ ವಾಹನ ನಿಲುಗಡೆಯನ್ನು ಕಲ್ಪಿಸಲು 13ನೇ ಹಣಕಾಸು ಯೋಜನೆಯಲ್ಲಿ ಅನುದಾನ ಬಿಡುಗಡೆಯಾಗಿರುವ ಕಾರಣ ಮೆ॥ ಎಸ್.ಪಿ.ಎಂ.ಎಲ್ ಪ್ರಸ್ತಾವನೆಗಳಿಂದ ಕೈಬಿಡಲು ಕೋರಿರುತ್ತಾರೆ.

ದಿನಾಂಕ:09-09-2010 ರಮದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಪತ್ರವನ್ನು ಬರೆದು ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣಗಳನ್ನು ನಿರ್ಮಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಲು ಆದೇಶಿಸಿರುತ್ತಾರೆ. ದಿನಾಂಕ:01-10-10 ರಂದು ಸಂಸ್ಥೆಯವರು ಪತ್ರವನ್ನು ಬರೆದು, ಮೂರು ಸ್ಥಳಗಳಲ್ಲಿ ವಾಹನ ನಿಲುಗಡೆ ಸಂಕೀರ್ಣಗಳನ್ನು ಪಾಲಿಕೆ ವತಿಯಿಂದ ಅನುಮತಿ ಪತ್ರ ನೀಡಿದ ದಿನಾಂಕದಿಂದ 18 ತಿಂಗಳುಗಳಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

ಪುನ: ದಿನಾಂಕ:20-12-2010 ರಂದು ಮನವಿಯನ್ನು ಸಲ್ಲಿಸಿ 1) ಜೆ.ಸಿ.ರಸ್ತೆ 2) ಸುರಾನ ಕಾಲೇಜ್ ಎದುರು, ಕೆಂಗೇರಿ 3) ಫುಟ್‌ಬಾಲ್ ಸ್ಟೇಡಿಯಂ ಎದುರು, ರಿಚ್‌ಮಂಡ್ ಟೌನ್‌ನಲ್ಲಿ ಸ್ವಯಂಚಾಲಿತ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣಗಳನ್ನು ನಿರ್ಮಿಸುವ ಪ್ರಸ್ತಾವನೆಗಳನ್ನು ಸರ್ಕಾರ ಮಟ್ಟದಲ್ಲಿನ ಏಕಗವಾಕ್ಷಿ ಸಮಿತಿ ಮುಂದೆ ಅನುಮೋದನೆಗಾಗಿ ಪಾಲಿಕೆ ವತಿಯಿಂದ ಸಲ್ಲಿಸಲು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಕೆಳಕಂಡ ಎರಡು ಪ್ರಸ್ತಾವೆನಗಳ ಬಗ್ಗೆ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-01-2011 ರ ಟಿಪ್ಪಣಿ.

1. ಎಂಟು (08) ಸ್ಥಳಗಳ ಪೈಕಿ ಮೂರು ಸ್ಥಳಗಳಾದ (1) ಜೆ.ಸಿ.ರಸ್ತೆ (2) ಕೆಂಗೇರಿ ಸುರಾನ ಕಾಲೇಜ್ ಎದುರು (3) ರಿಚ್‌ಮಂಡ್ ಟೌನ್ ಫುಟ್‌ಬಾಲ್ ಕ್ರೀಡಾಂಗಣ ಎದುರು ನಿರ್ಮಿಸಲು ಮತ್ತು ಉಳಿದ 05 ಸ್ಥಳಗಳನ್ನು ಪುನ: ಗುರುತಿಸಲು ಸಂಸ್ಥೆಯವರಿಗೆ ಸೂಚಿಸಬಹುದು ಹಾಗೂ ಅದರಂತೆ 35 ವರ್ಷಗಳ ಕಾಲಾವಧಿಗೆ ಡಿ.ಬಿ.ಓ.ಓ.ಟಿ. ಆಧಾರದ ಮೇರೆಗೆ ಸ್ವಿಸ್ ಚಾಲೆಂಜ್ ಮೋಡ್‌ನಲ್ಲಿ ಏಕಗವಾಕ್ಷಿ ಸಮಿತಿ ಎದುರು ಅನುಮೋದನೆಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಲು

ಅಥವಾ

2. ಮೆ॥ ಎಸ್.ಪಿ.ಎಂ.ಎಲ್ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ತಿರಸ್ಕರಿಸುವ ಬಗ್ಗೆ.

ಹಾಗೂ ಆಯುಕ್ತರ ದಿನಾಂಕ:01-01-2011 ರ ಟಿಪ್ಪಣಿಯಲ್ಲಿನ ಕ್ರಮ ಸಂಖ್ಯೆ:2 ಅನ್ನು ಅನುಮೋದಿಸಿರುವ (ಅಂದರೆ ಆಯುಕ್ತರು ತಿರಸ್ಕರಿಸಬಹುದೆಂದು ನೀಡಿರುವ ಟಿಪ್ಪಣಿಯನ್ನು ಅನುಮೋದಿಸಿದೆ) ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:10-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.............................4

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 10-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 256/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಲ್ಯಾಣ ಕಾಮಗಾರಿಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಫೆಬ್ರವರಿ-ಮಾರ್ಚ್ ತಿಂಗಳು ಆರಂಭಗೊಂಡಿದ್ದು, ಬೇಸಿಗೆ ಕಾಲವಾದ್ದರಿಂದ, ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ಪ್ರತಿ ವಾರ್ಡಿನ ಕೊಳಚೆ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ನೀರಿನ ಸಮಸ್ಯೆಯನ್ನು ಬಗೆಹರಿಸುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿದ್ದು, ಈ ಸಾಲಿನ ಬೇಸಿಗೆಯು ಈಗಾಗಲೇ ಪ್ರಾರಂಭಗೊಂಡಿದ್ದು, ಕೊಳಚೆ ಪ್ರದೇಶದ ನಿವಾಸಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಕೊಳಚೆ ಪ್ರದೇಶಗಳಲ್ಲಿ ಅಗತ್ಯತೆಗೆ ಅನುಗುಣವಾಗಿ ಪ್ರತಿ ವಾರ್ಡಿಗೆ ಗರಿಷ್ಠ ಮೂರು ಕೊಳವೆ ಬಾವಿಗಳನ್ನು ಕೊರೆದು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಕುಡಿಯುವ ನೀರಿನ ಸಂಪರ್ಕವನ್ನು ಕಲ್ಪಿಸುವ ಪ್ರಸ್ತಾವನೆಗೆ ಸೂಕ್ತ ನಿರ್ಣಯಕ್ಕಾಗಿ ಕೌನ್ಸಿಲ್ ಸಭೆಯ ಅನುಮೋದನೆ ಕೋರಿ ಮಂಡಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 21-02-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"2010-11ನೇ ಸಾಲಿನ ಆಯವ್ಯಯದ ಶೇಕಡ 22.75ರ ಅನುದಾನದಡಿಯಲ್ಲಿ ಕೊಳವೆ ಬಾವಿ ಕೊರೆಯುವ ವೆಚ್ಚವನ್ನು ಭರಿಸುವುದೆಂಬ ಮಾರ್ಪಾಡಿನೊಂದಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:21-02-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "2010-11ನೇ ಸಾಲಿನ ಆಯವ್ಯಯದ ಶೇಕಡ 22.75ರ ಅನುದಾನದಡಿಯಲ್ಲಿ ಕೊಳವೆ ಬಾವಿ ಕೊರೆಯುವ ವೆಚ್ಚವನ್ನು ಭರಿಸುವುದೆಂಬ ಮಾರ್ಪಾಡಿನೊಂದಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:21-02-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:24-02-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

**ವಿಷಯದ ಸಂಖ್ಯೆ: 257/2010-11**

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಹಿರಿಯ ರಾಜಕಾರಣಿ, ರಾಜಕೀಯ ಧುರೀಣರಾದ ಶ್ರೀ. ಎಂ.ಪಿ.ಪ್ರಕಾಶ್ ರವರು ದಿನಾಂಕ:09-02-2011 ರಂದು ದೈವಾಧೀನರಾದ ವಿಷಯವನ್ನು ಸಭೆಗೆ ತಿಳಿಸಲು ತುಂಬಾ ದು:ಖವಾಗುತ್ತದೆ. ದಿವಂಗತರು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದು, ಪಕ್ಷ ಭೇದ ಮರೆತು ದುಡಿದಂತಹ ಹಾಗೂ ಎಲ್ಲಾರ ಪ್ರೀತಿ ಪಾತ್ರರಾಗಿ ಅಜಾತಶತೃವಾಗಿದ್ದರು. ದಿವಂಗತರು 5 ಬಾರಿ ಕರ್ನಾಟಕ ವಿಧಾನಸಭೆಗೆ ಶಾಸಕರಾಗಿ ಆಯ್ಕೆಯಾಗಿದ್ದು, ಕರ್ನಾಟಕ ಸರ್ಕಾರದ ಗೃಹ ಸಚಿವರಾಗಿ, ಉಪ ಮುಖ್ಯ ಮಂತ್ರಿಗಳಾಗಿ, ವಿವಿಧ ಖಾತೆಗಳ ಸಚಿವರಾಗಿ ತಮ್ಮ ಅಮೂಲ್ಯ ಸೇವೆಯನ್ನು ನಾಡಿಗೆ ಸಲ್ಲಿಸಿರುತ್ತಾರೆ. ದಿವಂಗತರು ಪ್ರಕಾಶಕರಾಗಿ ಪುಸ್ತಕಗಳನ್ನು ಬರೆದಿದ್ದು, ರಂಗ ಕಲಾವಿದರಾಗಿ ಚಲನಚಿತ್ರದಲ್ಲಿ ನಟಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿರುತ್ತಾರೆ.

ದಿವಂಗತರು ನಾಡಿಗೆ ಸಲ್ಲಿಸಿರುವ ಸೇವೆಯನ್ನು ಇಂದು ನಾವು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀ. ಗಂಗಭೈರಯ್ಯ ರವರು, ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಹಿರಿಯ ರಾಜಕಾರಣಿ, ರಾಜಕೀಯ ಧುರೀಣರಾದ ಶ್ರೀ. ಎಂ.ಪಿ.ಪ್ರಕಾಶ್ ರವರು ದಿನಾಂಕ:09-02-2011 ರಂದು ದೈವಾಧೀನರಾದ ವಿಷಯವನ್ನು ಸಭೆಗೆ ತಿಳಿಸಲು ತುಂಬಾ ದು:ಖವಾಗುತ್ತದೆ. ದಿವಂಗತರು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದು, ಪಕ್ಷ ಭೇದ ಮರೆತು ದುಡಿದಂತಹ ಹಾಗೂ ಎಲ್ಲಾರ ಪ್ರೀತಿ ಪಾತ್ರರಾಗಿ ಅಜಾತಶತೃವಾಗಿದ್ದರು. ದಿವಂಗತರು 5 ಬಾರಿ ಕರ್ನಾಟಕ ವಿಧಾನಸಭೆಗೆ ಶಾಸಕರಾಗಿ ಆಯ್ಕೆಯಾಗಿದ್ದು, ಕರ್ನಾಟಕ ಸರ್ಕಾರದ ಗೃಹ ಸಚಿವರಾಗಿ, ಉಪ ಮುಖ್ಯ ಮಂತ್ರಿಗಳಾಗಿ, ವಿವಿಧ ಖಾತೆಗಳ ಸಚಿವರಾಗಿ ತಮ್ಮ ಅಮೂಲ್ಯ ಸೇವೆಯನ್ನು ನಾಡಿಗೆ ಸಲ್ಲಿಸಿರುತ್ತಾರೆ. ದಿವಂಗತರು ಪ್ರಕಾಶಕರಾಗಿ ಪುಸ್ತಕಗಳನ್ನು ಬರೆದಿದ್ದು, ರಂಗ ಕಲಾವಿದರಾಗಿ ಚಲನಚಿತ್ರದಲ್ಲಿ ನಟಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿರುತ್ತಾರೆ.

ದಿವಂಗತರು ನಾಡಿಗೆ ಸಲ್ಲಿಸಿರುವ ಸೇವೆಯನ್ನು ಇಂದು ನಾವು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಭಗವಂತನಲ್ಲಿ ಸಭೆಯು ಪ್ರಾರ್ಥಿಸುತ್ತದೆ".

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜ)

ಮಹಾಪೌರರು